# ಕರ್ನಾಟಕ ಸ್ಕೌಟ್ ಮತ್ತು ಗೈಡ್

ಮಾಸ ಪತ್ರಿಕೆ

# Karnataka Scout & Guide

Monthly Magazine




| Vol -66 | Issue-09 | September 2025 | Pages: 36 | Annual Subscription: ₹ 200/- |
|---|---|---|---|---|
| ಸಂಪುಟ: 66 | ಸಂಚಿಕೆ: 09 | ಸೆಪ್ಟೆಂಬರ್ 2025 | ಪುಟಗಳು: 36 | ವಾರ್ಷಿಕ ಚಂದ ರೂ. 200/- |


## ಗಾಂಧಿ ಜಯಂತಿಯ ಶುಭಾಶಯಗಳು



ಭಾರತದ ಪ್ರತಿಯೊಂದು ಮನೆಯಲ್ಲೂ
ಸ್ಕೌಟ್ಸ್ ಮತ್ತು ಗೈಡ್ಸ್‌ಗಳಂತಹ
ಮಕ್ಕಳಿರಬೇಕೆಂದು ನಾನು ಅಪೇಕ್ಷಿಸುತ್ತೇನೆ.

ನಿಮ್ಮನ್ನು ಹುಡುಕುವ
ಅತ್ಯುತ್ತಮ ಮಾರ್ಗವೆಂದರೆ
ಇತರರ ಸೇವೆಯಲ್ಲಿ
ನಿಮ್ಮನ್ನು ನೀವು ಕಳೆದುಕೊಳ್ಳುವುದು




ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು ಮತ್ತು ತರಬೇತಿ ನಾಯಕರುಗಳಿಗೆ ಸೆಪ್ಟೆಂಬರ್ 26 ರಂದು ರಾಜ್ಯ ಸಂಸ್ಥೆಯಿಂದ ಬೆಂಗಳೂರಿನ ರಾಜಭವನದಲ್ಲಿ ಏರ್ಪಡಿಸಿದ ಅಭಿನಂದನಾ ಸಮಾರಂಭದಲ್ಲಿ ಶ್ರೀ ಥಾವರ್‌ಚಂದ್ ಗೆಹ್ಲೋಟ್, ಮಾನ್ಯ ರಾಜ್ಯಪಾಲರು, ಕರ್ನಾಟಕ ಹಾಗು ಪೋಷಕರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಸಂಸ್ಥೆಯ ಹಿರಿಯ ನಾಯಕರುಗಳನ್ನು ಗೌರವಿಸಿ ಅಭಿನಂದಿಸಿದರು. ಕಾರ್ಯಕ್ರಮದಲ್ಲಿ ಮಾನ್ಯ ಮಾಜಿ ಸಚಿವರು ಹಾಗು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಷ್ಟ್ರೀಯ ಮುಖ್ಯ ಆಯುಕ್ತರಾದ ಡಾ. ಕೆ.ಕೆ. ಖಂಡೇಲ್ವಾಲ್, ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಆಯುಕ್ತರುಗಳಾದ ಶ್ರೀ ಎಂ.ಎ. ಖಾಲೀದ್, ಶ್ರೀಮತಿ ಗೀತಾ ನಟರಾಜ್, ದಕ್ಷಿಣ ಕನ್ನಡ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಎಂ. ಮೋಹನ್ ಆಳ್ವ ಉಪಸ್ಥಿತರಿದ್ದರು.




ಸೆಪ್ಟೆಂಬರ್ 20 ರಿಂದ 23ರ ವರೆಗೆ ಉಡುಪಿಯಲ್ಲಿ ನಡೆದ 45ನೇ ರಾಜ್ಯಮಟ್ಟದ ಕಬ್–ಬುಲ್‌ಬುಲ್ ಉತ್ಸವವನ್ನು ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಸ್ವಾಮೀಜಿ, ಅದಮಾರುಮಠ ಅವರು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಡಾ. ಎಲ್ಲಮ್ಮ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶ್ರೀ ಹರಿಭಟ್, ಉಪಾಧ್ಯಕ್ಷರು, ಆನಂದ ತೀರ್ಥ ಟ್ರಸ್ಟ್, ಶಾಲಾ ಪ್ರಾಂಶುಪಾಲರಾದ ಡಾ. ಗೀತಾ ಕೋಟ್ಯಾನ್ ಜಿಲ್ಲಾ ಆಯುಕ್ತರುಗಳಾದ ಶ್ರೀ ಜನಾರ್ಧನ್ ಕೊಡವೂರು, ಶ್ರೀಮತಿ ಜ್ಯೋತಿ ಜೆ.ಪೈ., ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ ಅಡಿಗ, ಕೋಶಾಧಿಕಾರಿ ಶ್ರೀ ಹರಿಪ್ರಸಾದ್‌ರೈ ಮತ್ತು ಇತರ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

## ಪೋಷಕರು
ಪಿ.ಜಿ.ಆರ್. ಸಿಂಧ್ಯ

## ಗೌರವ ಅಧ್ಯಕ್ಷರು
ಡಾ. ಗೊ.ರು. ಚನ್ನಬಸಪ್ಪ

## ಅಧ್ಯಕ್ಷರು
ಕೊಂಡಜ್ಜಿ ಬಿ. ಷಣ್ಮುಖಪ್ಪ

## ಉಪಾಧ್ಯಕ್ಷರು
ಡಾ. ಎಂ.ಕೆ. ಶ್ರೀಧರ್

## ಸಂಪಾದಕರು
ಕೆ. ಗಂಗಪ್ಪಗೌಡ

## ಸಹಸಂಪಾದಕರು
ಎನ್. ಶ್ರೀನಿವಾಸನ್

## ಸದಸ್ಯರು
ಮೋಹನ್ ಕೊಂಡಜ್ಜಿ
ಸಿ.ಪಿ. ಪರಮೇಶ್ವರ
ಎಂ.ಎನ್. ಷಡಕ್ಷರಿ
ಸಿ.ವಿ. ತಿರುಮಲರಾವ್
ಡಾ. ಮುಕ್ತಾ ಬಿ. ಕಾಗಲಿ

ಸಂಚಿಕೆಯ ವಾರ್ಷಿಕ ಚಂದಾ ರೂ. 200/–
ವಿದ್ಯಾಸಂಸ್ಥೆ ಹಾಗೂ ಸಂಘ–ಸಂಸ್ಥೆಗಳಿಗೆ
ವಾರ್ಷಿಕ ಚಂದಾ ರೂ. 200/–

ಚಂದಾಹಣವನ್ನು
ಸಂಪಾದಕರು, ಕರ್ನಾಟಕ ಸ್ಕೌಟ್ ಮತ್ತು ಗೈಡ್ ಮಾಸಪತ್ರಿಕೆ
ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ
#39, ಅರಮನೆ ರಸ್ತೆ, ಬೆಂಗಳೂರು – 560 001
ಇಲ್ಲಿಗೆ ಕಳುಹಿಸಲು ಕೋರಿದೆ.

ಕರ್ನಾಟಕ **ಸ್ಕೌಟ್** ಮತ್ತು **ಗೈಡ್** ಮಾಸಿಕ ವಾರ್ತಾಪತ್ರಿಕೆ

# KARNATAKA Scout & Guide
MONTHLY NEWS MAGAZINE

Vol: 66 Issue: 09 September 2025

## ಒಳಪುಟಗಳಲ್ಲಿ...

ರಾಜ್ಯ ಮುಖ್ಯ ಆಯುಕ್ತರ ನುಡಿ ...04
ಅಕ್ಟೋಬರ್ 2025ರ ಕಾರ್ಯಕ್ರಮ ಮತ್ತು ಚಟುವಟಿಕೆಗಳು ...06
ಸಂಪಾದಕೀಯ ...07
ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ತರಬೇತಿ ನಾಯಕರುಗಳಿಗೆ (ಸ್ಕೌಟ್ಸ್–ಗೈಡ್ಸ್)ಗಳಿಗೆ ಗೌರವಾನ್ವಿತ ರಾಜ್ಯಪಾಲರಿಂದ ಅಭಿನಂದನಾ ಸಮಾರಂಭ ...08
45ನೇ ರಾಜ್ಯ ಮಟ್ಟದ ಕಬ್–ಬುಲ್‌ಬುಲ್ ಉತ್ಸವ ...10
ವಿಪತ್ತು ನಿರ್ವಹಣಾ ತರಬೇತಿ ಶಿಬಿರ ...11
ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್, ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್‌ಗಳ ಹಿಮಾಲಯ ವೃಕ್ಷಮಣಿ (ಹೆಚ್‌ಡಬ್ಲ್ಯೂಬಿ) ತರಬೇತಿ ಶಿಬಿರಗಳ ಸಂಕ್ಷಿಪ್ತ ವರದಿ ...13
ಮೈಸೂರು ದಸರಾ ವೀಕ್ಷಣೆ ...14
ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಆಗಸ್ಟ್–ಸೆಪ್ಟೆಂಬರ್ 2025ರಲ್ಲಿ ನಿರ್ವಹಿಸಲ್ಪಟ್ಟ ಮುಖ್ಯ ಕಾರ್ಯಚಟುವಟಿಕೆಗಳು ...15
ಜಿಲ್ಲಾ ವಾರ್ತೆಗಳು ...19
ಶ್ರದ್ಧಾಂಜಲಿ ...34

## ಓದುಗರ ಗಮನಕ್ಕೆ

ಸಹೃದಯ ಓದುಗರೇ,

ಸ್ಕೌಟ್ಸ್ ಮತ್ತು ಗೈಡ್ಸ್ ಸಾಹಿತ್ಯ ಪುಸ್ತಕಗಳನ್ನು ಓದಲು ಕೆಳಗಿನ Q.R. Code ಹಾಗೂ ಲಿಂಕ್‌ನ್ನು ಉಪಯೋಗಿಸಿ

https://archive.org/details/ServantsOfKnowledge?tab=collection&query=sng.*&sort=-addeddate

– ಸಂಪಾದಕರು



# ರಾಜ್ಯ ಮುಖ್ಯ ಆಯುಕ್ತರ ನುಡಿ

ಸಮಸ್ತ ಸ್ಕೌಟ್ಸ್–ಗೈಡ್ಸ್ ಬಂಧುಗಳಿಗೆ ಶುಭಾಶಯಗಳು,

ಅಕ್ಟೋಬರ್ ತಿಂಗಳು ದಸರಾ ಮತ್ತು ದೀಪಾವಳಿ ಹಬ್ಬಗಳನ್ನೊಳಗೊಂಡ ಸಂಭ್ರಮದ ಮಾಸವಾಗಿದೆ. ನಮ್ಮ ಸಂಸ್ಕೃತಿಯ ಶಕ್ತಿ, ಶೌರ್ಯ ಮತ್ತು ಧರ್ಮದ ಪ್ರತೀಕವಾದ ದಸರಾ ಸತ್ಯ, ಧೈರ್ಯ ಮತ್ತು ಶಾಂತಿಯ ಮಾರ್ಗವನ್ನು ತೋರಿಸುವ ಹಬ್ಬವಾಗಿದೆ. ಈ ಹಬ್ಬವು ನಮ್ಮ ಜೀವನದಲ್ಲಿ ಹೊಸ ಚೈತನ್ಯ ಮತ್ತು ಸಕಾರಾತ್ಮಕ ಶಕ್ತಿಯನ್ನು ತುಂಬಲೆಂದು ಹಾರೈಸುತ್ತೇನೆ.

ಬೆಳಕಿನ ಹಬ್ಬವಾದ ದೀಪಾವಳಿ ನಮ್ಮ ಮನಸ್ಸುಗಳಲ್ಲಿ ಆನಂದದ ಬೆಳಕು ಹಚ್ಚಿ, ಸೇವಾ ಮನೋಭಾವ, ಪ್ರೀತಿ ಮತ್ತು ಸ್ನೇಹದ ಕಿರಣಗಳನ್ನು ಹರಡಲಿ. ಈ ಬಾರಿ ನಾವು ಎಲ್ಲರೂ "ಹಸಿರು ದೀಪಾವಳಿ" (Green Diwali) ಆಚರಿಸಿ, ಪ್ರಕೃತಿಯ ಸಂರಕ್ಷಣೆ, ಪರಿಸರದ ಶುದ್ಧತೆ ಮತ್ತು ಆರೋಗ್ಯದ ಕಾಳಜಿಯನ್ನು ಜೀವನದ ಅಂಗವನ್ನಾಗಿಸೋಣ.

ದಸರಾ ಮತ್ತು ದೀಪಾವಳಿಯ ಈ ಹಬ್ಬಗಳು ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ಸೇವೆ, ಶಿಸ್ತು ಮತ್ತು ಸಮರ್ಪಣೆಯ ಮೌಲ್ಯಗಳನ್ನು ಮತ್ತಷ್ಟು ಗಟ್ಟಿಗೊಳಿಸಿ, ನಮ್ಮ ಜೀವನವನ್ನು ಸಾರ್ಥಕಗೊಳಿಸಲಿ. ಎಲ್ಲರಿಗೂ ದಸರಾ ಹಾಗೂ ಹಸಿರು ದೀಪಾವಳಿಯ ಹಾರ್ದಿಕ ಶುಭಾಶಯಗಳು.

ಅಕ್ಟೋಬರ್ 2 ರಂದು ಆಚರಿಸಲಾಗುವ ಮಹಾತ್ಮ ಗಾಂಧೀ ಜಯಂತಿ ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಟ ಮಾಡಿದ ಮಹಾನ್ ಶಕ್ತಿಯನ್ನು ನೆನೆಪಿಸುತ್ತದೆ. ಗಾಂಧೀಜಿಯವರು ಸತ್ಯ, ಅಹಿಂಸೆ, ಸೇವೆ ಮತ್ತು ಶಿಸ್ತಿನ ಮೂಲಕ ಸಮಾಜದಲ್ಲಿ ಬದಲಾವಣೆ ತರಬಹುದೆಂದು ತೋರಿಸಿದ್ದು, ನಮ್ಮ ಸ್ಕೌಟ್ ಮತ್ತು ಗೈಡ್ ಚಳವಳಿಗೆ ಅದ್ಭುತ ಮಾದರಿಯಾಗಿದ್ದಾರೆ.

ನಮ್ಮ ಸಂಸ್ಥೆಯ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಗಾಂಧೀಜಿಯ ಸಂದೇಶವನ್ನು ಸ್ವೀಕರಿಸಿ, ಸೇವಾ ಮನೋಭಾವ, ಶಿಸ್ತು ಮತ್ತು ಸತ್ಯಪ್ರಿಯ ಜೀವನ ಶೈಲಿಗಳನ್ನು ತಮ್ಮ ಜೀವನದಲ್ಲಿ ಪಾಲಿಸಬೇಕು. ತಮ್ಮ ಕಾರ್ಯಗಳಲ್ಲಿ ಅಹಿಂಸೆ, ಪ್ರಾಮಾಣಿಕತೆ ಮತ್ತು ಸಾಮಾಜಿಕ ಜವಾಬ್ದಾರಿ ಅಳವಡಿಸಿಕೊಂಡರೆ, ಗಾಂಧೀಜಿಯ ಆದರ್ಶಗಳ ಅನುಸರಣೆಯೇ ಆಗುತ್ತದೆ. ಗಾಂಧೀಜಿಯವರು ಸ್ಕೌಟ್ ಮತ್ತು ಗೈಡ್ ಚಳವಳಿಯನ್ನು ಅಪಾರವಾಗಿ ಮೆಚ್ಚುತ್ತಿದ್ದರು ಮತ್ತು ಪ್ರತಿಯೊಂದು ಮನೆಯಲ್ಲಿ ಒಬ್ಬ ಸ್ಕೌಟ್ ಅಥವಾ ಗೈಡ್ ಇರಬೇಕೆಂಬ ಸಂದೇಶವನ್ನು ನೀಡಿದ್ದರು.

ಈ ಗಾಂಧೀ ಜಯಂತಿಯಲ್ಲಿ, ನಮ್ಮ ಚಳವಳಿಯ ಮಕ್ಕಳು ಮತ್ತು ಯುವಕರು ತಮ್ಮ ಸೇವಾ, ನಾಯಕತ್ವ ಮತ್ತು ನೈತಿಕ ಗುಣಗಳನ್ನು ಮತ್ತಷ್ಟು ಗಟ್ಟಿಗೊಳಿಸಲು ಶ್ರಮಿಸುವಂತೆ ನಾನು ಹಾರೈಸುತ್ತೇನೆ. ಎಲ್ಲರಿಗೂ ಮಹಾತ್ಮ ಗಾಂಧೀ ಜಯಂತಿಯ ಹಾರ್ದಿಕ ಶುಭಾಶಯಗಳು.

ಬಹುಕಾಲದಿಂದ ಬಾಕಿ ಉಳಿದಿದ್ದ ರಾಷ್ಟ್ರಪತಿ ಪ್ರಮಾಣ ಪತ್ರ ವಿತರಣೆ ಕಾರ್ಯಕ್ಕೆ ಇದೀಗ ಚಾಲನೆ ದೊರಕಿರುವುದು ನಮ್ಮ ಸಂಸ್ಥೆಗೆ ಹೆಮ್ಮೆಯ ಸಂಗತಿಯಾಗಿದೆ. ಇದು ಸಂಪೂರ್ಣವಾಗಿ ರಾಷ್ಟ್ರ ಸಂಸ್ಥೆಯ ಶ್ರದ್ಧಾಪೂರ್ವಕ ಪ್ರಯತ್ನದ ಫಲವಾಗಿದೆ. ಈ ಸಂತಸದ ಸಂದರ್ಭದಲ್ಲಿ, 31 ಆಗಸ್ಟ್ 2025 ರಂದು ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ನಾನೂ ಭಾಗವಹಿಸಿ ಸಂತೋಷಗೊಂಡೆ.

ಸೆಪ್ಟೆಂಬರ್ 26 ರಂದು ಬೆಂಗಳೂರಿನ ರಾಜಭವನದಲ್ಲಿ ಕರ್ನಾಟಕದ ಗೌರವಾನ್ವಿತ ರಾಜ್ಯಪಾಲರ ಸಮುಖದಲ್ಲಿ ಜರುಗಿದ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ತರಬೇತಿ ನಾಯಕರುಗಳ ಅಭಿನಂದನೆ ಕಾರ್ಯಕ್ರಮವು ಕರ್ನಾಟಕ ರಾಜ್ಯ ಸ್ಕೌಟ್ ಮತ್ತು ಗೈಡ್ ಚಳವಳಿಯ ಇತಿಹಾಸದಲ್ಲಿ ಹೊಸ ಮೈಲುಗಲ್ಲಾಗಿ ಪರಿಣಮಿಸಿದೆ. ಸೆಪ್ಟೆಂಬರ್ ತಿಂಗಳಲ್ಲಿ ರಾಜ್ಯ ಸಂಸ್ಥೆಯಿಂದ ಆಯೋಜಿಸಲಾದ ಮತ್ತೊಂದು ಮಹತ್ವದ ಕಾರ್ಯಕ್ರಮ ಇದಾಗಿತ್ತು. ಈ ಗೌರವವು ಸಂಸ್ಥೆಯ ಸಮರ್ಪಿತ ಸೇವಕರ ತ್ಯಾಗ, ಪರಿಶ್ರಮ ಮತ್ತು ಶ್ರದ್ಧೆಗೆ ದೊರಕಿದ ಮಾನ್ಯತೆಯ ಸಂಕೇತವಾಗಿದ್ದು, ಭವಿಷ್ಯದ ಪೀಳಿಗೆಯ ನಾಯಕರುಗಳಿಗೆ ಪ್ರೇರಣೆಯ ಬೆಳಕಾಗುತ್ತದೆ. ಹಲವು ಜಿಲ್ಲೆಗಳಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾಗಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು ನಮ್ಮ ಆಮಂತ್ರಣಕ್ಕೆ ಸ್ಪಂದಿಸಿ ಬಂದು ಪ್ರಶಸ್ತಿಗಳನ್ನು ಸ್ವೀಕರಿಸಿರುವುದು ನಮಗೆ ವಿಶೇಷ ಸಂತೋಷ ತಂದಿದೆ. ಇಂತಹ ಅಭೂತಪೂರ್ವ ಕಾರ್ಯಕ್ರಮಕ್ಕೆ ತಮ್ಮ ಅಮೂಲ್ಯ ಸಮಯವನ್ನು ಮೀಸಲಿಟ್ಟಿದ್ದಕ್ಕಾಗಿ ಗೌರವಾನ್ವಿತ ರಾಜ್ಯಪಾಲರಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ಮುಂದಿನ ದಿನಗಳಲ್ಲಿ, ಜಿಲ್ಲೆಯ ಇತರೆ ಪ್ರಮುಖ ಪದಾಧಿಕಾರಿಗಳು ಹಾಗೂ ಅಸಿಸ್ಟೆಂಟ್ ಲೀಡರ್ ಟ್ರೈನರ್‌ಗಳಿಗೂ ಇದೇ ರೀತಿಯ ಸನ್ಮಾನ ಕಾರ್ಯಕ್ರಮವನ್ನು ಆಯೋಜಿಸುವ ಉದ್ದೇಶ ನಮ್ಮ ರಾಜ್ಯ ಸಂಸ್ಥೆಗೆ ಇದೆ. ಆ ಶುಭಕ್ಷಣವನ್ನು ನಾವು ಎಲ್ಲರೂ ಆತುರದಿಂದ ನಿರೀಕ್ಷಿಸುತ್ತಿದ್ದೇವೆ.

ಅದೇ ವೇದಿಕೆಯಲ್ಲಿ ನಮ್ಮ ರಾಜ್ಯ ಸಂಸ್ಥೆಯ ವೆಬ್ಸೈಟ್ ಅನ್ನು ಪ್ರಾರಂಭಿಸುವ ನಮ್ಮ ಉದ್ದೇಶ ಸಾಕಾರಗೊಂಡಿತು. ಇದು ಅತ್ಯಂತ ಆಕರ್ಷಕ ಮತ್ತು ಮಾಹಿತಿಗಳನ್ನೊಳಗೊಂಡಿದ್ದು, ಮಾದರಿ ವೆಬ್ಸೈಟ್ ಆಗಿ, ಬೇರೆ ರಾಜ್ಯ ಸಂಸ್ಥೆಗಳು ಸಹ ಅನುಸರಿಸುವ ಮಟ್ಟಕ್ಕೆ ಹೋಗುವ ಭರವಸೆ ಹೊಂದಿದೆ. ಜೈನ್ ವಿಶ್ವವಿದ್ಯಾಲಯ ಮತ್ತು ಅದರ ಜಂಟಿ ರಿಜಿಸ್ಟ್ರಾರ್ ಮತ್ತು ಪ್ರೆಸಿಡೆಂಟ್ ಸ್ಕೌಟ್ ಆಗಿರುವ ಎಂ.ಎಸ್. ಸಂತೋಷ್ ಅವರಿಗೆ ಮತ್ತು ಹಗಲಿರುಳು ಇದಕ್ಕಾಗಿ ಶ್ರಮಿಸಿದ ಅವರ ತಂಡಕ್ಕೆ ಇದರ ಸಂಪೂರ್ಣ ಕೀರ್ತಿಯು ಸಲ್ಲುತ್ತದೆ. ಅವರಿಗೆ ವಿಶೇಷ ಅಭಿನಂದನೆಗಳು.

ಈ ಕಾರ್ಯಕ್ರಮದಲ್ಲಿ ನಮ್ಮ ರಾಷ್ಟ್ರೀಯ ಮುಖ್ಯ ಆಯುಕ್ತರಾದ ಡಾ. ಕೆ.ಕೆ. ಖಂಡೇಲ್‌ವಾಲಾ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದು, ಸಮಾರಂಭಕ್ಕೆ ಮೆರಗನ್ನು ನೀಡಿದರು. ಅದೇ ದಿನ ಮಧ್ಯಾಹ್ನ, ರಾಜ್ಯ ಸಂಸ್ಥೆ ಕಚೇರಿಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸದಸ್ಯರು ಹಲವು ಸಲಹೆ, ಸೂಚನೆ ಮತ್ತು ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದರು. ಅವೆಲ್ಲವನ್ನೂ ಗೌರವದಿಂದ ಸ್ವೀಕರಿಸಿ, ಕಾರ್ಯಗತಗೊಳಿಸುವ ಪ್ರಯತ್ನ ಮಾಡುತ್ತೇವೆ.

ತುಮಕೂರಿನಲ್ಲಿ ಜಿಲ್ಲಾ ಸಂಸ್ಥೆಯ ಕಟ್ಟಡ ನವೀಕರಣ, ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಗೆ ಬೆಂಗಳೂರಿನ ಟೊಯೋಟಾ ಕಂಪನಿಯವರು CSR ನಿಧಿಯಡಿಯಲ್ಲಿ ನೂತನ ಜಿಲ್ಲಾ ತರಬೇತಿ ಕೇಂದ್ರದ ಕಟ್ಟಡಕ್ಕೆ ಅನುದಾನ ನೀಡಿದ್ದು ಅದರ ಶಿಲಾನ್ಯಾಸ ಕಾರ್ಯಕ್ರಮ ನೆರವೇರಿರುವುದು ಹಾಗೂ ಬೀದರ್ ಜಿಲ್ಲಾ ಸಂಸ್ಥೆಯ ಕಟ್ಟಡ ಬಹುತೇಕ ಮುಕ್ತಾಯದ ಹಂತದಲ್ಲಿರುವುದು – ಇವೆಲ್ಲವೂ ನಮ್ಮ ಜಿಲ್ಲಾ ಸಂಸ್ಥೆಗಳ ಅಭಿವೃದ್ಧಿಯ ಮಹತ್ವದ ಹೆಜ್ಜೆಯಾಗಿವೆ.

ಈ ತಿಂಗಳಲ್ಲಿ ಬಳ್ಳಾರಿ, ಹಾವೇರಿ, ಗದಗ, ತುಮಕೂರು, ಚಿಕ್ಕಮಗಳೂರು, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಸಂಸ್ಥೆಗಳ ಪ್ರಗತಿ ಪರಿಶೀಲನೆ ನಡೆಸಲಾಗಿದ್ದು, ಇದರ ಮೂಲಕ ರಾಜ್ಯದ ಎಲ್ಲಾ 36 ಜಿಲ್ಲಾ ಸಂಸ್ಥೆಗಳಿಗೂ ತಲುಪಿ, ಜಿಲ್ಲಾ ಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸರ್ಕಾರದ ಅಧಿಕಾರಿಗಳೊಂದಿಗೆ ನೇರವಾಗಿ ಭೇಟಿಯಾಗಿ ಪ್ರಗತಿ ಅವಲೋಕನ ಮಾಡಲಾಗಿದೆ.

ಇದರ ಮಧ್ಯೆ, ಸೆಪ್ಟೆಂಬರ್ 17 ರಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲ್ಲೂಕಿನ ಕುರುಮುಡಿ ಗ್ರಾಮದಲ್ಲಿ ನಡೆದ 78ನೇ ಕಲ್ಯಾಣ ಕರ್ನಾಟಕ ಉತ್ಸವದಲ್ಲಿ ಭಾಗವಹಿಸುವ ಅವಕಾಶ ನನಗೆ ಲಭಿಸಿತು.

ಈ ತಿಂಗಳಲ್ಲಿ ದೊಡ್ಡಬಳ್ಳಾಪುರದಲ್ಲಿ ರಾಜ್ಯಮಟ್ಟದ ಹಿಮಾಲಯ ವೃಕ್ಷಮಣಿ ತರಬೇತಿ ಶಿಬಿರ, ಕೆಲವು ಜಿಲ್ಲೆಗಳಲ್ಲಿ ಉಪನ್ಯಾಸಕರ ಪ್ರಾರಂಭಿಕ ಶಿಬಿರಗಳು ಹಾಗೂ ವಿವಿಧ ತರಬೇತಿ ಶಿಬಿರಗಳು ಯಶಸ್ವಿಯಾಗಿ ನಡೆಸಲ್ಪಟ್ಟಿರುವುದು ಸಂತೋಷಕರವಾಗಿದೆ.

ಈ ಎಲ್ಲಾ ಕಾರ್ಯಕ್ರಮಗಳು ಮತ್ತು ಪ್ರಗತಿ ಪರಿಶೀಲನೆಗಳಿಂದ, ನಮ್ಮ ರಾಜ್ಯದ ಎಲ್ಲಾ ಜಿಲ್ಲಾ ಸಂಸ್ಥೆಗಳ ಅಭಿವೃದ್ಧಿಗೆ ಮತ್ತಷ್ಟು ವೇಗ ಸಿಗುವ ನಿರೀಕ್ಷೆಯೊಂದಿಗೆ, ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿಯ ಸೇವಾ ಧ್ಯೇಯ ಇನ್ನಷ್ಟು ಬಲಪಡಲಿದೆ ಎಂಬ ವಿಶ್ವಾಸ ನನಗಿದೆ.

ಪ್ರತಿ ಜಿಲ್ಲೆಗೂ ನಾನು ಭೇಟಿ ನೀಡಿದ ಸಂದರ್ಭದಲ್ಲಿ ಜಿಲ್ಲಾ ಮುಖ್ಯ ಆಯುಕ್ತರು, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ಪದಾಧಿಕಾರಿಗಳು ನೀಡಿದ ನಿರಂತರ ಸಹಕಾರವನ್ನು ನಾನು ಇಲ್ಲಿ ಸ್ಮರಿಸುತ್ತೇನೆ. ಮುಂದಿನ ದಿನಗಳಲ್ಲಿ, ಜಿಲ್ಲಾ ಮಟ್ಟದ ಜವಾಬ್ದಾರಿಯುತ ಮುಖಂಡರುಗಳು ಸಮಿತಿಯಲ್ಲಿ ಚರ್ಚಿಸಿದ ವಿಷಯಗಳು ಮತ್ತು ಕೈಗೊಂಡ ತೀರ್ಮಾನಗಳನ್ನು ಅನುಷ್ಠಾನಗೊಳಿಸಲು ಶ್ರಮಿಸುತ್ತಾರೆಂಬ ವಿಶ್ವಾಸ ನನಗಿದೆ. ಈ ಸಂಘಟಿತ ಪ್ರಯತ್ನದ ಫಲವಾಗಿ, ಕರ್ನಾಟಕ ರಾಜ್ಯದಲ್ಲಿ ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿ ಇನ್ನಷ್ಟು ಗಟ್ಟಿಯಾಗಿ ಬೆಳೆದು, ನಮ್ಮ ಯುವಕರಲ್ಲಿ ಸೇವಾ ಮನೋಭಾವ, ಶಿಸ್ತಿನ ಜೀವನ ಮತ್ತು ನಾಯಕತ್ವ ಗುಣಗಳು ಬೆಳೆಸಲು ನೆರವಾಗಲಿದೆ.

ನಮ್ಮ ಸಂಸ್ಥೆಯ ಮಕ್ಕಳು ಮತ್ತು ಯುವಕರಿಗೆ ರಾಷ್ಟ್ರ ಮಟ್ಟದ ಸೇವಾ ಮನೋಭಾವ ಬೆಳೆಸುವ ಉದ್ದೇಶದಿಂದ, ಕೇಂದ್ರ ಸರ್ಕಾರದ ಸಹಯೋಗದಲ್ಲಿ ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಕೈಗೆತ್ತಿಕೊಂಡಿರುವ "ಯುವ ಅಪದ್ ಮಿತ್ರ" ಯೋಜನೆ ಒಂದು ಅಪೂರ್ವ ಅವಕಾಶವಾಗಿದೆ.

ಈ ಯೋಜನೆಯಡಿ ಈಗಾಗಲೇ ಉಡುಪಿ ಮತ್ತು ಮಂಗಳೂರು ಜಿಲ್ಲೆಗಳಲ್ಲಿ ನಮ್ಮ ಸ್ಕೌಟ್ಸ್, ಗೈಡ್ಸ್, ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ತರಬೇತಿ ಶಿಬಿರಗಳು ಯಶಸ್ವಿಯಾಗಿ ನಡೆದಿವೆ. ಮುಂದಿನ ದಿನಗಳಲ್ಲಿ ರಾಜ್ಯದ ಎಲ್ಲಾ ಜಿಲ್ಲೆಗಳ ವಿದ್ಯಾರ್ಥಿಗಳು ಈ ಯೋಜನೆಯ ಪ್ರಯೋಜನವನ್ನು ಪಡೆಯುವಂತೆ, ಕೆಲವು ಆಯ್ದ ಜಿಲ್ಲೆಗಳಲ್ಲಿ ಶಿಬಿರಗಳನ್ನು ಆಯೋಜಿಸುವ ಯೋಜನೆ ರೂಪಿಸಲಾಗಿದೆ. ಈ ಮಹತ್ವದ ಕಾರ್ಯಕ್ರಮಕ್ಕೆ ಬೆಂಬಲ, ಸಹಕಾರ ನೀಡುತ್ತಿರುವ ಕೇಂದ್ರ ಸರ್ಕಾರ, ರಾಷ್ಟ್ರೀಯ ವಿಪತ್ತು ನಿರ್ವಹಣಾ ಪ್ರಾಧಿಕಾರ ಮತ್ತು ರಾಜ್ಯ ಸರ್ಕಾರದ ಕಂದಾಯ ಇಲಾಖೆಗಳ ಎಲ್ಲ ಅಧಿಕಾರಿಗಳಿಗೆ ನಮ್ಮ ಹೃತ್ಪೂರ್ವಕ ಕೃತಜ್ಞತೆಗಳು.

ಸೆಪ್ಟೆಂಬರ್ 19 ರಂದು ನನ್ನ ಹುಟ್ಟುಹಬ್ಬದ ದಿನದಂದು, ರಾಜ್ಯದ ವಿವಿಧ ಭಾಗಗಳಿಂದ ನಮ್ಮ ಸಂಸ್ಥೆಯ ನಾಯಕರು, ಮಕ್ಕಳು ಮತ್ತು ಯುವಕರು ಜಾಲತಾಣಗಳಲ್ಲಿ ಕಳುಹಿಸಿದ ಶುಭಾಶಯ ಸಂದೇಶಗಳು, ದೂರವಾಣಿ ಮೂಲಕ ಹಾಗೂ ಖುದ್ದಾಗಿ ಭೇಟಿ ನೀಡಿದ ಶುಭಾಶಯಗಳು ನನಗೆ ಅಪಾರ ಸಂತೋಷವನ್ನು ತಂದವು ಮತ್ತು ನಾನು ಪ್ರತಿಯೊಬ್ಬರಿಗೂ ಚಿರಋಣಿ.

ಆ ದಿನ ಜೆ.ಪಿ. ನಗರದಲ್ಲಿ ಲೋಕನಾಯಕ ಜಯಪ್ರಕಾಶ್ ನಾರಾಯಣ್ ಸ್ಕೌಟ್ ಗೈಡ್ ಮುಕ್ತದಳವನ್ನು ಪ್ರಾರಂಭಿಸಿದ್ದು, ನನ್ನಲ್ಲಿ ಸಾರ್ಥಕ ಭಾವನೆ ಮೂಡಿಸಿದೆ. ಚಳವಳಿಯಲ್ಲಿ ತೊಡಗಿಸಿಕೊಂಡಿರುವ ಪ್ರತಿಯೊಬ್ಬ ಮುಖಂಡರ ವಿಶೇಷ ದಿನಗಳಲ್ಲಿ ಇಂತಹ ಮುಕ್ತದಳಗಳು ರಾಜ್ಯದಲ್ಲಿ ಮತ್ತಷ್ಟು ಹೆಚ್ಚಾಗಲಿ ಎಂಬುದು ನನ್ನ ಹಾರೈಕೆ.

ಇತ್ತೀಚೆಗೆ ನಮ್ಮ ಕಾಲದ ಶ್ರೇಷ್ಠ ಕಾದಂಬರಿಕಾರರು, ಪದ್ಮವಿಭೂಷಣ ಪ್ರಶಸ್ತಿ ಪುರಸ್ಕೃತ ಡಾ. ಎಸ್. ಎಲ್. ಭೈರಪ್ಪರವರ ಅಗಲಿಕೆ ಕನ್ನಡ ಸಾರಸ್ವತ ಲೋಕಕ್ಕೆ ಅಪಾರ ನಷ್ಟವನ್ನುಂಟುಮಾಡಿದೆ. ಅವರ ಸಾಹಿತ್ಯ ಕೃತಿಗಳು ಕೇವಲ ಕಾದಂಬರಿಗಳಷ್ಟೇ ಅಲ್ಲ, ಜೀವನದ ತತ್ತ್ವ, ಸಂಸ್ಕೃತಿ, ಇತಿಹಾಸ ಮತ್ತು ಮಾನವ ಮೌಲ್ಯಗಳ ಆಳವಾದ ಅಧ್ಯಯನವಾಗಿವೆ. ಕನ್ನಡದ ಓದುಗರಲ್ಲಿ ಚಿಂತನೆ, ಆತ್ಮಪರಿಶೀಲನೆ ಮತ್ತು ಮೌಲ್ಯಾಧಾರಿತ ಬದುಕಿನ ಪ್ರೇರಣೆಯನ್ನು ಅವರು ಒದಗಿಸಿದ್ದಾರೆ.

ನಾನು ಕನಕಪುರ ವಿಧಾನಸಭಾ ಕ್ಷೇತ್ರದ ಶಾಸಕರಾಗಿದ್ದ ಸಂದರ್ಭದಲ್ಲಿ, 1999ರಲ್ಲಿ ಕನಕಪುರದಲ್ಲಿ ನಡೆದ 67ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಡಾ. ಭೈರಪ್ಪನವರು ಸರ್ವಾಧ್ಯಕ್ಷರಾಗಿದ್ದರು. ಆ ಸಂದರ್ಭವು ನನ್ನ ಸಾರ್ವಜನಿಕ ಜೀವನದ ಅತ್ಯಂತ ಮಹತ್ವದ ಕ್ಷಣವೆಂದು ಭಾವಿಸುತ್ತೇನೆ. ಅವರ ಭಾಷಣ, ದೃಢ ನಿಲುವು ಮತ್ತು ಕನ್ನಡ ಸಾಹಿತ್ಯದ ಭವಿಷ್ಯದ ಕುರಿತು ವ್ಯಕ್ತಪಡಿಸಿದ ಚಿಂತನೆಗಳು ನನಗೆ ಸದಾ ಪ್ರೇರಣೆಯಾದಿವೆ.

ಡಾ. ಭೈರಪ್ಪನವರು ಕೇವಲ ಸಾಹಿತ್ಯಕಾರರಷ್ಟೇ ಅಲ್ಲ, ಸಮಾಜದ ಸೂಕ್ಷ್ಮ ಸಮಸ್ಯೆಗಳ ಬಗ್ಗೆ ಜಾಗೃತಿಪಡಿಸಿದ ಮಹತ್ವದ ಚಿಂತಕರಾಗಿದ್ದರು. ಅವರ ಪ್ರತಿಯೊಂದು ಕೃತಿ ಸತ್ಯಾನ್ವೇಷಣೆಯ ಸಂಕೇತವಾಗಿದ್ದು, ಮುಂದಿನ ಪೀಳಿಗೆಯವರಿಗೂ ಪ್ರೇರಣೆಯ ಬೆಳಕಾಗುತ್ತದೆ. ನಮ್ಮ ರಾಜ್ಯ ಸಂಸ್ಥೆ ವತಿಯಿಂದ ಅವರಿಗೆ ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸುತ್ತಾ, ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುತ್ತದೆ.

ಸ್ಕೌಟ್ಸ್ ಮತ್ತು ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಪಿ.ಜಿ.ಆರ್. ಸಿಂಧ್ಯ)
ರಾಜ್ಯ ಮುಖ್ಯ ಆಯುಕ್ತರು

ಆಹಾರ ದೈವಿಕ ಸಂಪತ್ತು, ಅದನ್ನು ಸಂರಕ್ಷಿಸೋಣ
ಆಹಾರವನ್ನು ಉಳಿಸಿ, ಭವಿಷ್ಯವನ್ನು ಕಾಪಾಡಿ!

# ಅಕ್ಟೋಬರ್-2025ರ ಕಾರ್ಯಕ್ರಮ ಮತ್ತು ಚಟುವಟಿಕೆಗಳು

| ಕ್ರ.ಸಂ | ಕಾರ್ಯಕ್ರಮದ ಹೆಸರು | ದಿನಾಂಕ | ಸ್ಥಳ |
|---|---|---|---|
| 1 | ಮೈಸೂರು ದಸರಾ ಪ್ರವಾಸ ಕಾರ್ಯಕ್ರಮ ಹಾಗೂ ಶಿಬಿರ | 1, 2, ಮತ್ತು 3 ಅಕ್ಟೋಬರ್ 2025 | ಜಿಲ್ಲಾ ಕೇಂದ್ರ ಕಛೇರಿ ಮೈಸೂರು ಜಿಲ್ಲೆ |
| 2 | ಮಹಾತ್ಮ ಗಾಂಧಿ ಜಯಂತಿ ಹಾಗೂ ಲಾಲ್ ಬಹದ್ದೂರ್ ಶಾಸ್ತ್ರಿ ಜಯಂತಿಯ ಆಚರಣೆ. | 2 ಅಕ್ಟೋಬರ್ 2025 | ಎಲ್ಲಾ ಹಂತಗಳಲ್ಲಿ |
| 3 | ಯುವ ಆಪದ್ ಮಿತ್ರ ತರಬೇತಿ ಶಿಬಿರ, ರಾಯಚೂರು ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ | 14 ರಿಂದ 20 ಅಕ್ಟೋಬರ್ 2025 | ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಬೆಸೆಂಟ್ ಪಾರ್ಕ್, ದೊಡ್ಡಬಳ್ಳಾಪುರ |
| 4 | ಯುವ ಆಪದ್ ಮಿತ್ರ ತರಬೇತಿ ಶಿಬಿರ, ಕಲ್ಬುರ್ಗಿ ಮತ್ತು ಯಾದಗಿರಿ ಜಿಲ್ಲೆಯ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ | 24 ರಿಂದ 30 ಅಕ್ಟೋಬರ್ 2025 | ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ಬೆಸೆಂಟ್ ಪಾರ್ಕ್, ದೊಡ್ಡಬಳ್ಳಾಪುರ |
| 5 | ಸ್ಥಳೀಯ ಸ್ವಚ್ಛತೆ ಹಾಗೂ ಜಾಗೃತಿ, ಹಸಿರು ದೀಪಾವಳಿ ಆಚರಣೆ.ಅಕ್ಟೋಬರ್-2025 | 20,21 ಮತ್ತು 22 | ಎಲ್ಲಾ ಹಂತಗಳಲ್ಲಿ |
| 6 | ಜೋಟಾ-ಜೋಟಿ ಕಾರ್ಯಕ್ರಮ. | 18 ಮತ್ತು 19 ಅಕ್ಟೋಬರ್ 2025 | ರಾಜ್ಯ ಕೇಂದ್ರ ಕಛೇರಿ, ಶಾಂತಿಗೃಹ ಬೆಂಗಳೂರು. |
| 7 | 1. National Level Training on S.T.E.M (Science, Technology, Engineering and Mathematics)<br>2. Robotics and AI Workshop<br>3. Youth Entrepreneurship Programmes. | 25/10/2025 to 29/10/2025 ರಾಷ್ಟ್ರ ಮಟ್ಟದ ಶಿಬಿರಗಳು | ಸ್ಕೌಟ್ಸ್ ಮತ್ತು ಗೈಡ್ಸ್ ಕನ್ನಡ ಭವನ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸ್ಥಳೀಯ ಸಂಸ್ಥೆ, ಮೂಡ ಬಿದರೆ, ದಕ್ಷಿಣ ಕನ್ನಡ |
| 8. | ರಾಜ್ಯ ಪುರಸ್ಕಾರ ಸ್ಕೌಟ್ಸ್ ಗೈಡ್ಸ್ ಮತ್ತು ರೋವರ್ಸ್-ರೇಂಜರ್ಸ್‌ಗಳಿಗೆ ಆನ್‌ಲೈನ್ ಪರೀಕ್ಷೆ. | 30 ಅಕ್ಟೋಬರ್ 2025 | ಆನ್‌ಲೈನ್ ಮೂಲಕ |
| 9. | ಹಾಸನಾಂಭ ಹಾಗೂ ಶ್ರೀ ಸಿದ್ದೇಶ್ವರ ಸ್ವಾಮಿಯವರ ಜಾತ್ರಮಹೋತ್ಸವದ ರಾಜ್ಯಮಟ್ಟದ ರೋವರ್ಸ್, ರೇಂಜರ್ಸ್‌ಗಳ ಸೇವಾ ಶಿಬಿರ | 8 ರಿಂದ 13 01ನೇ ಬ್ಯಾಚ್<br>13 ರಿಂದ 18 2ನೇ ಬ್ಯಾಚ್<br>18 ರಿಂದ 23 3ನೇ ಬ್ಯಾಚ್ | ಹಾಸನ |

## ಅಕ್ಷರದ ಜ್ಯೋತಿ

ವಿದ್ಯೆಯನ್ನು ನಿಸ್ವಾರ್ಥದಿ ಧಾರೆಯೆರೆದವರು
ಜ್ಞಾನದ ಹೆಸರಲಿ ಭದ್ರ ಬುನಾದಿ ಹಾಕಿದವರು
ಪುಸ್ತಕದಂತೆ ಮಸ್ತಕವ ಅಕ್ಷರಗಳಲಿ ತುಂಬಿ
ಹೃದಯ ಮಂದಿರದಲ್ಲಿ ಶಾಶ್ವತವಾಗಿ ನೆಲೆಸಿಹರು

ಅನುಭವಗಳ ಬಗೆದಷ್ಟೇ ದಾರಿ ಭವ್ಯವೆನಿಸುತ್ತದೆ
ಚಿತ್ತವ ಶುದ್ಧಗೊಳಿಸುತ್ತ ವ್ಯಕ್ತಿತ್ವವನ್ನು ರೂಪಿಸಿಹರು
ಅಡ್ಡಲಾಗಿ ನಿಂತ ಮುಳ್ಳನ್ನು ಚಿವುಟುತ್ತಾ
ಆಕಾದಷ್ಟು ವಿಶಾಲದಿ ಸಾಧನೆ ಪಸರಿಸ ಬಿಟ್ಟಿಹರು

ನನ್ನೊಳಗಿನ ಅಜ್ಞಾನಕ್ಕೆ ಅಕ್ಷರದಿ ಜ್ಯೋತಿಯಾಗಿಹರು
ಜ್ಞಾನಗರಡಿಯೊಳು ಬದುಕಿನ ಅರಿವು ತಂದಿಹರು
ಅಗತ್ಯತೆಗಳ ಅಳತೆಯಲಿ ಬೋಧನೆಯ ಕಣಜ
ಅರೆಗಳಿಗೆಯಲಿ ಜೀವನ ಪೂರ್ತಿ ಮುತ್ತಿಕ್ಕಿ

ತಬ್ಬಿಕೊಳ್ಳುವ ಪದಗಳ ಸುಮವ ಗೀಚಿಹರು
ಮೂಕ ಭಾವಗಳಿಗೆ ಲೇಖನಿ ಹಿಡಿಯಲು
ನೀ ಪದಪುಂಜಗಳ ಮೌನದಿ ಎದೆಗವಚಿಕೋ
ಎಂದವರು ನನ್ನ ಬಾಳಲಿ ನಂದಾದೀಪವಾದವರು.

**ಅನನ್ಯ ಎಚ್. ಸುಬ್ರಹ್ಮಣ್ಯ**
ರೇಂಜರ್, ದಕ್ಷಿಣ ಕನ್ನಡ ಜಿಲ್ಲೆ, ವಿವೇಕಾನಂದ ಸ್ವಾಯತ್ತ ಮಹಾವಿದ್ಯಾಲಯ, ಪುತ್ತೂರು

# ಸಂಪಾದಕೀಯ



ಮಾನ್ಯರೆ,

ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಪಾತ್ರ ಅಪಾರ. ಈ ವಿಶಿಷ್ಟ ಜವಾಬ್ದಾರಿಗಳನ್ನು ಯಶಸ್ವಿಯಾಗಿ ನಿರ್ವಹಿಸುವಲ್ಲಿ ವರ್ಷಪೂರ್ತಿ ಹಲವಾರು ಕಾರ್ಯಕ್ರಮಗಳನ್ನು, ಚಟುವಟಿಕೆಗಳನ್ನು, ತರಬೇತಿಗಳನ್ನು ಹಮ್ಮಿಕೊಂಡು ಎಲ್ಲರ ಸಕ್ರಿಯ ಸಹಭಾಗಿತ್ವದೊಂದಿಗೆ ನಿರ್ವಹಣೆ ಮಾಡುತ್ತಾ, ಸರ್ವರ ಆಧರಾಭಿಮಾನಕ್ಕೆ ಪಾತ್ರವಾಗುತ್ತಿರುವುದು ತೃಪ್ತಿದಾಯಕ. ಹೀಗೆ ನಿರ್ವಹಣೆಯಾಗುತ್ತಿರುವ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಎಲ್ಲಾ ಕಾರ್ಯಚಟುವಟಿಕೆಗಳು ದಿನೇ-ದಿನೇ ವಿಸ್ತಾರಗೊಳುತ್ತಾ, ಗುಣಾತ್ಮಕ ಶಿಕ್ಷಣದ ಅವಿಭಾಜ್ಯ ಅಂಗವಾಗಿ ಮುನ್ನಡೆಯುವಲ್ಲಿ ಸರ್ವರ ಪ್ರೋತ್ಸಾಹ ಸದಾದೊರೆಯಲೆಂಬುದು ನಮ್ಮೆಲ್ಲರ ಹಾರೈಕೆ ಆಗಿರುವುದು.

ಸೆಪ್ಟೆಂಬರ್ 2025ರ ಮಾಹೆಯಲ್ಲಿ ನಿರ್ವಹಿಸಿದ ಎಲ್ಲಾ ಕಾರ್ಯಕ್ರಮಗಳು, ಚಟುವಟಿಕೆಗಳು, ತರಬೇತಿಗಳು, ಸಭೆಗಳು ಎಲ್ಲರ ಸಕ್ರಿಯ ಭಾಗವಹಿಸುವಿಕೆ, ಪ್ರೋತ್ಸಾಹಗಳಿಂದ ಯಶಸ್ವಿಯಾಗಿ ನಿರ್ವಹಣೆಯಾಗಿದ್ದು, ಅವುಗಳಲ್ಲಿ ಈ ಕೆಳಕಂಡ ಮುಖ್ಯ ಕಾರ್ಯಕ್ರಮಗಳ ಅರ್ಥಗರ್ಭಿತ ನಿರ್ವಹಣೆ ಉಲ್ಲೇಖಾರ್ಹ.

1) ರಾಜ್ಯ ಮಟ್ಟದ ಅತ್ಯುತ್ತಮ ಶಿಕ್ಷಕ ಪ್ರಶಸ್ತಿ ಪಡೆದ ಸ್ಕೌಟ್-ಗೈಡ್ ಶಿಕ್ಷಕರಿಗೆ ಗೌರವಾನ್ವಿತ ರಾಜ್ಯಪಾಲರಿಂದ ಗೌರವ ಸಮರ್ಪಣೆ ಜೊತೆಗೆ ಎಲ್ಲಾ ಜಿಲ್ಲೆಗಳ, ಎಲ್ಲಾ ಹಂತಗಳಲ್ಲೂ ಶಿಕ್ಷಕರ ದಿನಾಚರಣೆ ಅಂಗವಾಗಿ ನಿರ್ವಹಿಸಿದ ಡಾ॥ ರಾಧಾಕೃಷ್ಣನ್‌ರವರ ಹುಟ್ಟುಹಬ್ಬ ಆಚರಣೆ

2) ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ನಿರ್ವಹಣೆ

3) ವಿಶ್ವಶಾಂತಿ ದಿನಾಚರಣೆ ಅಂಗವಾಗಿ ಕರಾವಳಿ ತೀರದಲ್ಲಿ ಸ್ವಚ್ಛತೆ ಅಭಿಯಾನ

4) ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಗಳವರು ರಾಜ್ಯ ಸಂಸ್ಥೆಯ ಸಹಯೋಗದೊಂದಿಗೆ 'ಯುವ ಆಪದಮಿತ್ರ ಯೋಜನೆ'ಯಡಿಯಲ್ಲಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ವಿಪತ್ತು ನಿರ್ವಹಣಾ ತರಬೇತಿ ಶಿಬಿರಗಳು

5) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಸಕ್ರಿಯವಾಗಿ ಅನುಷ್ಠಾನದಲ್ಲಿ ವಿಶಿಷ್ಠ ಪಾತ್ರವಹಿಸುತ್ತಿರುವ ಎಲ್ಲಾ ಜಿಲ್ಲಾ ಮುಖ್ಯ ಆಯುಕ್ತರುಗಳು, ರಾಜ್ಯ/ ಜಿಲ್ಲಾ ಕಾರ್ಯದರ್ಶಿಗಳು ಮತ್ತು ಸ್ಕೌಟ್ಸ್-ಗೈಡ್ಸ್ ಲೀಡರ್ ಟ್ರೈನರ್ಸ್‌ಗಳಿಗೆ ಗೌರವಾನ್ವಿತ ರಾಜ್ಯಪಾಲರಿಂದ ಸನ್ಮಾನ ಸಮಾರಂಭ ಏರ್ಪಡಿಸಿ ಅವರೆಲ್ಲರನ್ನು ಇನ್ನೂ ಹೆಚ್ಚು ಶ್ರಮಿಸುವಲ್ಲಿ ಹುರುದುಂಬಿಸಿರುವುದು.

6) ಸುಮಾರು 165ಕ್ಕೂ ಹೆಚ್ಚು ವಿವಿಧ ವಿಭಾಗದ ದಳನಾಯಕರುಗಳಿಗೆ ಹಿಮಾಲಯ ವೃಕ್ಷಮಣಿದಾರಕರ (ಹೆಚ್‌ಡಬ್ಲ್ಯೂಬಿ) ತರಬೇತಿಯನ್ನು ನಮ್ಮ ರಾಜ್ಯ ತರಬೇತಿ ಕೇಂದ್ರದಲ್ಲಿ ಏರ್ಪಡಿಸಿ, ಯಶಸ್ವಿಯಾಗಿ ನಿರ್ವಹಿಸಿರುವುದು.

7) ಉಡುಪಿಯಲ್ಲಿ ಯಶಸ್ವಿಯಾಗಿ ಜರುಗಿದ 45ನೇ ರಾಜ್ಯ ಮಟ್ಟದ ಕಬ್ ಮತ್ತು ಬುಲ್‌ಬುಲ್ ಉತ್ಸವ.

8) ಪ್ರತಿ ಭಾನುವಾರ ನಿಗದಿತ 11 ಗಂಟೆಯಿಂದ 12 ಗಂಟೆಯವರೆಗಿನ ಅವಧಿಯಲ್ಲಿ ಆನ್‌ಲೈನ್‌ನಲ್ಲಿ ಸ್ಕೌಟ್‌ಸ್ಕಿಲೋ ಕಾರ್ಯಕ್ರಮಗಳನ್ನು ಅರ್ಹ ಪ್ರತಿಭಾನ್ವಿತ ಸಂಪನ್ಮೂಲ ವ್ಯಕ್ತಿಗಳಿಂದ ನಿರ್ವಹಿಸಿರುವುದು.

9) ಭಾರತ್ ಸ್ಕೌಟ್ಸ್-ಗೈಡ್ಸ್ ವೆಬ್‌ಸೈಟ್‌ಅನ್ನು ಲಾಂಚ್ ಮಾಡಿರುವ ಹೆಮ್ಮೆಯ ಕಾರ್ಯ.

10) ಶ್ರೀ ಎ.ಎನ್. ಮಹೇಶ್, ಉಪಾಧ್ಯಕ್ಷರು, ರಾಜ್ಯ ಸಂಸ್ಥೆಯರವರ ಸಹಕಾರದಿಂದ ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯಿಂದ ದಿ॥ ಎ.ಎಂ. ನಿಂಗೇಗೌಡ ಸ್ಮಾರಕ ಸ್ಕೌಟ್ಸ್-ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರದ ಕಟ್ಟಡ ಸಮುಚ್ಚಯದ ಭೂಮಿ ಪೂಜಾಕಾರ್ಯಕ್ರಮ.

11) ಸೆಪ್ಟೆಂಬರ್ 19 ರಂದು ಮಾನ್ಯ ರಾಜ್ಯ ಮುಖ್ಯ ಆಯುಕ್ತರವರ 77ನೇ ಹುಟ್ಟು ಹಬ್ಬದ ದಿನಾಚರಣಾ ಸಮಾರಂಭದಲ್ಲಿ ಉದ್ಘಾಟಿಸಿದ ಅವರ ಅಧ್ಯಕ್ಷತೆಯ ಜಯಪ್ರಕಾಶ್ ನಾರಾಯಣ್ ಮುಕ್ತದಳ ಪ್ರಾರಂಭೋತ್ಸವ.

ಇವುಗಳೆಲ್ಲವುದಗಳ ಜೊತೆಗೆ ಪದವಿಪೂರ್ವ ಕಾಲೇಜುಗಳು, ಪದವಿ ಕಾಲೇಜುಗಳ ಉಪನ್ಯಾಸಕ- ಉಪನ್ಯಾಸಕರಿಗೆ ಭಾರತ್ ಸ್ಕೌಟ್ಸ್-ಗೈಡ್ಸ್‌ನ ರೋವರ್ಸ್-ರೇಂಜರ್ಸ್ ಮಾಹಿತಿ ಶಿಬಿರ/ ಪ್ರಾರಂಭಿಕ ಶಿಬಿರ / ಮೂಲ ತರಬೇತಿ ಶಿಬಿರಗಳನ್ನು ಏರ್ಪಡಿಸುವಲ್ಲಿ ಬಹಳಷ್ಟು ಪ್ರೋತ್ಸಾಹ, ಸಹಕಾರ ಸಂಬಂಧಪಟ್ಟ ಪದವಿ ಪೂರ್ವ ಶಿಕ್ಷಣ ಇಲಾಖಾ ಮತ್ತು ಪದವಿ ಇಲಾಖಾ ಎಲ್ಲಾ ಹಂತದ ಅಧಿಕಾರಿಗಳಿಂದ ದೊರೆತಿದ್ದು ಅವರೆಲ್ಲರಿಗೂ ಅನಂತಾನಂತ ಕೃತಜ್ಞತೆಯನ್ನು ಈ ಮೂಲಕ ಸಲ್ಲಿಸಬಯಸುತ್ತೇನೆ.

ಜೊತೆಗೆ ಸೆಪ್ಟೆಂಬರ್ 2025ರ ತಿಂಗಳಲ್ಲಿ ಹಮ್ಮಿಕೊಂಡಿದ್ದ ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯ ಇತರೆ ಗೀತಗಾಯನ ಕಾರ್ಯಕ್ರಮಗಳು, ಆನ್‌ಲೈನ್ ರಾಜ್ಯ ಪುರಸ್ಕಾರ ಪರಿಕ್ಷಾ ಕ್ರಮಗಳು, ಮುಂತಾದವುಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದ ಸರ್ವರಿಗೂ ಅಭಿನಂದನೆಗಳು. ಮೇಲ್ಕಂಡ ಸೆಪ್ಟೆಂಬರ್ 2025ರಲ್ಲಿ ಹಮ್ಮಿಕೊಂಡ ಎಲ್ಲಾ ಕಾರ್ಯಕ್ರಮ, ಚಟುವಟಿಕೆಗಳು, ಸಭೆ-ಸಮಾರಂಭಗಳು, ಸಂಸ್ಥೆಗೆ ಆರ್ಥಿಕ ಹೊರೆ ಆಗದಂತೆ ಯಶಸ್ವಿಯಾಗಿ ನಿರ್ವಹಣೆ ಆಗುವಲ್ಲಿ ಸಕ್ರಿಯ ಕ್ರಮವಹಿಸಿರುವ ಮಾನ್ಯ ರಾಜ್ಯ ಮುಖ್ಯ ಆಯುಕ್ತರವರಿಗೆ, ಅವರೊಂದಿಗೆ ಸಹಕರಿಸಿದ ಎಲ್ಲಾ ಗಣ್ಯಮಾನ್ಯರಿಗೆ ಅನಂತಾನಂತ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ.

ಸೆಪ್ಟೆಂಬರ್ 2025ರಲ್ಲಿ ಏರ್ಪಟ್ಟ ಎಲ್ಲಾ ಕಾರ್ಯಕ್ರಮಗಳು, ಚಟುವಟಿಕೆಗಳು, ಸಭೆ-ಸಮಾರಂಭಗಳು, ವಿಶೇಷವಾಗಿ ಲಾಂಚ್ ಮಾಡಿರುವ ನಮ್ಮ ಭಾರತ್ ಸ್ಕೌಟ್ಸ್-ಗೈಡ್ಸ್ ವೆಬ್‌ಸೈಟ್, ಗೌರವಾನ್ವಿತ ರಾಜ್ಯಪಾಲರಿಂದ ಏರ್ಪಡಿಸಿದ್ದ ಸನ್ಮಾನ ಸಮಾರಂಭ, ಯುವ ಆಪದಮಿತ್ರ, ವಿಪತ್ತು ನಿರ್ವಹಣಾ ತರಬೇತಿ ಶಿಬಿರಗಳು ಮತ್ತು ಮಾನ್ಯ ರಾಜ್ಯ ಮುಖ್ಯ ಆಯುಕ್ತರು ತಮ್ಮ 77ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಸ್ವತಃ ಸ್ಕೌಟ್-ಗೈಡ್ ಮುಕ್ತದಳವನ್ನು ಪ್ರಾರಂಭಿಸಿರುವುದು, ಮುಂತಾದವುಗಳು ನಮ್ಮ ಭಾರತ್ ಸ್ಕೌಟ್ಸ್-ಗೈಡ್ಸ್ ಚಳವಳಿಯು ಇನ್ನೂ ಹೆಚ್ಚು ಪ್ರಭಾವಯುತವಾಗಿ ಸೇವೆಸಲ್ಲಿಸಿ, ತನ್ನ ಸೇವಾ ಕ್ಷೇತ್ರವನ್ನು ವಿಸ್ತರಿಸುವಲ್ಲಿ ಪ್ರೇರಣಾತ್ಮಕ ಆಗಿರುವುದು ಹರ್ಷದಾಯಕ.

ಸೆಪ್ಟೆಂಬರ್ 2025ರ ಎಲ್ಲಾ ಕಾರ್ಯಕ್ರಮ, ಚಟುವಟಿಕೆ, ತರಬೇತಿಗಳು, ಸಭೆ-ಸಮಾರಂಭಗಳು ಅತ್ಯಂತ ಫಲಪ್ರದವಾಗಿ ನಿರ್ವಹಣೆ ಆಗಿ, ಸ್ಕೌಟ್ಸ್-ಗೈಡ್ಸ್, ಚಳವಳಿಯ ಯಶಸ್ವಿ ನಿರ್ವಹಣೆಗೆ ಸಹಕರಿಸಿ, ಪ್ರೋತ್ಸಾಹಿಸಿದ ಸರ್ವರಿಗೂ ಮತ್ತೊಮ್ಮೆ ಅನಂತಾನಂತ ಅಭಿನಂದನೆಗಳನ್ನು ಸಲ್ಲಿಸಬಯಸುತ್ತೇನೆ.

ದಸರಾ ಶುಭಾಶಯಗಳೊಂದಿಗೆ ಸ್ಕೌಟ್ಸ್-ಗೈಡ್ಸ್ ವಂದನೆಗಳು.

ಸ್ಕೌಟ್ಸ್-ಗೈಡ್ಸ್ ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ

(ಕೆ. ಗಂಗಪ್ಪಗೌಡ)

ಸಂಪಾದಕರು ಹಾಗೂ ರಾಜ್ಯ ಕಾರ್ಯದರ್ಶಿ

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

# ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು ಹಾಗೂ ತರಬೇತಿ ನಾಯಕರುಗಳಿಗೆ (ಸ್ಕೌಟ್ಸ್-ಗೈಡ್ಸ್)ಗಳಿಗೆ ಗೌರವಾನ್ವಿತ ರಾಜ್ಯಪಾಲರಿಂದ ರಾಜಭವನದಲ್ಲಿ ಅಭಿನಂದನಾ ಸಮಾರಂಭ




ರಾಜ್ಯ ಸಂಸ್ಥೆಯಿಂದ ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು, ತರಬೇತಿ ನಾಯಕರುಗಳಿಗೆ (ಸ್ಕೌಟ್ಸ್-ಗೈಡ್ಸ್) ಇವರುಗಳಿಗೆ ಆಯೋಜಿಸಲಾದ ರಾಜ್ಯಪಾಲರಿಂದ ಅಭಿನಂದನಾ ಸಮಾರಂಭವನ್ನು ಸೆಪ್ಟೆಂಬರ್ 26 ರಂದು ಬೆಳಿಗ್ಗೆ 11.00 ಗಂಟೆಗೆ ಬೆಂಗಳೂರಿನ ರಾಜಭವನದ ಗಾಜಿನಮನೆಯಲ್ಲಿ ಏರ್ಪಡಿಸಲಾಗಿತ್ತು. 31 ಜಿಲ್ಲಾ ಮುಖ್ಯ ಆಯುಕ್ತರುಗಳು, 28 ಜಿಲ್ಲಾ ಕಾರ್ಯದರ್ಶಿಗಳು, 106 ತರಬೇತಿ ನಾಯಕರುಗಳಿಗೆ (ಸ್ಕೌಟ್ಸ್-ಗೈಡ್ಸ್)ಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಇವರುಗಳಿಗೆ ಸನ್ಮಾನವನ್ನು ಗೌರವಾನ್ವಿತ ಡಾ. ಥಾವರಚಂದ್ ಗೆಹ್ಲೋಟ್, ಕರ್ನಾಟಕದ ರಾಜ್ಯಪಾಲರು ಮತ್ತು ಪೋಷಕರು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ಅವರ ನೇತೃತ್ವದಲ್ಲಿ ನಡೆಸಲಾಯಿತು.

ಸದರಿ ಕಾರ್ಯಕ್ರಮದಲ್ಲಿ ಮಾರಿಗೋಲ್ಡ್ ಅಂತರಾಷ್ಟ್ರೀಯ ಶಾಲೆ, ಬೆಂಗಳೂರು ಈ ಶಾಲೆಯ ಮಕ್ಕಳ ಬ್ಯಾಂಡ್ ತಂಡ ಸ್ಲೋಮಾರ್ಚ್ ನುಡಿಸಿದರು. ನಂತರ ಎಲ್ಲಾರೂ ರಾಷ್ಟ್ರಗೀತೆ ಮತ್ತು ಸ್ಕೌಟ್ಸ್ ಗೈಡ್ಸ್ ಪ್ರಾರ್ಥನೆ ಹಾಡಲಾಯಿತು.

ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ರಾಜ್ಯಪಾಲರು ಮತ್ತು ಗಣ್ಯರನ್ನು ಸ್ವಾಗತಿಸಿ ಪ್ರಾಸ್ತವಿಕವಾಗಿ ಮಾತನಾಡಿದರು.

ರಾಜ್ಯ ಸಂಸ್ಥೆಯ ಅಧಿಕೃತ ನೂತನ ಜಾಲತಾಣವನ್ನು ಡಾ. ಕೃಷ್ಣ ಕುಮಾರ್ ಖಂಡೇಲ್ವಾಲ್, ರಾಷ್ಟ್ರೀಯ ಮುಖ್ಯ ಆಯುಕ್ತರು, ರಾಷ್ಟ್ರೀಯ ಸಂಸ್ಥೆ, ನವದೆಹಲಿ ಬಿಡುಗಡೆ ಮಾಡಿ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದರು.

ನೂತನ ಜಾಲತಾಣವನ್ನು ಉತ್ತಮವಾಗಿ ರಚಿಸಿ ಕರ್ನಾಟಕ ರಾಜ್ಯ ಸಂಸ್ಥೆಗೆ ಸಮರ್ಪಿಸಿ ಮತ್ತು ನಿರ್ವಹಣೆ ಮಾಡುತ್ತಿರುವ ಜೈನ್ ವಿಶ್ವವಿದ್ಯಾಲಯದ ಜಂಟಿ ರಿಜಿಸ್ಟ್ರಾರ್ ಮತ್ತು ನಮ್ಮ ಸಂಸ್ಥೆಯ ಕೇಂದ್ರ ಸ್ಥಾನಿಕ ಆಯುಕ್ತರಾದ ಶ್ರೀ ಎಂ.ಎಸ್. ಸಂತೋಷ್ ಹಾಗು ಪ್ರಜ್ವಲ್ ಮತ್ತು ಸುನಿಲ್ ಇವರುಗಳಿಗೆ ಅಭಿನಂದನೆಗಳನ್ನು ಸಲ್ಲಿಸಲಾಯಿತು.

ಮಾನ್ಯ ರಾಜ್ಯಪಾಲರು, ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು, ಲೀಡರ್ ಟ್ರೈನರ್ಸ್ (ಸ್ಕೌಟ್ಸ್-ಗೈಡ್ಸ್) ಇವರುಗಳಿಗೆ ಸನ್ಮಾನಿಸಿ ಅಭಿನಂಧಿಸಿದರು ಹಾಗೂ ಸಮಾರಂಭವನ್ನು ಉದ್ದೇಶಿಸಿ ಮಾತನಾಡುತ್ತಾ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಅಧಿಕಾರಿಗಳ ಸಮುದಾಯ ಸೇವಾ ಚಟುವಟಿಕೆಗಳು, ತ್ಯಾಗ ಹಾಗೂ ಸಮರ್ಪಿತ ಸೇವೆಯನ್ನು ಮತ್ತು ಸರ್ಕಾರವು ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಗೆ ನೀಡುತ್ತಿರುವ ಬೆಂಬಲವನ್ನು ಶ್ಲಾಘಿಸಿ, ಅಭಿನಂದಿಸಿದರು.

ಈ ಸಮಾರಂಭಲ್ಲಿ ಶ್ರೀ ಕೊಂಡಜ್ಜಿ ಬ. ಷಣುಖಪ್ಪ, ಉಪಾಧ್ಯಕ್ಷರು, ಶ್ರೀ ಎಂ.ಎ. ಖಾಲೀದ್, ರಾಜ್ಯ ಆಯುಕ್ತರುಗಳು (ಸ್ಕೌ), ಶ್ರೀ ಮೋಹನ್ ಆಳ್ವ, ಜಿಲ್ಲಾ ಮುಖ್ಯ ಆಯುಕ್ತರು, ದಕ್ಷಿಣ ಕನ್ನಡ ಜಿಲ್ಲೆ, ಡಾ. ಕೆ.ವಿ ತ್ರಿಲೋಕ್ ಚಂದ್ರ, ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಕರ್ನಾಟಕ ಸರ್ಕಾರ ಹಾಗೂ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಭಾಗವಹಿಸಿದ್ದರು.

ಶ್ರೀಮತಿ ಗೀತ ನಟರಾಜ್, ರಾಜ್ಯ ಆಯುಕ್ತರು (ಗೈ) ರವರು ವೇದಿಕೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಗಣ್ಯರನ್ನು, ಸನ್ಮಾನಿತರನ್ನು ಹಾಗೂ ಸಮಾರಂಭದಲ್ಲಿ ಭಾಗವಹಿಸಿದ ಸರ್ವರನ್ನೂ ವಂದಿಸಿದರು. ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು (ಗೈ) ಇವರು ಕಾರ್ಯಕ್ರಮವನ್ನು ನಿರ್ವಹಣೆ ಮಾಡಿದರು.











RAJ BHAVAN











# 45ನೇ ರಾಜ್ಯ ಮಟ್ಟದ ಕಬ್–ಬುಲ್‌ಬಲ್ ಉತ್ಸವ



ಸೆಪ್ಟೆಂಬರ್ 20 ರಿಂದ 23ರ ವರೆಗೆ 45ನೇ ರಾಜ್ಯ ಮಟ್ಟದ ಕಬ್–ಬುಲ್‌ಬುಲ್ ಉತ್ಸವ ಉಡುಪಿ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಆನಂದತೀರ್ಥ ವಿದ್ಯಾಲಯ ಕುಂಚಾರು ಗಿರಿಯಲ್ಲಿ ಬಹಳ ಯಶಸ್ವಿಯಾಗಿ ನಡೆಯಿತು. ಶಿಬಿರದಲ್ಲಿ ಸುಮಾರು 850, ಕಬ್–ಬುಲ್‌ಬುಲ್‌ಗಳು ಮತ್ತು ಶಿಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮದ ಉದ್ಘಾಟನೆಯನ್ನು ಶ್ರೀ ಶ್ರೀ ವಿಶ್ವಪ್ರಿಯತೀರ್ಥ ಸ್ವಾಮೀಜಿ ಅದಮಾರು ಮಠ ದೀಪ ಬೆಳಗಿಸಿ ನೆರವೇರಿಸಿದರು. ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿ ಹುರಿದುಂಬಿಸಿದರು. ಈ ಕಾರ್ಯಕ್ರಮದಲ್ಲಿ ಕಾಪು ಶಾಸಕರಾದ ಮಾನ್ಯ ಶ್ರೀ ಸುರೇಶ್ ಕುಮಾರ್ ಗುರ್ಮೆ ಆಗಮಿಸಿ ಕಬ್–ಬುಲ್‌ಬುಲ್ ಚಟುವಟಿಕೆಗೆ ಚಾಲನೆ ಕೊಟ್ಟರು. ಡಾ. ಎಲ್ಲಮ್ಮ ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿ ಶಿಕ್ಷಣ ಇಲಾಖೆ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ, ಶ್ರೀ ಹರಿಭಟ್ ಉಪಾಧ್ಯಕ್ಷರು ಆನಂದ ತೀರ್ಥ ಟ್ರಸ್ಟ್, ಶಾಲಾ ಪ್ರಾಂಶುಪಾಲರಾದ ಡಾ. ಗೀತಾ ಕೋಟ್ಯಾನ್, ಸ್ಕೌಟ್ ಆಯುಕ್ತರಾದ ಶ್ರೀ ಜನಾರ್ದನ್ ಕೊಡವೂರು, ಗೈಡ್ ಆಯುಕ್ತರಾದ ಶ್ರೀಮತಿ ಜ್ಯೋತಿ ಜೆ ಪೈ, ಜಿಲ್ಲಾ ಕಾರ್ಯದರ್ಶಿ ಶ್ರೀ ಆನಂದ ಅಡಿಗ, ಜಿಲ್ಲಾ ಖಜಾಂಚಿ ಶ್ರೀ ಹರಿಪ್ರಸಾದ್ ರೈ, ರಾಜ್ಯ ಸಹಾಯಕ ಸಂಘಟನಾ ಆಯುಕ್ತರು ಶ್ರೀಮತಿ ಸುಮನ್ ಶೇಖರ್ ವೇದಿಕೆಯಲ್ಲಿ ಉಪಸ್ಥಿತರಿದ್ದರು. ನಾಲ್ಕು ದಿನಗಳ ಕಾಲ ವಿವಿಧ ಚಟುವಟಿಕೆಗಳು. ಶ್ರೀಕೃಷ್ಣ ಮಠದ ಅಷ್ಟಮಠಗಳ ವೀಕ್ಷಣೆ, ಶ್ರೀ ಶ್ರೀ ಪರ್ಯಾಯ ಪುತ್ತಿಗೆ ಮಠಾಧೀಶರ ಮುಂದಾಳತ್ವದಲ್ಲಿ ನಗರ ಮೆರವಣಿಗೆ ಹಾಗೂ ಪ್ರತಿಯೊಂದು ಕಬ್–ಬುಲ್‌ಬುಲ್‌ಗಳಿಗೆ ಮಂತ್ರಾಕ್ಷತೆ ನೀಡುವುದರ ಜೊತೆಗೆ 'ಕೋಟಿ ಗೀತ ಗಾಯನ' ಪುಸ್ತಕ ನೀಡಿ ಹಾರೈಸಿರುವುದು, ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ವಹಿಸಿದ್ದರು.











# ವಿಪತ್ತು ನಿರ್ವಹಣಾ ತರಬೇತಿ ಶಿಬಿರ




ರಾಜ್ಯ ಸಂಸ್ಥೆ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ಯುವ ಆಪದ ಮಿತ್ರ ಯೋಜನೆಯ ಅಡಿಯಲ್ಲಿ "ವಿಪತ್ತು ನಿರ್ವಹಣಾ ತರಬೇತಿ ಶಿಬಿರ"ವನ್ನು ಸೆಪ್ಟೆಂಬರ್ 14 ರಿಂದ 20ರ ವರೆಗೆ ಜಿಲ್ಲಾ ತರಬೇತಿ ಮತ್ತು ಶಿಬಿರ ಕೇಂದ್ರ, ಪಿಲಿಕುಳ, ದಕ್ಷಿಣ ಕನ್ನಡ ಜಿಲ್ಲೆ ಇಲ್ಲಿ ಸಂಘಟಿಸಲಾಗಿತ್ತು. ಶಿಬಿರದಲ್ಲಿ ದಕ್ಷಿಣ ಕನ್ನಡ ಹಾಗೂ ಕೊಡಗು ಜಿಲ್ಲೆಯ 500 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು. ದಕ್ಷಿಣ ಕನ್ನಡ ಜಿಲ್ಲೆಯಿಂದ 81 ರೋವರ್ಸ್, 161 ರೇಂಜರ್ಸ್, ಎ.ಎಸ್.ಓ.ಸಿ.–1 ಒಟ್ಟು 243 ಮತ್ತು ಕೊಡಗು ಜಿಲ್ಲೆಯಿಂದ 56 ರೋವರ್ಸ್, 35 ರೇಂಜರ್ಸ್ ಆರ್.ಎಸ್.ಎಲ್. 1–92 ಒಟ್ಟು 335 ರೋವರ್ಸ್–ರೇಂಜರ್ಸ್‌ಗಳು ಭಾಗವಹಿಸಿದ್ದರು.

ಅಕ್ಟೋಬರ್ 14 ರಂದು ಬೆಳಿಗ್ಗೆ 10 ಗಂಟೆಯವರೆಗೆ ನೊಂದಾವಣಿ ನಂತರ ರೋವರ್ ವಿಭಾಗವನ್ನು–4 ಗುಂಪುಗಾಗಿ, ರೇಂಜರ್ ವಿಭಾಗವನ್ನು 6 ಗುಂಪುಗಳಾಗಿ ವಿಂಗಡಿಸಲಾಯಿತು. ಆ ದಿನ Foundamental ವಿಷಯವನ್ನು ತಿಳಿಸಲಾಯಿತು. ರಾತ್ರಿ ಊಟದ ಬಳಿಕ ಶ್ರೀ ಭರತ್ ರಾಜ್ ಶಿಬಿರಾಗ್ನಿ ಕಾರ್ಯಕ್ರಮ ನಡೆಸಿದರು. ಹಾಗೂ ಶಿಬಿರವನ್ನು ನಡೆಸುವ ಬಗ್ಗೆ ಮಾಹಿತಿ ನೀಡಲಾಯಿತು.

ಸೆಪ್ಟೆಂಬರ್ 15 ರಂದು ಉದ್ಘಾಟನಾ ಸಮಾರಂಭವು ಸಂಘಟಿಸಲಾಯಿತು. ಅಧ್ಯಕ್ಷರಾಗಿ ಶ್ರೀ ಬಿ.ಎಂ. ತುಂಬೆ, ಜಿಲ್ಲಾ ಸ್ಕೌಟ್ ಆಯುಕ್ತರು, ಉದ್ಘಾಟಕರಾಗಿ ಶ್ರೀ ವಿಜಯ್ ಪೂಜಾರ್,ಜಿಲ್ಲಾ ನೋಡಲ್ ಅಧಿಕಾರಿ, ಮುಖ್ಯ ಅತಿಥಿಗಳಾಗಿ ಶ್ರೀ ಹರೀಶ್ ರೈ, ಅಧ್ಯಕ್ಷರು, ಪರ್ತಕರ್ತರ ಸಂಘ, ಶ್ರೀ ಶಾಂತಿಲಾಲ್, ಕಮಾಂಡ್ ಆಫೀಸರ್, ಎನ್.ಡಿ.ಆರ್.ಎಫ್. ಶ್ರೀ ಸಂತೋಷ್ ಶೆಟ್ಟಿ, ಹೊಸಲಕ್ಕೆ, ಗುರುಪುರ ಬಂಟರ ಮಾತೃ ಸಂಘ, ಅಧ್ಯಕ್ಷರು, ಶ್ರೀ ಸೋಹನ್ ಅತಿಕಾರಿ, ಅಧ್ಯಕ್ಷರು, ಗುರುಪುರ ಸ್ಥಳೀಯ ಸಂಸ್ಥೆ, ಶ್ರೀ ಸುನೀಲ್ ಗುರುಪುರ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರು ಭಾಗವಹಿಸಿದ್ದರು. ಪ್ರಾಸ್ತಾವಿಕ ಭಾಷಣವನ್ನು ಶ್ರೀಮತಿ ಲತಾ ಮಂಜುನಾಥ್, ಸಹಾಯಕ ರಾಜ್ಯ ಆಯುಕ್ತರು (ರೇಂಜರ್ ವಿಭಾಗ), ಬೆಂಗಳೂರು ಇವರು ನಿರ್ವಹಿಸಿದರು. ಶ್ರೀ ಭರತ್‌ರಾಜ್ ಕೆ., ರಾಜ್ಯ ಸಂಘಟನಾ ಆಯುಕ್ತರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ ಪ್ರತಿಮ್ ಕುಮಾರ್ ಕೆ.ಎಸ್., ಜಿಲ್ಲಾ ಕಾರ್ಯದರ್ಶಿ ಧನ್ಯವಾದ ನೀಡಿದರು ಮತ್ತು ಶ್ರೀಮತಿ ಪೂರ್ಣಿಮಾ ನವೀನ್, ರೇಂಜರ್ ಲೀಡರ್ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಜಿಲ್ಲಾಡಳಿತ ನೋಡಲ್ ಅಧಿಕಾರಿ ಶ್ರೀ ವಿಜಯ ಪೂಜಾರ್‌ರವರಿಂದ ವಿಪತ್ತು ನಿರ್ವಹಣೆ ಬಗ್ಗೆ ಮಾಹಿತಿ ನೀಡಿದರು. ಅಪರಾಹ್ನ 2 ರಿಂದ ಎನ್.ಡಿ.ಆರ್.ಎಫ್.ನ ಶ್ರೀ ಶಾಂತಿಲಾಲ್‌ರವರ ತಂಡದಿಂದ ಮಾಹಿತಿ ಕಾರ್ಯಾಗಾರ



ನಡೆಯಿತು. ರಾತ್ರಿ ಶಿಬಿರಾಗ್ನಿ ಕಾರ್ಯಕ್ರಮ ನಡೆಸಲಾಯಿತು. ಬಿ.ಎಂ. ತುಂಬೆ, ಜಿಲ್ಲಾ ಆಯುಕ್ತರು ಸ್ಕೌಟ್ಸ್ ಹಾಗೂ ಜಿಲ್ಲಾ ಕೋಶಾಧಿಕಾರಿ ನವೀನ್ ಚಂದ್ರ ಉಪಸ್ಥಿತರಿದ್ದರು.

ಸೆಪ್ಟೆಂಬರ್ 16 ರಂದು  ಎನ್.ಡಿ.ಆರ್.ಎಫ್.ನವರ ತರಬೇತಿ ಕಾರ್ಯಾಗಾರವನ್ನು ನಡೆಸಲಾಯಿತು. ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ ಉಪಸ್ಥಿತರಿದ್ದರು.

ಸೆಪ್ಟೆಂಬರ್ 17 ರಂದು ಪೂರ್ವಾಹ್ನ ಜಿಲ್ಲಾ ಆಯುಕ್ತೆ (ಗೈ) ಶ್ರೀಮತಿ ಜಯಶ್ರೀ ಇವರಿಂದ ಯೋಗಾಸನ ತರಬೇತಿ ನಡೆಸಲಾಯಿತು. ಶ್ರೀ ಕ್ಯಾಪ್ಟನ್ ಗೌರವ್‌ರವರು Marine Pollution ಬಗ್ಗೆ ಮಾಹಿತಿ ಕಾರ್ಯಾಗಾರ ನಡೆಸಿಕೊಟ್ಟರು. ಅಪರಾಹ್ನ 2 ರಿಂದ ಎಸ್.ಡಿ.ಎಂ. ಸಂಸ್ಥೆಯ ಪದಾಧಿಕಾರಿಗಳಾದ ಶ್ರೀ ಜೈಯ ವಸಂತ್‌ರಿಂದ ಮಾಹಿತಿ ಕಾರ್ಯಾಗಾರ ನಡೆಯಿತು. ಬಳಿಕ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಕೊಡಗು ಜಿಲ್ಲಾ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರ ಉಪಸ್ಥಿತರಿದ್ದರು.

ಸೆಪ್ಟೆಂಬರ್ 18 ರಂದು ಪೂವಾಹ್ನ 6.30ಕ್ಕೆ ವಿದ್ಯಾರ್ಥಿಗಳಿಗೆ ಏರೋಬಿಕ್ಸ್ ವ್ಯಾಯಾಮ ನಡೆಸಲಾಯಿತು. ಪೂರ್ವಾಹ್ನ ಶ್ರೀಮತಿ ಲತಾ ಮಂಜುನಾಥ್ ಇವರು ವಿಪತ್ತು ನಿರ್ವಹಣ ತರಬೇತಿಯ ಬಗ್ಗೆ ಮಾಹಿತಿ ನೀಡಿದರು. ಆರೋಗ್ಯ ಇಲಾಖೆಯ ಸಿಬ್ಬಂದಿ ವರ್ಗದವರು ಆರೋಗ್ಯದ ಬಗ್ಗೆ ಮಾಹಿತಿ ನೀಡಿದರು. ಇವರೊಂದಿಗೆ ಆರೋಗ್ಯ ತಪಾಸೆ ಕಾರ್ಯಕ್ರಮ ನಡೆಯಿತು. ಅಪರಾಹ್ನ 2 ಗಂಟೆಗೆ ಸ್ನೇಕ್ ಕಿರಣ್ ಎಂದು ಹೆಸರಾದ ಶ್ರೀ ಕಿರಣ್‌ರವರು ಹಾವು ಕಡಿತ ಹಾಗೂ ಹಾವುಗಳ ಬಗ್ಗೆ ಮಾಹಿತಿ ನೀಡಿದರು. ಶಿಬಿರಾಗ್ನಿ ಕಾರ್ಯಕ್ರಮವನ್ನು ಜಿಲ್ಲಾ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಪೂಜಾರಿಯವರು ಉದ್ಘಾಟಿಸಿದರು.

ಸೆಪ್ಟೆಂಬರ್ 19 ರಂದು ಬೆಳಿಗ್ಗೆ 6 ಗಂಟೆಗೆ ಪ್ರಕೃತಿ ವೀಕ್ಷಣೆಗಾಗಿ ಪಿಲಿಕುಳ ನಿಸರ್ಗಧಾಮಕ್ಕೆ ಕಾಲುನಡಿಗೆಯಲ್ಲಿ ಹೋಗಲಾಯಿತು. ಬಳಿಕ ಅಗ್ನಿಶಾಮಕ ಧಾಮದಳದವರಿಂದ ಕಾರ್ಯಾಗಾರ ನಡೆಯಿತು. ಶ್ರೀ ಪ್ರಮೋದ್ ಹಾಗೂ ತಂಡದವರಿಂದ ಪ್ರಾತ್ಯಾಕ್ಷಿಕೆ ನಡೆಯಿತು. ಅಪರಾಹ್ನ ಬೆಂಗಳೂರು HAM INSTITUTE ನ ಸಿಬ್ಬಂದಿ ಶ್ರೀ ಮಂಜುರವರಿಂದ HAM ಬಗ್ಗೆ ವಿಪತ್ತು ಸಮಯದಲ್ಲಿ ಇದರ ಕಾರ್ಯನಿರ್ವಹಣೆ ಬಗ್ಗೆ ತಿಳಿಸಲಾಯಿತು. ಈ ಸಮಯದಲ್ಲಿ ಬೇರೆ ಬೇರೆ ಕಡೆಯಿಂದ HAM ರೇಡಿಯೊ ಮೂಲಕ ಮಾತಾಡಲು ಅವಕಾಶ ನೀಡಲಾಯಿತು. ರಾತ್ರಿ ಭವ್ಯ ಶಿಬಿರಾಗ್ನಿ ಕಾರ್ಯಕ್ರಮದಲ್ಲಿ ಡಾ. ರಾಘವೇಂದ್ರ ಹೊಳ್ಳ ಅತಿಥಿಯಾಗಿ ಭಾಗವಹಿಸಿದ್ದರು.

ಸೆಪ್ಟೆಂಬರ್ 20 ರಂದು ಬೆಳಿಗ್ಗೆ 7 ಸರ್ವಧರ್ಮ ಪ್ರಾರ್ಥನೆ ನಡೆಯಿತು. ಬಳಿಕ ರೆಡ್ ಕ್ರಾಸ್‌ನ ಸಂಸ್ಥೆಯಿಂದ ಪ್ರಾತ್ಯಕ್ಷಿಕೆ ಹಾಗೂ ತರಬೇತಿ ಶ್ರೀ ಸುಚೇತನ್ ಸುವರ್ಣ ರೆಡ್‌ಕ್ರಾಸ್ ತರಬೇತಿದಾರ ಹಾಗೂ ಸಿಬ್ಬಂದಿಗಳಿಂದ ಏರ್ಪಡಿಸಲಾಗಿತ್ತು.

ಸಮಾರೋಪ ಕಾರ್ಯಕ್ರಮದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಅಧ್ಯಕ್ಷತೆ ವಹಿಸಿ ಮಾತನಾಡಿ “ನಿಮ್ಮ ಊರುಗಳಲ್ಲಿ ಸಂಭವಿಸಬಹುದಾದ ವಿಪತ್ತು ಸಂದರ್ಭದಲ್ಲಿ ನೀವು ಮುಂಚೂಣಿಯಲ್ಲಿ ನಿಂತು ಕೆಲಸ ಮಾಡಬೇಕು. ಅದಕ್ಕಾಗಿ ನಿಮ್ಮದೇ ತಂಡ ರಚಿಸಿಕೊಳ್ಳಿ” ಎಂದು ವಿದ್ಯಾರ್ಥಿಗಳಿಗೆ ಕಿವಿ ಮಾತನ್ನಾಡಿದರು. ದಕ್ಷಿಣ ಕನ್ನಡ ಜಿಲ್ಲಾ ಭಾರತ್ ಸ್ಕೌಟ್ಸ್–ಗೈಡ್ಸ್ ವತಿಯಿಂದ ಶ್ರೀ ಸಿಂಧ್ಯಾ ಅವರನ್ನು ಸನ್ಮಾನಿಸಲಾಯಿತು. ತೇಜಸ್ವಿನಿ. ದೀಕ್ಷಾ, ಉಮಾವತಿ, ಅಕ್ಷಯ್ ಮತ್ತು ರೋಶನ್ ಅವರು 7 ದಿನಗಳ ತರಬೇತಿಯಲ್ಲಿ ಕಲಿತ ವಿಷಯಗಳು ಹಾಗೂ ಇಲ್ಲಿನ ಊಟೋಪಚಾರದ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು. ಪದ್ಮಶ್ರೀ ಪುರಸ್ಕೃತ ಕೊಡಗು ಜಿಲ್ಲಾ ಗೈಡ್ಸ್ ಆಯುಕ್ತೆ ಶ್ರೀಮತಿ ರಾಣಿ ಮಾಚಯ್ಯ ಮಾತನಾಡಿ, “ಇಲ್ಲಿ ನೀವು ಪಡೆದುಕೊಂಡಿರುವ ಅನುಭವ ಇತರರೊಂದಿಗೆ ಹಂಚಿಕೊಳ್ಳಿ. ಸ್ಕೌಟ್ಸ್–ಗೈಡ್ಸ್ ತರಬೇತಿ ವೈಯಕ್ತಿಕವಾಗಿ ನೆರವಿಗೆ ಬರಲಿದೆ. ನಿಮ್ಮ ಕೌಶಲ್ಯ ನಿಮಗೆ ಮತ್ತು ಇತರರಿಗೆ ಪ್ರಯೋಜನವಾಗಬೇಕು. ಜೀವನದಲ್ಲಿ ಶಿಸ್ತು ಪಾಲಿಸಿದಾಗ ಮಾತ್ರ ನಿಮ್ಮ ಸಾಧನೆಗೆ ಬೆಲೆ ಬರುತ್ತದೆ” ಎಂದರು. ರಾಜ್ಯ ಸಂಸ್ಥೆಯ ಸಹಾಯಕ ಗೈಡ್ ಆಯುಕ್ತೆ ಶ್ರೀಮತಿ ಲತಾ ಮಂಜುನಾಥ್, ದಕ್ಷಿಣ ಕನ್ನಡ ಜಿಲ್ಲಾ ಆಯುಕ್ತ ಶ್ರೀ ಬಿ. ಮಹಮ್ಮದ್ ತುಂಬೆ ಇತರರು ಉಪಸ್ಥಿತರಿದ್ದರು. ಎ.ಎಸ್.ಓ.ಸಿ. ಶ್ರೀ ಭರತ್ ರಾಜ್ ಸ್ವಾಗತಿಸಿ ನಿರೂಪಿಸಿದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ವಂದಿಸಿದರು.



# ರಾಜ್ಯ ಮಟ್ಟದ ಕಬ್ ಮಾಸ್ಟರ್ಸ್, ಫ್ಲಾಕ್ ಲೀಡರ್ಸ್, ಸ್ಕೌಟ್ ಮಾಸ್ಟರ್ಸ್, ಗೈಡ್ ಕ್ಯಾಪ್ಟನ್ಸ್, ರೋವರ್ ಸ್ಕೌಟ್ ಲೀಡರ್ಸ್, ರೇಂಜರ್ ಲೀಡರ್ಸ್‌ಗಳ ಹಿಮಾಲಯ ವೃಕ್ಷಮಣಿ (ಹೆಚ್‌ಡಬ್ಲ್ಯೂಬಿ) ತರಬೇತಿ ಶಿಬಿರಗಳ ಸಂಕ್ಷಿಪ್ತ ವರದಿ















ಸೆಪ್ಟೆಂಬರ್ 24 ರಿಂದ 30ರ ವರೆಗೆ, ಹಿಮಾಲಯ ವೃಕ್ಷಮಣಿ [HWB (SW) & (GW)] ತರಬೇತಿ ಶಿಬಿರಗಳನ್ನು ಅರ್ಹ ದಳನಾಯಕ–ದಳನಾಯಕಿಯರಿಗೆ ಡಾ॥ ಅನಿಬೆಸೆಂಟ್ ಸ್ಕೌಟ್ಸ್ ಮತ್ತು ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ, ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ ಇಲ್ಲಿ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ ರಾಜ್ಯ ಸಂಸ್ಥೆ ಹಾಗೂ ರಾಷ್ಟ್ರೀಯ ಸಂಸ್ಥೆ ಇವರ ಸಹಯೋಗದೊಂದಿಗೆ ಆಯೋಜಿಸಲಾಗಿತ್ತು.

ಕರ್ನಾಟಕ ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ 137 ಅಭ್ಯರ್ಥಿಗಳು ಹಿಮಾಲಯ ವೃಕ್ಷಮಣಿ [HWB (SW) & (GW)] ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು. ಇದರಂತೆ ಹೊರ ರಾಜ್ಯ ಆಂಧ್ರ ಪ್ರದೇಶದಿಂದಲೂ 08 ಅಭ್ಯರ್ಥಿಗಳು ಸದರಿ ತರಬೇತಿ ಶಿಬಿರದಲ್ಲಿ ಭಾಗವಹಿಸಿದ್ದರು.

ಸದರಿ ತರಬೇತಿ ಶಿಬಿರಗಳಿಗೆ ಶ್ರೀ ಬಿ. ಆನಂದ ಅಡಿಗ, ಎಲ್.ಟಿ (ಸ್ಕೌಟ್), ಶ್ರೀ ಕೆ.ಜಿ. ಗೋಪಾಲಕೃಷ್ಣ, ಎಲ್.ಟಿ (ಸ್ಕೌಟ್), ಶ್ರೀ ವಿ. ಎಮ್. ನಾರಾಯಣಸ್ವಾಮಿ, ಎಲ್.ಟಿ (ಕಬ್), ಶ್ರೀ ರಾಜೇಶ ಎ.ವಿ., ಎಲ್.ಟಿ (ರೋವರ್), ಶ್ರೀಮತಿ ಸುಮನ, ಎಸ್.ವಿ., ಎಲ್.ಟಿ (ರೇಂಜರ್), ಶ್ರೀಮತಿ ರತ್ನಾ, ಎಲ್.ಟಿ (ಗೈಡ್), ಶ್ರೀಮತಿ ಗೌರಾಬಾಯಿ, ಎಲ್.ಟಿ (ಬುಲ್‌ಬುಲ್) ಇವರು ನಾಯಕರಾಗಿ ಕಾರ್ಯನಿರ್ವಹಿಸಿದರು.

ಶ್ರೀ ಮಹೇಶ್ ಸಿ.ಎನ್, ಎಲ್.ಟಿ (ಸ್ಕೌ), ಶ್ರೀ ನಟರಾಜ್, ಎ.ಎಲ್.ಟಿ (ಸ್ಕೌ), ಶ್ರೀ ವಿದ್ಯಾಧರ ಕುತನಿ, ಎ.ಎಲ್.ಟಿ (ಸ್ಕೌ), ಶ್ರೀ ಸಂಪತ್ ಕುಮಾರ, ಎ.ಎಲ್.ಟಿ(ಸ್ಕೌ), ಶ್ರೀ ನಾಗೇಶ್ ಆರ್. ಶಿವಪೂರ, ಎಲ್.ಟಿ (ಸ್ಕೌ) ಮತ್ತು ಎಸ್.ಟಿ.ಸಿ (ಸ್ಕೌ) ಶ್ರೀ ಸತ್ಯಜೀತ್ ಚಟರ್ಜಿ, ಎ.ಎಲ್.ಟಿ (ರೋ), ಶ್ರೀ ಭಾರತಿ ಚಕ್ರವರ್ತಿ, ಎ.ಎಲ್.ಟಿ (ಕ), ಶ್ರೀ ಗಜೇಂದ್ರ ಬಾಬು, ಹೆಚ್‌ಡಬ್ಲೂಬಿ (ಕ), ಶ್ರೀಮತಿ ಪುಷ್ಪಾ ವಿಜಯನ್, ಎಲ್.ಟಿ (ಬುಲ್‌ಬುಲ್), ಶ್ರೀಮತಿ ಬಿ.ವಿ ರಾಮಲತಾ, ಎಲ್.ಟಿ (ರೇ) ಮತ್ತು ರಾಜ್ಯ ಆಯುಕ್ತರು (ಗೈ) ವಯಸ್ಕ ಸಂಪನ್ಮೂಲ ಶ್ರೀಮತಿ ಸರೋಜಾ, ಎ.ಎಲ್.ಟಿ (ಗೈ), ಶ್ರೀಮತಿ ಗಾಯತ್ರಿ. ಜಿ, ಎ.ಎಲ್.ಟಿ (ಗೈ), ಶ್ರೀಮತಿ ಶಾಮಲ ಕೆ.ವಿ, ಎಲ್.ಟಿ (ಗೈ) ಮತ್ತು ಎಸ್.ಟಿ.ಸಿ (ಗೈ), ಶ್ರೀಮತಿ ಜ್ಯೋತಿ, ಎ.ಎಲ್.ಟಿ (ಗೈ) ಇವರು ಸಹನಾಯಕರಾಗಿ ಕಾರ್ಯನಿರ್ವಹಿಸಿದರು. ಸದರಿ ಶಿಬಿರಗಳ ಉದ್ಘಾಟನಾ ಸಮಾರಂಭ ಆಯಾ ಶಿಬಿರಗಳ ನಾಯಕರ ಉಪಸ್ಥಿತಿಯಲ್ಲಿ ಜರುಗಿದವು.

ರಾಷ್ಟ್ರೀಯ ಸಂಸ್ಥೆಯ ಪಠ್ಯಕ್ರಮ (SOT)ಯ ಪ್ರಕಾರ ತರಬೇತಿ ಶಿಬಿರಗಳನ್ನು ನಡೆಸಲಾಯಿತು. ಶ್ರೀ ಚಿನ್ನಸ್ವಾಮಿ ರೆಡ್ಡಿ, ಎಲ್.ಟಿ (ಸ್ಕೌ), ರಾಜ್ಯ ಸ್ಕೌಟ್ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀ ಎನ್. ಶ್ರೀನಿವಾಸನ್, ಎಲ್.ಟಿ (ಸ್ಕೌ), ಇನ್‌ಚಾರ್ಜ್, ರಾಜ್ಯ ಸ್ಕೌಟ್ ಆಯುಕ್ತರು (ವಯಸ್ಕ ಸಂಪನ್ಮೂಲ), ಶ್ರೀ ಎಮ್.ಎ ಚೆಲ್ಲಯ್ಯ, ಸಂಯೋಜಕರು, ಡಾ. ಅನಿಬೆಸೆಂಟ್ ಸ್ಕೌಟ್ ಮತ್ತು ಗೈಡ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ, ಇವರು ಸಂಪನ್ಮೂಲ ವ್ಯಕ್ತಿಗಳಾಗಿ ತರಬೇತಿಯ ಯಶಸ್ವಿಗೆ ಸಹಕರಿಸಿದರು.

ಸೆಪ್ಟೆಂಬರ್ 28 ರಂದು ಜವಾಹರ ನವೋದಯ ವಿದ್ಯಾಲಯ ದೊಡ್ಡಬಳ್ಳಾಪುರ ಇಲ್ಲಿ ವಸತಿ ಸಹಿತ ಹೊರ ಸಂಚಾರ (overnight Hike)ವನ್ನು ಶಿಬಿರಾರ್ಥಿಗಳೆಲ್ಲರೂ ಕೈಗೊಂಡರು.

ಸೆಪ್ಟೆಂಬರ್ 29 ರಂದು ಸಂಜೆ 07.30ಕ್ಕೆ 'ಭವ್ಯ ಶಿಬಿರಾಗ್ನಿ'ಯನ್ನು ಆಯೋಜಿಸಲಾಗಿತ್ತು. ಶ್ರೀ ಪಿ.ಜಿ.ಆರ್ ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು 'ಭವ್ಯ ಶಿಬಿರಾಗ್ನಿ'ಯನ್ನು ಉದ್ಘಾಟಿಸಿ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು ಮತ್ತೆ ಕಾರ್ಯಕ್ರಮದ ಕೊನೆಗೆ ಶಿಬಿರಾರ್ಥಿಗಳು ನೀಡಿದ ಕಾರ್ಯಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿ ತಮ್ಮ ತಮ್ಮ ತಂಡಗಳಲ್ಲಿ ಮತ್ತು ತಾವು ನಡೆಸುವ ತರಬೇತಿ ಶಿಬಿರ(ಸ್ಥಳೀಯ ಮತ್ತು ಜಿಲ್ಲಾ ಸಂಸ್ಥೆಯ ಮಟ್ಟದ)ಗಳಲ್ಲಿ ಇಂತಹ ಸಮಾರಂಭ ಏರ್ಪಡಿಸಿ, ಚಟುವಟಿಕೆಗಳ ಮಹತ್ವವನ್ನು ಎಲ್ಲರಿಗೂ ತಿಳಿಸುವಂತೆ ಹಿತವಚನ ನುಡಿದರು.

ಸೆಪ್ಟೆಂಬರ್ 30 ರಂದು ಬೆಳಗ್ಗೆ ಸರ್ವಧರ್ಮ ಪ್ರಾರ್ಥನೆಯನ್ನು ನಡೆಸಲಾಯಿತು. ನಂತರದಲ್ಲಿ ಶಿಬಿರಾರ್ಥಿಗಳಿಂದ ಮೌಲ್ಯಮಾಪನ, ಶಿಬಿರಾರ್ಥಿಗಳಿಗೆ ಮುಕ್ತಸಭೆ ಹಾಗೂ ಧ್ವಜ ಅವರೋಹಣ ಕಾರ್ಯಕ್ರಮ ನಡೆಯಿಸಿ, ಎಲ್ಲರೂ ರಾಷ್ಟ್ರಗೀತೆ ಹೇಳುವುದರೊಂದಿಗೆ ತರಬೇತಿ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಲಾಯಿತು.



# ಮೈಸೂರು ದಸರಾ ವೀಕ್ಷಣೆ

ಅಕ್ಟೋಬರ್ 01 ರಿಂದ 03ರ ವರಿಗೆ ರಾಜ್ಯ ಸಂಸ್ಥೆ ಮತ್ತು ಮೈಸೂರು ಜಿಲ್ಲಾ ಸಂಸ್ಥೆಯ ಸಹಯೋಗದಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಮಾರ್ಗದರ್ಶನದಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ ಜಿಲ್ಲಾ ಮುಖ್ಯ ಆಯುಕ್ತರುಗಳು, ಜಿಲ್ಲಾ ಕಾರ್ಯದರ್ಶಿಗಳು, ರಾಜ್ಯ ಸಂಸ್ಥೆಯ ಸಂಘಟಕರುಗಳು ಮತ್ತು ಕುಟುಂಬದವರಿಗೆ ವಿಶ್ವ ವಿಖ್ಯಾತ ಮೈಸೂರು ದಸರಾ ವೈಭವ ವಿಕ್ಷಣೆ ಕಾರ್ಯಕ್ರಮ ಆಯೋಜಿಸಲಾಗಿತ್ತು

ಮೈಸೂರು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಕಾರ್ಯದರ್ಶಿ ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕೋಶಾಧಿಕಾರಿ ಶ್ರೀ ಕೆ.ಬಿ ಗುರುಮೂರ್ತಿ, ಶ್ರೀ ರಾಮಪ್ರಸಾದ್ ಮತ್ತು ಎಲ್ಲಾ ತಂಡದವರು ಉತ್ತಮವಾಗಿ ಊಟದ ವ್ಯವಸ್ಥೆ, ವಸತಿ ವ್ಯವಸ್ಥೆ, ಬಸ್ ವ್ಯವಸ್ಥೆ, ಮತ್ತು  ಮೈಸೂರಿನ ಪ್ರಸಿದ್ಧ ತಾಣಗಳಾದ ಮೈಸೂರು ಅರಮನೆ, ನಂಜನಗೂಡು ಶ್ರೀಕಂಠೇಶ್ವರ ದೇವಸ್ಥಾನ, ಕೆ.ಆರ್.ಎಸ್ ಅಣೆಕಟ್ಟು, ಬೃಂದಾವನ ಗಾರ್ಡನ್, ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಮೈಸೂರು ನಗರದ ವಿವಿಧ ರಸ್ತೆಗಳ ದೀಪಾಲಂಕಾರ ಮುಂತಾದ ಸ್ಥಳಗಳ ವಿಕ್ಷಣೆ ಮಾಡಲು ಅತ್ಯಂತ ಉತ್ತಮವಾಗಿ ಸಂಘಟಿಸಿರುತ್ತಾರೆ ಮತ್ತು ಎಲ್ಲರಿಗೂ ವಿಶೇಷ ಕಿಟ್ ನೀಡಿರುತ್ತಾರೆ.

ಬಾಗಲಕೋಟೆ, ಬೆಳಗಾವಿ, ಬಳ್ಳಾರಿ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಧಾರವಾಡ, ಮಧುಗಿರಿ, ಕೋಲಾರ, ತುಮಕೂರು, ವಿಜಯಪುರ, ಯಾದಗಿರಿ ಜಿಲ್ಲೆಗಳ ಪದಾಧಿಕಾರಿಗಳು, ಸಂಘಟಕರು ಮತ್ತು ಕುಟುಂಬದ ಸದಸ್ಯರು ಭಾಗವಹಿಸಿದ್ದರು, ಅನುಭವ ಹಂಚಿಕೊಂಡ ಸದಸ್ಯರು ಮಾತನಾಡಿ ಸಂತೋಷ ಹಾಗೂ ಮರೆಯಲಾಗದ ಕ್ಷಣಗಳನ್ನು ಸ್ಮರಿಸಿ ಕೃತಜ್ಞೆತೆಗಳನ್ನು ಹಾಗೂ ಹರ್ಷವನ್ನು ವ್ಯಕ್ತಪಡಿಸಿದರು.



# ರಾಜ್ಯ ಮುಖ್ಯ ಆಯುಕ್ತರ ನೇತೃತ್ವದಲ್ಲಿ ಆಗಸ್ಟ್–ಸೆಪ್ಟೆಂಬರ್ 2025ರಲ್ಲಿ ನಿರ್ವಹಿಸಲ್ಪಟ್ಟ ಮುಖ್ಯ ಕಾರ್ಯಚಟುವಟಿಕೆಗಳು

*** The Bharat Scouts and Guides conducted the Rashtrapati Award Presentation Rally at the at Bharat Mandapam, New on 31st August, 2025 at 2 pm. Dr. Mansukh Mandavia, Hon'ble Minister of Labour and Employment & Youth Affairs & Sports, Government of India presented the Rashtrapati Awards to the Scout / Guide / Rover / Ranger Awards.**





* 01 ಸೆಪ್ಟೆಂಬರ್ 2025 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಯಾದಗಿರಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು  ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ರಾಜ್ಯ ಜಂಟಿ ಕಾರ್ಯದರ್ಶಿ ಗೈಡ್ ಶ್ರೀಮತಿ ಕೃಪಾ ವಿಜಯ್, ಉಪನಿರ್ದೇಶಕರು, ಸೇರಿದಂತೆ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.

* 02 ಸೆಪ್ಟೆಂಬರ್ 2025 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರು ಬೀದರ್ ಜಿಲ್ಲಾ ಸಂಸ್ಥೆಯಲ್ಲಿ ನಿರ್ಮಾಣ ಹಂತದಲ್ಲಿರುವ ಸ್ಕೌಟ್ ಭವನದ ಬೇಟಿ ಮಾಡಿ ಕಾಮಗಾರಿ ವಿಕ್ಷಣೆ ಮಾಡಿ ಸೂಕ್ತ ಸಲಹೆ ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರಾದ ಡಾ.ಹೆಚ್.ವಿ ಭರಶೆಟ್ಟಿ, ಸಂಧ್ಯಾರಾಣಿ ಪಾಟೀಲ್, ಜಿಲ್ಲಾ ಉಪಾಧ್ಯಕ್ಷರಾದ ಶ್ರೀಮತಿ ಲೀಲಾವತಿ ಚಕೋತೆ, ಜಿಲ್ಲಾ ಕಾರ್ಯದರ್ಶಿ ರಮೇಶ್ ತಿಪ್ಪಶೆಟ್ಟಿ, ಜಂಟಿ ಕಾರ್ಯದರ್ಶಿ ರಾಜೇಶ್ವರಿ ಭಾಲ್ಕಿ, ಸಹಕಾರ್ಯದರ್ಶಿ ಶ್ರೀ ರಾಚಯ್ಯ ನಾಸಿ, ಹಾಗೂ ಮುಂತಾದವರು ಉಪಸ್ಥಿತರಿದ್ದರು.





* 02 ಸೆಪ್ಟೆಂಬರ್ 2025 ರಂದು ಬೀದರ್ ಜಿಲ್ಲಾ ಸಂಸ್ಥೆ ವತಿಯಿಂದ ಬೀದರ್ ವಿಶ್ವವಿದ್ಯಾಲಯ ಹಾಗೂ ಶಾಲಾ ಶಿಕ್ಷಣ ಇಲಾಖೆ ಪದವಿ ಪೂರ್ವ ಕಾಲೇಜು ಉಪನ್ಯಾಸಕ ಉಪನ್ಯಾಸಕರಿಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು  ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರು ಉದ್ಘಾಟಿಸಿ ಸಂಸ್ಥೆಯ ಚಟುವಟಿಕೆಗಳ ಬಗ್ಗೆ ಮಾಹಿತಿ ನೀಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಬಿ.ಎಸ್. ಬಿರಾದರ್ ಹಾಗೂ ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಹಾಗೂ ವಿವಿಧ ಕಾಲೇಜುಗಳ ಉಪನ್ಯಾಸಕರು ಭಾಗವಹಿಸಿ ಯಶಸ್ವಿಗೊಳಿಸಿದರು.



* 03 ಸೆಪ್ಟೆಂಬರ್ 2025 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ 'ಯುವ ಆಪದ  ಮಿತ್ರ' ತರಬೇತಿಗಳು ಸಂಘಟಿಸುವ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಕಾರ್ಯದರ್ಶಿ ಶ್ರೀ ಗಂಗಪ್ಪಗೌಡ .ಕೆ ರವರು, ರಾಜ್ಯ ವಿಪತ್ತು ನಿರ್ವಹಣಾ  ಪ್ರಾಧಿಕಾರದ ವಿವಿಧ ಅಧಿಕಾರಿಗಳು ಹಾಗೂ ರಾಜ್ಯ ಸಂಸ್ಥೆಯ ಅಧಿಕಾರಿಗಳು, ಉಪಸ್ಥಿತರಿದ್ದರು.

* ಸೆಪ್ಟೆಂಬರ್ 07 ರಂದು ಬೆಳಿಗ್ಗೆ 11.00 ಗಂಟೆಗೆ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಸ್ಕಿಲೋ–19 ವೆಬಿನಾರ್ ಆಯೋಜಿಸಲಾಗಿದೆ. ಸದರಿ ವರ್ಚುವಲ್ ಕಾರ್ಯಾಗಾರದಲ್ಲಿ ಬೆಂಕಿಯ ವಿಧಾನಗಳು ಪ್ರಾವೀಣ್ಯತಾ ಪದಕ ಬಗ್ಗೆ ಶ್ರೀಮತಿ ಲಕ್ಷ್ಮೀ ಎಸ್. ಬಹದ್ದೂರಿ. ಸಹಾಯಕ ನಾಯಕ ತರಬೇತುದಾರರು, ಬೆಳಗಾವಿ ಜಿಲ್ಲೆ ರವರು ಪ್ರಾವಿಣ್ಯತಾ ಪದಕದ ಬಗ್ಗೆ ಮಾಹಿತಿ ನೀಡಿದ್ದರು. ವಿದ್ಯಾರ್ಥಿಗಳು ಹಾಗೂ ದಳ ನಾಯಕರುಗಳು ಭಾಗವಹಸಿ ಯಶಸ್ವಿಗೊಳಿಸಿದರು.

*** The Bharat Scouts and Guides, Karnataka State Association and Udupi District Association, in collaboration with the National Disaster Management Authority and Karnataka State Disaster Management Authority, have organized the Yuva Apda Mitra BSG Volunteer Training from 7th to 13th September 2025 at Dr. V.S. Acharya Scouts and Guides District Training Centre, Pragathi Nagar, Udupi.**

**The Inaugural Ceremony was held on 9th September 2025 under the chairmanship of P.G.R. Sindhia, State Chief Commissioner. The camp was inaugurated by Shri Abid Gafoor Abdul Khader, Additional Deputy Commissioner. Sri Basava Reddar, Tahsildar, Karnataka State Disaster Management Authority, graced the occasion as the Chief Guest. Shri Jayakar Shetty Indrali, District Chief Commissioner, Sri Hariprasad Rai, Dist. Tresurer, State Organising Commissioner Sri M. Prabhakar Bhat, BS&G, YAMS Cordinator, Smt. Latha Manjunath, Sri Anand Adiga, Smt. Suman Shekhar present on the occasion. 300 Rovers and Rangers participation in this Training.**





* ಹಾಸನ ಜಿಲ್ಲಾ ಸಂಸ್ಥೆಗೆ ಸೆಪ್ಟೆಂಬರ್ 10 ರಂದು ರಾಜ್ಯ ಮುಖ್ಯ ಆಯುಕ್ತರು ಶ್ರೀ ಪಿ.ಜಿ.ಆರ್ ಸಿಂಧ್ಯ ರವರು ಬೇಟಿ ನೀಡಿ ಜಿಲ್ಲಾ ಪದಾಧಿಕಾರಿಗಳೊಂದಿಗೆ ಸಭೆಯನ್ನು ನಡೆಸಿ ನಂತರ ಜಿಲ್ಲಾ ಸಂಸ್ಥೆಯ ಚಟುವಟಿಕೆಯ ಬಗ್ಗೆ ಹಾಸನಾಂಬ ಸೇವಾ ಶಿಬಿರದ ಬಗ್ಗೆ ಚರ್ಚೆ ನಡೆಸಲಾಯಿತು ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರು ಶ್ರೀ ಎಂ. ಪ್ರಭಾಕರ್ ಭಟ್, ಜಿಲ್ಲಾ ಆಯುಕ್ತರು (ಸ್ಕೌಟ್ಸ್), ಶ್ರೀ ಸ್ಟಿಫನ್ ಪ್ರಕಾಶ್, ಜಿಲ್ಲಾ ಆಯುಕ್ತರು (ಗೈಡ್), ಶ್ರೀಮತಿ ಜಯರಮೇಶ್, ಜಿಲ್ಲಾ ಕಾರ್ಯದರ್ಶಿ ಶ್ರೀ ಸುರೇಶ್ ಗುರೂಜಿ, ತಾಲೂಕು ಕಾರ್ಯದರ್ಶಿ ಶ್ರೀಮತಿ ವನಜಾಕ್ಷಿ, ASOCಪ್ರಿಯಾಂಕ ಅವರು ಪ್ರೇಮಾ ಪ್ರಕಾಶ್ ಉಪಸ್ಥಿತರಿದ್ದರು.

* ಸೆಪ್ಟೆಂಬರ್ 12 ರಂದು ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಬಳ್ಳಾರಿ, ವಿಜಯನಗರ, ಕೊಪ್ಪಳ ಜಿಲ್ಲೆಗಳ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ ಸಭೆಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಸಮಗ್ರ ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ, ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 14ರ ಬೆಳಿಗ್ಗೆ 11.00 ಗಂಟೆಗೆ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಸ್ಕಿಲೋ–20 ವೆಬಿನಾರ್ ಆಯೋಜಿಸಲಾಗಿತ್ತು. ಸದರಿ ವರ್ಚುವಲ್ ಕಾರ್ಯಾಗಾರದಲ್ಲಿ ಬುಕ್ ಬೈಂಡರ್ ಪ್ರಾವೀಣ್ಯತಾ ಪದಕ (Book Bindor Proficiency Badge) ಬಗ್ಗೆ ಡಾ. ಇಂಚರ ನಾರಾಯಣಸ್ವಾಮಿ, ನಾಯಕ ತರಬೇತುದಾರರು, ಕೋಲಾರ ಜಿಲ್ಲೆ ರವರು ಪ್ರಾವಿಣ್ಯತಾ ಪದಕದ ಬಗ್ಗೆ ಮಾಹಿತಿ ನೀಡಿದರು.

* ಸೆಪ್ಟೆಂಬರ್ 13 ರಂದು ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ವಿಶ್ವ ವಿದ್ಯಾಲಯದಗಳ ಸ್ಕೌಟ್ಸ್ ಮತ್ತು ಗೈಡ್ಸ್ ನೋಡಲ್ ಅಧಿಕಾರಿಗಳ ಸಭೆಯನ್ನು ವರ್ಚುವಲ್ ಮೂಲಕ ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ಮಾತನಾಡಿ ರಾಜ್ಯದ ಎಲ್ಲಾ ವಿಶ್ವ ವಿದ್ಯಾಲಯದಗಳಲ್ಲಿ ಸ್ಕೌಟ್ ಮತ್ತು ಗೈಡ್ಸ್ ಘಟಕಗಳು ಪ್ರಾರಂಭಿಸುವ ಬಗ್ಗೆ ಮತ್ತು ಚಟುವಟಿಕೆಗಳು ಸಂಘಟಿಸುವ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಹಾಗೂ ವಿಶ್ವವಿದ್ಯಾಲಯ ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 13 ರಂದು ರಾಜ್ಯ ಸಂಸ್ಥೆಯ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ರಾಯಚೂರು, ಕಲ್ಬುರ್ಗಿ, ಯಾದಗಿರಿ, ಬೀದರ್ ಜಿಲ್ಲೆಗಳ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪದಾಧಿಕಾರಿಗಳ ಸಭೆಯನ್ನು ಆಯೋಜಿಸಲಾಗಿತ್ತು. ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಸಮಗ್ರ ಅಭಿವೃದ್ಧಿಯ ಬಗ್ಗೆ ಚರ್ಚಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ, ಜಿಲ್ಲಾ ಸಂಸ್ಥೆ, ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಭಾಗವಹಿಸಿದ್ದರು.

* ಸೆಪ್ಟೆಂಬರ್ 15 ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರ ಮಾರ್ಗದರ್ಶನದಂತೆ ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆಯ ದಿನದಂದು ನಮ್ಮ ಭಾರತದ ಸಂವಿಧಾನ ಪೀಠಿಕೆಯನ್ನು ಓದುವ ಮೂಲಕ ಪ್ರಜಾಪ್ರಭುತ್ವದ ದಿನಾಚರಣೆ ಆಚರಿಸಲಾಯಿತು. ಈ ಸಂದರ್ಭದಲ್ಲಿ ರಾಜ್ಯ ಸಂಸ್ಥೆ ಪದಾಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.







* ಸೆಪ್ಟೆಂಬರ್ 16 ರಂದು ಮಾನ್ಯ ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಹಾವೇರಿ ಜಿಲ್ಲಾ ಕಚೇರಿಗೆ ಭೇಟಿ ನೀಡಿ ಚಟುವಟಿಕೆಗಳ ಬಗ್ಗೆ ಹಾಗೂ ಅಭಿವೃದ್ಧಿ ಕೆಲಸಗಳ ಬಗ್ಗೆ ಸಮಾಲೋಚನೆ ಸಭೆ ಆಯೋಜಿಸಲಾಗಿತ್ತು. ನಂತರ ಹಾವೇರಿ ಜಿಲ್ಲಾಧಿಕಾರಿಗಳಾದ ಮಾನ್ಯ ಶ್ರೀ ವಿಜಯ ಮಹಾಂತೇಶ್ ದಾನಮ್ಮ ಅವರನ್ನು ಭೇಟಿ ಮಾಡಿ ಸಂಸ್ಥೆಯ ಕೆಲಸ ಹಾಗೂ ಸಂಸ್ಥೆಯ ನಿವೇಶನದ ಬಗ್ಗೆ ಚರ್ಚಿಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರಾದ ಶ್ರೀಮತಿ ಮಂಜುಳ .ಸಿ ಹಾಗು ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 16 ರಂದು ರಾಜ್ಯ ಕೇಂದ್ರ ಕಛೇರಿ ಬೆಂಗಳೂರು ಇಲ್ಲಿ ಬೆಂಗಳೂರು ದಕ್ಷಿಣ ಜಿಲ್ಲಾ ವತಿಯಿಂದ ಆಯೋಜಿಸಲಾಗಿದ್ದ ಕಾಲೇಜು ಉಪನ್ಯಾಸಕರುಗಳ ಪ್ರಾರಂಭಿಕ ಶಿಬಿರದಲ್ಲಿ ಮಾಜಿ ಸಚಿವರು ಮತ್ತು ರಾಜ್ಯ ಮುಖ್ಯ ಆಯುಕ್ತರಾದ ಮಾನ್ಯ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಪಾಲ್ಗೊಂಡು ಸಂಸ್ಥೆಯ ಬಗ್ಗೆ ಮಾಹಿತಿ ನೀಡಿ ಶುಭಹಾರೈಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಪದಾಧಿಕಾರಿಗಳಾದ ಶ್ರೀ ಎಂ.ಎಸ್ ಸತೀಶ್, ಶ್ರೀ ಮಧುಸೂದನ್ ಎ.ಎಸ್, ಶ್ರೀ ನಾರಾಯಣಸ್ವಾಮಿ ಟಿ.ಕೆ, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ಹಾಗೂ ಮುಂತಾದವರು ಉಪಸ್ಥಿತರಿದ್ದರು.





* ಸೆಪ್ಟೆಂಬರ್ 17 ರಂದು ರಾಜ್ಯ ಮುಖ್ಯ ಆಯುಕ್ತರು ಮತ್ತು ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಕೊಪ್ಪಳ ಜಿಲ್ಲೆಗೆ ಭೇಟಿ ನೀಡಿ ಕೊಪ್ಪಳ ಜಿಲ್ಲಾ ಪದಾಧಿಕಾರಿಗಳ ಸಭೆ ನಡೆಸಿ ಜಿಲ್ಲೆಯಲ್ಲಿ ಮುಂದಿನ ದಿನಗಳಲ್ಲಿ ಜರುಗಬೇಕಾದ ಕೆಲಸಗಳು ಹಾಗೂ ಚಟುವಟಿಕೆಗಳ ಬಗ್ಗೆ ಸಭೆ ನಡೆಸಿದರು. ಈ ಸಂದರ್ಭ ಶಾಸಕರಾದ ಶ್ರೀ ಬಸವರಾಜ ರಾಯರೆಡ್ಡಿ ರವರು ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಸಿದ್ದರಾಮಸ್ವಾಮಿರವರು ಹಾಗೂ ಜಿಲ್ಲಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 17 ರಂದು ಕೊಪ್ಪಳ ಜಿಲ್ಲಾ ಖಾಸಗಿ ಶಾಲೆಗಳ ಒಕ್ಕೂಟ ಮತ್ತು ತಾಲ್ಲೂಕು ಘಟಕ ಕೊಪ್ಪಳ ರವರು ಆಯೋಜಿಸಲಾಗಿದ್ದ ಶಿಕ್ಷಕರ ದಿನಾಚರಣೆ ಹಾಗೂ ಉತ್ತಮ ಶಿಕ್ಷಕ ಪ್ರಶಸ್ತಿ ಪ್ರಧಾನ ಸಮಾರಂಭದಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಭಾಗವಹಿಸಿ ಸ್ಕೌಟ್ಸ್ ಮತ್ತು ಗೈಡ್ಸ್ ಮಾಹಿತಿ ನೀಡಿ ಘಟಕಗಳು ಪ್ರಾರಂಭಿಸುವ ಬಗ್ಗೆ ಮಾಹಿತಿ ನೀಡಿದರು. ಈ ಸಂದರ್ಭದಲ್ಲಿ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 19 ರಂದು ಮಾನ್ಯ ಮಾಜಿ ಸಚಿವರು ಹಾಗೂ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರ 77ನೇ ಜನ್ಮದಿನ ಅಂಗವಾಗಿ ಶ್ರೀ ಲೋಕ ನಾಯಕ್ ಜಯಪ್ರಕಾಶ್ ನಾರಾಯಣ್ ರವರ ಹೆಸರಿನಲ್ಲಿ ನೂತನ ಮುಕ್ತ ಗುಂಪು ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷರಾದ ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪ, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪಗೌಡ, ಶ್ರೀಮತಿ ಗೀತ ಸಿಂಧ್ಯ, ಶ್ರೀಮತಿ ಪೃಥ್ವಿ ಸಿಂಧ್ಯ, ಬೆಂಗಳೂರು ದಕ್ಷಿಣ ಜಿಲ್ಲೆ ಮುಖ್ಯ ಆಯುಕ್ತರಾದ ಶ್ರೀ ಎಂ.ಕೆ. ಖಾನ್ ಹಾಗು ರಾಜ್ಯ ಸಂಸ್ಥೆ, ಬೆಂಗಳೂರು ಉತ್ತರ ಹಾಗೂ ದಕ್ಷಿಣ ಜಿಲ್ಲಾ ಸಂಸ್ಥೆಗಳ ಮತ್ತು ವಿವಿಧ ಪದಾಧಿಕಾರಿಗಳು, ವಿವಿಧ ಶಾಲೆಗಳ ಕಬ್ಸ್ ಬುಲ್-ಬುಲ್, ಸ್ಕೌಟ್ಸ್-ಗೈಡ್ಸ್, ರೋವರ್ಸ್, ರೇಂಜರ್ಸ್‌ಗಳು ಮತ್ತು ದಳ ನಾಯಕರುಗಳು ಮತ್ತು ವಿವಿಧ ಅಧಿಕಾರಿಗಳು ಮತ್ತು ಶ್ರೀ ಪಿ.ಜಿ.ಆರ್. ಸಿಂಧ್ಯ ಅಭಿಮಾನಿಗಳು ಸೇರಿ ಯಶಸ್ವಿಗೊಳಿಸಿದರು.



* ಸೆಪ್ಟೆಂಬರ್ 21 ಬೆಳಿಗ್ಗೆ 11.00 ಗಂಟೆಗೆ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಹುಟ್ಟು ಹಬ್ಬದ ಸಂಭ್ರಮ ಮತ್ತು ಶ್ರೀಯುತರ ಅಧ್ಯಕ್ಷತೆಯಲ್ಲಿ 'ಸ್ಕೌಟ್ ಸ್ಕಿಲೋ-21' ಕಾರ್ಯಕ್ರಮ ಆಯೋಜಿಸಲಾಗಿತ್ತು. ಸದರಿ ಕಾರ್ಯಕ್ರಮದಲ್ಲಿ ನೈರ್ಮಲ್ಯ ಪ್ರವರ್ತಕ ಪ್ರಾವೀಣ್ಯತಾ ಪದಕ ಬಗ್ಗೆ ಶ್ರೀಮತಿ ಮಂಜುಳ. ಸಿ, ಎಲ್.ಟಿ (ಗೈಡ್) ರಾಜ್ಯ ಸಂಘಟನಾ ಆಯುಕ್ತರು ರವರು ಪ್ರಾವೀಣ್ಯತಾ ಪದಕದ ಬಗ್ಗೆ ಮಾಹಿತಿ ನೀಡಿದರು.





* ಸೆಪ್ಟೆಂಬರ್ 21 ರಂದು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಕಾರವಾರ (ಉತ್ತರ ಕನ್ನಡ ಜಿಲ್ಲೆ) ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆಗಳ ಪ್ರಗತಿ ಪರಿಶೀಲನಾ ಸಭೆಯನ್ನು ಆಯೋಜಿಸಲಾಗಿತ್ತು. ಈ ಸದರಿ ಸಭೆಯಲ್ಲಿ ಜಿಲ್ಲಾ ಮುಖ್ಯ ಆಯುಕ್ತರಾದ ಡಾ. ಬಿ.ಸಿ. ಸಭಾಹಿತ್, ರಾಜ್ಯ ಸಂಘಟನಾ ಆಯುಕ್ತರಾದ ಶ್ರೀ ಎಂ. ಪ್ರಭಾಕರ್ ಭಟ್ ಹಾಗೂ ಜಿಲ್ಲಾ ಮತ್ತು ಸ್ಥಳೀಯ ಸಂಸ್ಥೆ ಪದಾಧಿಕಾರಿಗಳು ಉಪಸ್ಥಿತರಿದ್ದರು.

* ಸೆಪ್ಟೆಂಬರ್ 22 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್.ಸಿಂಧ್ಯ ರವರು ವಿಜಯನಗರ ಜಿಲ್ಲೆ ಹೊಸಪೇಟೆ ಜಿಲ್ಲಾಧಿಕಾರಿಗಳಾದ ಶ್ರೀಮತಿ ಕವಿತಾ ಮಣ್ಣಿಕೇರಿ ಅವರನ್ನು ಬೇಟಿ ಮಾಡಿ ಕಾರ್ಯಕ್ರಮ ಚಟುವಟಿಕೆಗಳ ಬಗ್ಗೆ ಚರ್ಚಿಸಿ ಸಹಕಾರ ಮಾರ್ಗದರ್ಶನ ನೀಡುವಂತೆ ಕೋರಿದರು. ಈ ಸಂದರ್ಭದಲ್ಲಿ ವಿವಿಧ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 22 ರಂದು ಜಿಲ್ಲಾ ಸಂಸ್ಥೆ ವಿಜಯನಗರ ಜಿಲ್ಲೆ ಹೊಸಪೇಟೆ, ರತ್ನಬಾಯಿ ಸ್ಮಾರಕ ಪೂರ್ವ ಪ್ರಾಥಮಿಕ ಶಾಲೆಯಲ್ಲಿ ನಡೆದ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನ ಸಭೆಯಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರು ಭಾಗವಹಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಹಾಗೂ ಶಿಕ್ಷಣಾಧಿಕಾರಿಗಳು ಹಾಗೂ ತಾಲೂಕಿನ ಎಲ್ಲಾ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಜಿಲ್ಲಾ ಸಂಘಟಕರು ಭಾಗವಹಿಸಿದ್ದರು.




* ಸೆಪ್ಟೆಂಬರ್ 22 ರಂದು ಜಿಲ್ಲಾ ಸಂಸ್ಥೆ ಬಳ್ಳಾರಿ ಶ್ರೀ ಮೇಧಾ ಪದವಿ ಮಹಾ ವಿದ್ಯಾಲಯದಲ್ಲಿ ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾ ರವರ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಪ್ರಗತಿ ಪರಿಶೀಲನಾ ಸಭೆ ಜರುಗಿತು. ಈ ಸಂದರ್ಭದಲ್ಲಿ ಜಿಲ್ಲಾ ಪದಾಧಿಕಾರಿಗಳು ಹಾಗೂ ಶಿಕ್ಷಣಾಧಿಕಾರಿಗಳು ಹಾಗೂ ತಾಲೂಕಿನ ಎಲ್ಲಾ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಹಾಗೂ ಜಿಲ್ಲಾ ಸಂಘಟಕರು ಭಾಗವಹಿಸಿದ್ದರು.

* ರಾಜ್ಯ ಸಂಸ್ಥೆ ವತಿಯಿಂದ ಸೆಪ್ಟೆಂಬರ್ 26 ರಂದು ರಾಜ್ಯ ಕಾರ್ಯಕಾರಿ ಸಮಿತಿ ಸಭೆಯನ್ನು ಮಾಜಿ ಸಚಿವರು ಕರ್ನಾಟಕ ಸರ್ಕಾರ ಮತ್ತು ರಾಜ್ಯ ಮುಖ್ಯ ಆಯುಕ್ತರು ಹಾಗೂ ಅಧ್ಯಕ್ಷರು ರಾಜ್ಯ ಕಾರ್ಯಕಾರಿ ಸಮಿತಿ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಲಾಗಿತ್ತು. ಈ ಸಭೆಯಲ್ಲಿ ರಾಷ್ಟ್ರೀಯ ಮುಖ್ಯ ಆಯುಕ್ತರಾದ ಡಾ. ಕೆ.ಕೆ. ಖಂಡೇಲ್‌ವಾಲ್ ರವರು, ರಾಷ್ಟ್ರೀಯ ಕಾರ್ಯನಿರ್ವಾಹಕ ನಿರ್ದೇಶಕರಾದ ಶ್ರೀ ಅಮರ್ ಛತ್ರಿರವರು ವಿಶೇಷ ಭಾಗವಹಿಸಿ ಶುಭಹಾರೈಸಿದರು. ಸದರಿ ಸಭೆಯಲ್ಲಿ ರಾಜ್ಯ ಆಯುಕ್ತರಾದ ಶ್ರೀ ಎಂ.ಎ ಖಾಲೀದ್, ಶ್ರೀಮತಿ ಗೀತಾ ನಟರಾಜ್, ಶ್ರೀ ಚಿನ್ನಸ್ವಾಮಿ ರೆಡ್ಡಿ, ಶ್ರೀಮತಿ ರಾಮಲತಾ ಬಿ.ವಿ., ರಾಜ್ಯ ಕೋಶಾಧಿಕಾರಿ ಶ್ರೀ ಟಿ ಪ್ರಭಾಕರ್, ರಾಜ್ಯ ಕಾರ್ಯದರ್ಶಿ ಶ್ರೀ ಕೆ. ಗಂಗಪ್ಪ ಗೌಡ ಹಾಗೂ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರುಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದರು.

* ಸೆಪ್ಟೆಂಬರ್ 28 ರಂದು ರಾಜ್ಯ ಸಂಸ್ಥೆ ವತಿಯಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ರವರ ಅಧ್ಯಕ್ಷತೆಯಲ್ಲಿ ಸ್ಕೌಟ್ ಸ್ಕಿಲೋ 22 ವರ್ಚುವಲ್ ವೆಬಿನಾರ್ ಆಯೋಜಿಸಲಾಗಿತ್ತು. ಡಾ ಧನುಜರಾಣಿ, ಪ್ರಾಧ್ಯಾಪಕರು ಮತ್ತು ಜಿಲ್ಲಾ ಆಯುಕ್ತರು ಬಳ್ಳಾರಿ ಜಿಲ್ಲೆ ಇವರು (Topic- " A Healthy Mouth For A Healthy Body. "Oral Health Awareness Talk.) ಬಗ್ಗೆ ಅತ್ಯಂತ ಉತ್ತಮವಾಗಿ ಮಾತನಾಡಿದರು. ಈ ಸಂದರ್ಭದಲ್ಲಿ ವಿವಿಧ ಪದಾಧಿಕಾರಿಗಳು ಹಾಗೂ ಸದಸ್ಯರುಗಳು ವಿದ್ಯಾರ್ಥಿಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದರು.



* ಸೆಪ್ಟೆಂಬರ್ 29 ರಂದು ಚಿಕ್ಕಮಗಳೂರು ಜಿಲ್ಲಾ ಸಂಸ್ಥೆಯ ಶ್ರೀ ಎ.ಎಂ. ನಿಂಗೇಗೌಡ ಸ್ಮಾರಕ ಸ್ಕೌಟ್ಸ್ ಮತ್ತು ಗೈಡ್ಸ್ ಜಿಲ್ಲಾ ತರಬೇತಿ ಕೇಂದ್ರದ ಕಟ್ಟಡ ಸಮುಚ್ಚಯದ ಭೂಮಿ ಪೂಜೆ, ಶಂಕುಸ್ಥಾಪನೆ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಭಾಗವಹಿಸಿ ಶಂಕುಸ್ಥಾಪನೆ ನೆರವೇರಿಸಿ ಶುಭಕೋರಿದರು. ಕಾರ್ಯಕ್ರಮವನ್ನು ಚಿಕ್ಕಮಗಳೂರು ಕ್ಷೇತ್ರದ ಶಾಸಕರಾದ ಶ್ರೀ ಹೆಚ್. ಡಿ. ತಮ್ಮಯ್ಯ ರವರು ಉದ್ಘಾಟಿಸಿದರು. ಶ್ರೀ ಎಸ್.ಎಲ್. ಭೋಜೇಗೌಡ ವಿಧಾನ ಪರಿಷತ್ ಸದಸ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಶ್ರೀ ಎಂ.ಸಿ. ಶಿವಾನಂದ ಸ್ವಾಮಿ, ಅಧ್ಯಕ್ಷರು, ಜಿಲ್ಲಾ ಗ್ಯಾರಂಟಿ ಅನುಷ್ಠಾನ ಸಮಿತಿ ಚಿಕ್ಕಮಮಗಳೂರು, ಶ್ರೀ ರೋಷನ್ ಆರ್., ಜನರಲ್ ಮೆನೇಜರ್ ಸಿ.ಎಸ್. ಆರ್. ಮತ್ತು ಬಿ.ಐ.ಎ. ಟೊಯೋಟಾ ಕಂಪಿನಿ, ಶ್ರೀ ಈಶ್ವರ್ ಬಾಬು ಸೊಪ್ಪ, ಮನೇಜರ್, ಸಿ.ಎಸ್.ಆರ್. ಇವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು.

ಶ್ರೀ ಎ.ಎನ್. ಮಹೇಶ್ ಉಪಾಧ್ಯಕ್ಷರು ಕರ್ನಾಟಕ ರಾಜ್ಯ ಸಂಸ್ಥೆ ಇವರು ಪ್ರಾಸ್ತಾವಿಕವಾಗಿ ಮಾತನಾಡಿದರು. ಶ್ರೀ ಎಂ.ಎನ್. ಷಡಾಕ್ಷರಿ ಜಿಲ್ಲಾ ಮುಖ್ಯ ಆಯುಕ್ತರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಶ್ರೀಮತಿ ಡಿ.ಎಸ್. ಮಮತ ಜಿಲ್ಲಾ ಗೈಡ್ಸ್ ಆಯುಕ್ತರು ಸ್ವಾಗತಿಸಿದರು. ಶ್ರೀಮತಿ ಎಂ.ವಿ. ಪ್ರತಿಮಾ ಜಿಲ್ಲಾ ತರಬೇತಿ ಆಯುಕ್ತರು ಕಾರ್ಯಕ್ರಮ ನಿರ್ವಹಿಸಿದರು. ಶ್ರೀ ಶರತ್ ಕೃಷ್ಣಮೂರ್ತಿ, ಶ್ರೀಮತಿ ಸವಿತಾ, ಶ್ರೀ ಎಲ್.ಟಿ. ಲೋಕೇಶ್, ಶ್ರೀ ಎಂ. ಪ್ರಭಾಕರ ಭಟ್ ಇವರು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 02 ರಂದು ರಾಜ್ಯ ಸಂಸ್ಥೆ ಮತ್ತು ಮೈಸೂರು ಜಿಲ್ಲಾ ಸಂಸ್ಥೆ ಸಹಯೋಗದಲ್ಲಿ ಶ್ರೀ ಮಹಾತ್ಮ ಗಾಂಧೀಜೀ ಮತ್ತು ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿ ರವರ ಜನ್ಮ ದಿನಾಚರಣೆ ಪ್ರಯುಕ್ತ ಶ್ರೀ ಪಿ.ಜಿ.ಆರ್ ಸಿಂಧ್ಯ ರವರು, ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರು ಇವರ ಅಧ್ಯಕ್ಷತೆಯಲ್ಲಿ ಸರ್ವ ಧರ್ಮ ಪ್ರಾರ್ಥನೆ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಯಿತು. ಈ ಕಾರ್ಯಕ್ರಮದಲ್ಲಿ ಮೈಸೂರು ಜಿಲ್ಲಾ ಪದಾಧಿಕಾರಿಗಳು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ ಪದಾಧಿಕಾರಿಗಳು, ಸಂಘಟಕರುಗಳು ಮತ್ತು ಕುಟುಂಬ ಸದಸ್ಯರುಗಳು ಭಾಗವಹಿಸಿ ಯಶಸ್ವಿಗೊಳಿಸಿದ್ದರು.



# ಜಿಲ್ಲಾ ವಾರ್ತೆಗಳು

## ಬಾಗಲಕೋಟೆ

* ಜಿಲ್ಲಾ ಸಂಸ್ಥೆ ಬಾಗಲಕೋಟೆ ಮತ್ತು ಶಿಕ್ಷಣ ಇಲಾಖೆ ಪದವಿ ಪೂರ್ವ ಬಾಗಲಕೋಟೆ ಸಂಯುಕ್ತಾಶ್ರಯದಲ್ಲಿ ಜಿಲ್ಲೆಯ ಪದವಿ ಪೂರ್ವ ಕಾಲೇಜ ಉಪನ್ಯಾಸಕರಿಗೆ ರೋವರಿಂಗ್ ಮತ್ತು ರೇಂಜರಿಂಗ್ ಕುರಿತು ಒಂದು ದಿನದ ಮಾಹಿತಿ ಶಿಬಿರವನ್ನು ಸೆಪ್ಟೆಂಬರ್ 12 ರಂದು ಸೆಂಟ್ ಆನ್ಸ್ ಪಿ.ಯು. ಕಾಲೇಜು ವಿದ್ಯಾಗಿರಿಯಲ್ಲಿ ಪದವಿ ಪೂರ್ವ ಶಿಕ್ಷಣ ಉಪ ನಿರ್ದೇಶಕರಾದ ಶ್ರೀ ಪುಂಡಲೀಕ ಕಾಂಬಳೆರವರು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟನೆಯನ್ನು ನೆರವೇರಿಸಿದರು. ಶ್ರೀ ಹಣಮಂತ ಮಿರ್ಜಿ, ಜಿಲ್ಲಾ ಪ್ರಧಾನ ಆಯುಕ್ತರು ಬಾಗಲಕೋಟ ಇವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಎಸ್.ಎಸ್. ಬೊಮ್ಮನಹಳ್ಳಿ, ಶ್ರೀ ರವಿ ಗಡದನ್ನವರ, ಶ್ರೀ ರೇವಣಸಿದ್ಧಪ್ಪ ದೊರೆಗೊಳ, ಜಿಲ್ಲಾ ಸಂಘಟಕರಾದ ಶ್ರೀ ಪ್ರಮೋದ ಚೌಗುಲೆ, ಶ್ರೀ ನಾರಾಯಣ ಯಳ್ಳಿಗುತ್ತಿ, ಕಾಲೇಜಿನ ಪ್ರಾಚಾರ್ಯರಾದ ಶ್ರೀ ಜಗದೀಶ ಉಪಸ್ಥಿತರಿದ್ದರು. ಬಾಗಲಕೋಟ ಜಿಲ್ಲೆಯ 98 ಬೇರೆ ಬೇರೆ ತಾಲೂಕಿನ ಉಪನ್ಯಾಸಕರು ಭಾಗವಹಿಸಿದ್ದರು.



* ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಹುಟ್ಟು ಹಬ್ಬದ ಸವಿ ನೆನಪಿಗಾಗಿ ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕು ಸಂಸ್ಥೆಯ ವತಿಯಿಂದ ಬೀಳಗಿ ಪಟ್ಟಣ ಪಂಚಾಯತ್‌ರವರ ಸಹಯೋಗದೊಂದಿಗೆ ಪಟ್ಟಣದ ಪ್ರಮುಖ ಬೀದಿಯ ಮಧ್ಯದ ಡಿವೈಡರ್‌ನಲ್ಲಿ ಗೈಡ್ಸ್‌ಗಳೊಂದಿಗೆ ಗಿಡ ನೆಡುವ ಕಾರ್ಯಕ್ರಮವನ್ನು ಹಮ್ಮಿಕೊಂಡು 77 ಗಿಡಗಳನ್ನು ನೆಡಲಾಯಿತು. ಕಾರ್ಯಕ್ರಮದಲ್ಲಿ ಬೀಳಗಿ ತಹಸಿಲ್ದಾರ್ ಶ್ರೀ ವಿನೋದ್ ಹತ್ತಳ್ಳಿ, ಪಟ್ಟಣ ಪಂಚಾಯತ್ ಅಧ್ಯಕ್ಷ ಶ್ರೀ ರಾಮಚಂದ್ರ ಯಲಗುರದಪ್ಪ ಬೋರ್ಜಿ, ಮುಖ್ಯಾಧಿಕಾರಿ ಶ್ರೀ ದೇವೇಂದ್ರ ಧನಪಾಲ್ ಹಾಗೂ ತಾಲ್ಲೂಕು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ವಿಠ್ಠಲ ಹಿರೇನಿಂಗಪ್ಪನವರ ಪಾಲ್ಗೊಂಡಿದ್ದರು. ಸ್ಥಳೀಯ ಶ್ರೀಮತಿ ಬಸಲಿಂಗಮ್ಮ ಹೇಮನಗೌಡ ಜಕ್ಕನ ಗೌಡರ ಬಾಲಕಿಯರ ಸರ್ಕಾರಿ ಪ್ರೌಢ ಶಾಲೆ ಬೀಳಗಿಯ ಡಾ. ಸುಧಾಮೂರ್ತಿ ಗೈಡ್ಸ್ ಕಂಪನಿಯ ವಿದ್ಯಾರ್ಥಿನಿಯರು 77 ಸಸಿಗಳನ್ನು ನೆಟ್ಟರು.



## ಬೆಳಗಾವಿ

* ಜಿಲ್ಲಾ ಸಂಸ್ಥೆ ವತಿಯಿಂದ ಸೆಪ್ಟೆಂಬರ್ 14 ರಿಂದ 16ರ ವರೆಗೆ ಧಾರವಾಡ ಜಿಲ್ಲೆಯ ಸಸ್ಯ ಚೇತನ ಜಿಲ್ಲಾ ತರಬೇತಿ ಕೇಂದ್ರದಲ್ಲಿ ಬೆಳಗಾವಿ ಜಿಲ್ಲೆಯ ವಿವಿಧ ಕಾಲೇಜುಗಳ 110 ರೋವರ್ ಹಾಗೂ 256 ರೇಂಜರ್‌ಗಳಿಗೆ ನಿಪುಣ್ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಯಿತು. ಮೊದಲನೇ ದಿನ ಪರೀಕ್ಷಾ ಶಿಬಿರಕ್ಕೆ ಧಾರವಾಡ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಶ್ರೀಶೈಲ ಕರಿಕಟ್ಟಿ ಹಾಗೂ ಶ್ರೀ ಡಿ.ಡಿ. ಮಾಳಗಿ ಜಿಲ್ಲಾ ಆಯುಕ್ತರು ರೋವರ್ ವಿಭಾಗಕ್ಕೆ ಇವರು ಭೇಟಿ ನೀಡಿ ಮಕ್ಕಳಿಗೆ ಮಾರ್ಗದರ್ಶನ ನೀಡಿದರು. ಎರಡನೇ ದಿನ ಶ್ರೀಮತಿ ಪ್ರಭಾವತಿ ಪಾಟೀಲ್ ಜಿಲ್ಲಾ ಆಯುಕ್ತರು (ಗೈಡ್) ಶಿಬಿರಕ್ಕೆ ಭೇಟಿ ನೀಡಿ ಭಾಗವಹಿಸಿದ ಎಲ್ಲ ರೋವರ್ ಮತ್ತು ರೇಂಜರ್ ಗಳಿಗೆ ಮಾರ್ಗದರ್ಶನ ನೀಡಿದರು. ಶಿಬಿರದ ಸಮಾರೋಪ ಸಮಾರಂಭಕ್ಕೆ ಬೆಳಗಾವಿ ಜಿಲ್ಲೆಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಗಜಾನನ ಮನ್ನಿಕೇರಿ ರವರು ಅಧ್ಯಕ್ಷತೆ ವಹಿಸಿ ಕಾರ್ಯಕ್ರಮ ಯಶಸ್ವಿಗೊಳಿಸಿದರು.



## ಬಳ್ಳಾರಿ

* ಸೆಪ್ಟೆಂಬರ್ 05 ರಂದು ಸಿರಗುಪ್ಪ ತಾಲೂಕು ಮಟ್ಟದ ಶಿಕ್ಷಕರ ದಿನಾಚರಣೆಯನ್ನು ಶ್ರೀಶೈಲ ಜಗದ್ಗುರುಗಳ ಕಲ್ಯಾಣ ಮಂಟಪ ಸಿರುಗುಪ್ಪದಲ್ಲಿ ಆಚರಿಸಲಾಯಿತು. ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯಿಂದ ಸ್ಕೌಟ್ ಮತ್ತು ಗೈಡ್ಸ್ ಪಥಚಲನೆ ಮತ್ತು ಡೊಳ್ಳು ಕುಣಿತದ ಜೊತೆಗೆ ಶ್ರೀ ಸರ್ವಪಲ್ಲಿ ರಾಧಕೃಷ್ಣನ್‌ರವರ ಭಾವಚಿತ್ರದೊಂದಿಗೆ ಕಲ್ಯಾಣ ಮಂಟಪಕ್ಕೆ ಬರಲಾಯಿತು. ಗಣ್ಯವ್ಯಕ್ತಿಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಹೆಚ್. ಗುರಪ್ಪ ಸ್ವಾಗತಿಸಿದರು. ಶ್ರೀ ರಾಧಾಕೃಷ್ಣನ್ ಹಾಗೂ ಶ್ರೀಮತಿ ಸಾವಿತ್ರಿಬಾಯಿ ಫುಲೆರವರ ಭಾವಚಿತ್ರಕ್ಕೆ ಪುಷ್ಪ ನಮನ ಮಾಡಿ ಕಾರ್ಯಕ್ರಮ ಉದ್ಘಾಟಿಸಿ. ಶ್ರೀ ಮಂಜುನಾಥರೆಡ್ಡಿ ಉಪನ್ಯಾಸಕರು ಶ್ರೀ ರಾಧಾಕೃಷ್ಣನ್‌ರವರ ಬಗ್ಗೆ ಮಾತನಾಡಿದರು. ನಿವೃತ್ತ ಶಿಕ್ಷಕರಿಗೆ ಸನ್ಮಾನಿಸಲಾಯಿತು. ನಾಡಗೀತೆ ರೈತ ಗೀತೆಯನ್ನು ಹಾಡಿರುವ ಶಿಕ್ಷಕರಿಗೆ ಸನ್ಮಾನಿಸಲಾಯಿತು. ಕಿರಿಯ, ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆ ಜಿಲ್ಲಾ ಉತ್ತಮ ಶಿಕ್ಷಕರಿಗೆ ಸನ್ಮಾನಿಸಲಾಯಿತು. ಶಾಂತಿನಿಕೇತನ ವಿದ್ಯಾಮಂದಿರ ಆಂಗ್ಲಮಾಧ್ಯಮ ಶಾಲೆಯ ಸ್ಕೌಟ್ಸ್ ಶಿಕ್ಷಕರು ಹಾಗೂ ಮಕ್ಕಳು, ಶ್ರೀ ಕೃಷ್ಣದೇವರಾಯ ಶಾಲೆಯ ಆಂಗ್ಲಮಾಧ್ಯಮ ಶಾಲೆಯ ಸ್ಕೌಟ್ಸ್ ಶಿಕ್ಷಕರು ಹಾಗೂ ಮಕ್ಕಳು, ಸಿ.ಎನ್.ಎನ್. ಅಂಗ್ಲಮಾಧ್ಯಮ ಶಾಲೆ ತಾಲೂಕನ ವಿವಿಧ ಶಾಲೆಗಳಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಿದರು.

* ಸೆಪ್ಟೆಂಬರ್ 17 ರಂದು ಬೆಳಗ್ಗೆ 9 ಗಂಟೆಗೆ ಮುನ್ಸಿಪಲ್ ಗ್ರೌಂಡ್ ಬಳ್ಳಾರಿಯಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಪ್ರಯುಕ್ತ ಧ್ವಜಾರೋಹಣವನ್ನು ನೆರೆವರೆಸಲಾಯಿತು, ಹಾಗೂ ಇದೇ ಸಂದರ್ಭದಲ್ಲಿ ಅತ್ಯುತ್ತಮವಾದ ಸೇವೆ ಸಲ್ಲಿಸಿದ ರೋವರ್ಸ್–ರೇಂಜರ್ಸ್‌ಗಳನ್ನು ಮಾನ್ಯ ಶ್ರೀ. ಈ. ತುಕಾರಾಂ, ಲೋಕಸಭಾ ಸಂಸದರು ರವರು ಅಭಿನಂದಿಸಿದರು. ಇದೇ ಸಂದರ್ಭದಲ್ಲಿ ಬಳ್ಳಾರಿ ಜಿಲ್ಲೆಯ ನೂತನ ಜಿಲ್ಲಾಧಿಕಾರಿ ಶ್ರೀ ನಾಗೇಂದ್ರ ಪ್ರಸಾದ್ ರವರು, ಶ್ರೀ ಮಹಮ್ಮದ್ ಹಾರಿಸ್ ಸುಮೇರ್, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬಳ್ಳಾರಿ, ಶ್ರೀ ನಾಗರಾಜ್, ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್), ಜಿಲ್ಲಾ ಸ್ಥಾನಿಕ ಆಯುಕ್ತರಾದ ಶ್ರೀ ಆನಂತ ಶೆಟ್ಟಿ ರವರು ಹಾಗೂ ಕು. ಮಹಮ್ಮದ್ ಶರ್ಫುದ್ದೀನ್, ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ಸಹಾಯಕ ರವರು ಉಪಸ್ಥಿತರಿದ್ದರು.





## ಬೆಂಗಳೂರು ಗ್ರಾಮಾಂತರ

* ಸೆಪ್ಟೆಂಬರ್ 05 ರಂದು ಸ್ಕೌಟ್ ಮತ್ತು ಗೈಡ್‌ಗಳಿಗೆ ದ್ವಿತೀಯ ಸೋಪಾನ ಪರೀಕ್ಷೆ ತಾಲ್ಲೂಕು ಹಂತದಲ್ಲಿ ನಡೆಯಿತು.

* ಆಗಸ್ಟ್ 29 ರಂದು ದ್ವಿತೀಯ ಸೋಪಾನ ಪರೀಕ್ಷೆಯನ್ನು ಡಾ. ಅನಿಬೆಸೆಂಟ್ ಸ್ಕೌಟ್–ಗೈಡ್ ರಾಜ್ಯ ತರಬೇತಿ ಕೇಂದ್ರ ದೊಡ್ಡಬಳ್ಳಾಪುರ ಇಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಿಟಿಜನ್ ಆಂಗ್ಲ ಶಾಲೆ ಹೊಸಕೋಟೆ, ಹೊಸಕೋಟೆ ತಾಲೂಕಿನ ಸ್ಕೌಟ್–31, ಗೈಡ್–30 ಒಟ್ಟು 61 ವಿದ್ಯಾರ್ಥಿಗಳು ಭಾಗವಹಿಸಿದರು.



* ಸೆಪ್ಟೆಂಬರ್ 06 ರಂದು ತಾಲೂಕು ಮಟ್ಟದ ಗೀತ ಗಾಯನ ಸ್ಪರ್ಧೆ ಹಾಗೂ ಪರಿಷತ್ ಸಭೆ ನಡೆಯಿತು.

* ಸೆಪ್ಟೆಂಬರ್ 09 ರಂದು ಚಾಣಕ್ಯ ಯುನಿವರ್ಸಿಟಿ ದೇವನಹಳ್ಳಿ ತಾಲೂಕು ರಿಜಿಸ್ಟ್ರಾರ್ ಹಾಗೂ ಯೂನಿವರ್ಸಿಟಿ ವೈಸ್‌ಚಾನ್ಸಲರ್ ಚಾನ್ಸಲರ್‌ರವರನ್ನು ಭೇಟಿ ಮಾಡಿ ಸ್ಕೌಟಿಂಗ್ ಬಗ್ಗೆ ವಿವರಿಸಲಾಯಿತು ಹಾಗೂ ವಾರ್ಷಿಕ ಕ್ರಿಯೆ ಯೋಜನೆ ಪುಸ್ತಕವನ್ನು ಹಸ್ತರಿಸಲಾಯಿತು.

## ಬೆಂಗಳೂರು ದಕ್ಷಿಣ

* ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಆಗಸ್ಟ್ 19 ರಿಂದ 23ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ಸ್ಕೌಟ್ಸ್–ಗೈಡ್ಸ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ 2024–25ನೇ ಸಾಲಿನ ತೃತೀಯ ಸೋಪಾನ ಪರೀಕ್ಷಾ ಶಿಬಿರ ಮತ್ತು ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರ, ಪೆಟ್ರೋಲ್ ಲೀಡರ್ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಗಿತ್ತು. ಶಿಬಿರದ ಶಿಬಿರಾಗ್ನಿ ಕಾರ್ಯಕ್ರಮಕ್ಕೆ ಶ್ರೀ ಪಿ.ಜಿ.ಆರ್. ಸಿಂಧ್ಯಾ, ರಾಜ್ಯ ಮುಖ್ಯ ಆಯುಕ್ತರು ಮುಖ್ಯ ಅತಿಥಿಗಳಾಗಿ ಆಗಮಿಸಿ ಮಕ್ಕಳನ್ನು ಉದ್ದೇಶಿ ಮಾತನಾಡಿದರು. ತೃತೀಯ ಸೋಪಾನ ಸ್ಕೌಟ್ಸ್ ವಿಭಾಕ್ಕೆ ಶ್ರೀ ರಿಯಾಜ್ ಪಾಷ ನಾಯಕರಾಗಿದ್ದರು. ಗೈಡ್ಸ್ ವಿಭಾಗಕ್ಕೆ ಶ್ರೀಮತಿ ಲಲಿತಾ ಸುರೇಶ್ ನಾಯಕಿಯಾಗಿದ್ದರು. ಶ್ರೀ ಶರತ್‌ರಾಜ್, ಎ.ಎಲ್.ಟಿ (ಸ್ಕೌ) ಪೆಟ್ರೋಲ್ ಲೀಡರ್ ತರಬೇತಿ ನಾಯಕರಾಗಿ ಶಿಬಿರಕ್ಕೆ ರಾಜ್ಯ ಪುರಸ್ಕಾರ ಪೂರ್ವ ಸಿದ್ದತಾ ಶಿಬಿರಕ್ಕೆ ಶ್ರೀ ಚಂದ್ರು ಪಿ., ಎ.ಎಸ್.ಓ.ಸಿ.(ಎಸ್) ನಾಯಕರಾಗಿದ್ದರು. ಶ್ರೀ ಟಿ.ಕೆ. ನಾರಾಯಣ ಸ್ವಾಮಿ, ಎಲ್.ಟಿ. (ಸ್ಕೌ) ಶಿಬಿರದ ನಿರ್ದೇಶಕರಾಗಿದ್ದರು. ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು ಶಿಬಿರಕ್ಕೆ ಭೇಟಿ ನೀಡಿದರು. ಶ್ರೀ ಎ.ಎಸ್. ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ದಳನಾಯಕ–ನಾಯಕಿಯರು, ಸ್ಕೌಟ್ಸ್–ಗೈಡ್ಸ್‌ಗಳು, ಸೇವಾ ರೋವರ್ಸ್–ರೇಂಜರ್ಸ್ ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರಕ್ಕೆ ಶ್ರೀ ಪಳನಿ, ಜಿಲ್ಲಾ ಆಯುಕ್ತರು (ಸ್ಕೌ), ಜಿಲ್ಲಾ ಪದಕ ಕಾರ್ಯದರ್ಶಿಗಳಾದ ಶ್ರೀ ಟಿ. ಸಿದ್ದಗಂಗಯ್ಯ ಪ್ರೀ–ಎ.ಎಲ್.ಟಿ. (ಸ್ಕೌ) ಭೇಟಿ ನೀಡಿದರು.



* ಆಗಸ್ಟ್ 18 ರಿಂದ 24ರ ವರಗೆ ಡಾ॥ ಅನಿಬೆಸೆಂಟ್ ಪಾರ್ಕ್ ರಾಜ್ಯ ತರಬೇತಿ ಮತ್ತು ಶಿಬಿರ ಕೇಂದ್ರ ದೊಡ್ಡಬಳ್ಳಾಪುರ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಜಿಲ್ಲಾ ಮಟ್ಟದ ಸ್ಕೌಟ್ಸ್ ಮಾಸ್ಟರ್, ಗೈಡ್ಸ್ ಕ್ಯಾಪ್ಟನ್, ಕಬ್ಸ್ ಮಾಸ್ಟರ್, ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರವನ್ನು ಆಯೋಜನೆ ಮಾಡಲಾಯಿತ್ತು. ಒಟ್ಟು 4 ಶಿಬಿರದಿಂದ 47 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಸ್ಕೌಟ್ಸ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ಟಿ.ಕೆ. ನಾರಾಯಣಸ್ವಾಮಿ ಎಲ್.ಟಿ. (ಸ್ಕೌಟ್ಸ್) ಶಿಬಿರದ ನಾಯಕರಾಗಿದ್ದರು, 14 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಗೈಡ್ಸ್ ಕ್ಯಾಪ್ಟನ್ ಮುಂದುವರೆದ ತರಬೇತಿ ಶಿಬಿರಕ್ಕೆ ಶ್ರೀಮತಿ ಗಾಯತ್ರಿ ಜಿ., ಎಲ್.ಟಿ. (ಗೈಡ್ಸ್) ಶಿಬಿರದ ನಾಯಕಿಯಾಗಿದ್ದರು. 17 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಫ್ಲಾಕ್ ಲೀಡರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀಮತಿ ಗೌರಬಾಯಿ, ಎಲ್.ಟಿ (ಫ್ಲಾಕ್) ಶಿಬಿರದ ನಾಯಕಿರಾಗಿದ್ದರು. 08 ಶಿಬಿರಾರ್ಥಿಗಳು ಭಾಗವಹಿಸಿದ್ದರು. ಕಬ್ ಮಾಸ್ಟರ್ ಮೂಲ ತರಬೇತಿ ಶಿಬಿರಕ್ಕೆ ಶ್ರೀ ವಿ.ಎಂ. ನಾರಾಯಣಸ್ವಾಮಿ, ಎಲ್.ಟಿ. (ಕಬ್) ಶಿಬಿರದ ನಾಯಕರಾಗಿದ್ದರು. 08 ಶಿಬಿರಾರ್ಥಿಗಳು ಭಾಗವಹಿಸಿದ್ದರು.











* ಆಗಸ್ಟ್ 22 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್ ಸಿಂಧ್ಯಾರವರು ತರಬೇತಿ ಶಿಬಿರ ಮುಕ್ತಾಯ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಭೇಟಿ ನೀಡಿ ಶಿಬಿರಾರ್ಥಿಗಳನ್ನು ಉದ್ದೇಶಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಶ್ರೀ ಎಂ.ಕೆ. ಖಾನ್, ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಎ.ಎಸ್. ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ಭಾಗವಹಿಸಿದ್ದರು.



* ಸೆಪ್ಟೆಂಬರ್ 16 ರಂದು ಬೆಂಗಳೂರು ದಕ್ಷಿಣ ಜಿಲ್ಲೆಯ ವತಿಯಿಂದ ಪದವಿ ಪೂರ್ವಕಾಲೇಜಿನ ಉಪನ್ಯಾಕರುಗಳಿಗೆ ಒಂದು ದಿನದ ಪ್ರಾರಂಭಿಕ ಶಿಬಿರವನ್ನು ರಾಜ್ಯ ಕೇಂದ್ರ ಕಛೇರಿ ಆವರಣದಲ್ಲಿ ಆಯೋಜಿಸಲಾಯಿತು. ಸದರಿ ಶಿಬಿರದಲ್ಲಿ 14 ಶಿಬಿರಾರ್ಥಿಗಳು ಭಾಗವಹಿಸಿದರು. ಪ್ರಾರಂಬಿಕ ಶಿಬಿರಕ್ಕೆ ಗೌರವಾನ್ವಿತ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರು ಆಗಮಿಸಿ ಶುಭಕೋರಿದರು. ಶ್ರೀ ಎ.ಎಸ್. ಮದುಸೂದನ್ ಹೆಚ್ಚುವರಿ ಅಂತರಾಷ್ಟ್ರೀಯ ಆಯುಕ್ತರು ಮತ್ತು ಬೆಂಗಳೂರು ದಕ್ಷಿಣ ಜಿಲ್ಲೆಯ ಖಜಾಂಚಿ, ಶ್ರೀಮತಿ ವಿಕ್ಟೋರಿಯಾ ಅಮಲರಾಣಿ, ಎ.ಎಲ್.ಟಿ (ಗೈ) ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



## ಬೆಂಗಳೂರು ಉತ್ತರ

* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ ಶಿಕ್ಷಕರ ಮೂಲ ತರಬೇತಿ ಶಿಬಿರವನ್ನು ಆಗಸ್ಟ್ 18 ರಿಂದ 24ರ ವರೆಗೆ ಚಾಮುಂಡಿ ಮುಕ್ತದಳ ಮಲ್ಲೇಶ್ವರ ಇಲ್ಲಿ ಆಯೋಜಿಸಲಾಯಿತು. ಸ್ಕೌಟ್ಸ್ ವಿಭಾಗದ ನಾಯಕರಾಗಿ ಶ್ರೀ ಆನಂದ ಅಡಿಗ, ಗೈಡ್ ವಿಭಾಗದ ನಾಯಕರಾಗಿ ಶ್ರೀಮತಿ ಜ್ಯೋತಿ ರಂಗನಾಥ್ ಮತ್ತು ಬುಲ್‌ಬುಲ್ಸ್ ವಿಭಾಗದ ನಾಯಕಿಯಾಗಿ ಶ್ರೀಮತಿ ಮೇರಿ ಪಿಲೋಮಿನ ಹಾಗೂ ಕಬ್ ವಿಭಾಗದಲ್ಲಿ ಶ್ರೀ ವೆಂಕಟೇಶ್ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ ಹಿರಿಯರಾದ ಶ್ರೀ ಚಂದ್ರಶೇಖರನ್ ಇವರು ಭಾಗವಹಿಸಿ ಅವರ ಸ್ಕೌಟಿಂಗ್ ಅನುಭವ ಹಂಚಿಕೊಂಡರು. ಜಿಲ್ಲಾ ಮುಖ್ಯ ಆಯುಕ್ತರು ಭವ್ಯ ಶಿಬಿರಾಗ್ನಿಯಲ್ಲಿ ಭಾಗವಹಿಸಿ ಎಲ್ಲಾ ಶಿಬಿರಾರ್ಥಿಗಳಿಗೆ ಶೀಘ್ರದಲ್ಲಿಯೇ ತಮ್ಮ ಶಾಲೆಯಲ್ಲಿ ಘಟಕವನ್ನು ಪ್ರಾರಂಬಿಸುವಂತೆ ತಿಳಿಸಿದರು. ರಾಜ್ಯ ಮುಖ್ಯ ಆಯುಕ್ತರು ಶಿಬಿರದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಎಲ್ಲರನ್ನೂ ಸ್ಕೌಟಿಂಗ್ ಕುಟುಂಬಕ್ಕೆ ಆದರದ ಸ್ವಾಗತ ಎಂದರು ಹಾಗೂ ಸ್ಕೌಟಿಂಗ್ ಮಾಡಿರುವ ಸಾಧನೆಯನ್ನು ತಿಳಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಸ್ಕೌಟ್ಸ್ ಆಯುಕ್ತರು ಉಪಸ್ಥಿತರಿದ್ದರು. ಜಿಲ್ಲಾ ಕಾರ್ಯದರ್ಶಿ ಶಿಬಿರವನ್ನು ಸಂಘಟಿದರು.



* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ಜಿಲ್ಲಾ ಮಟ್ಟದ ಸ್ಕೌಟ್ಸ್–ಗೈಡ್ಸ್‌ಗಳಿಗೆ, "ಸ್ಕೌಟ್ಸ್ ನಡಿಗೆ ಕೃಷಿಯ ಕಡೆಗೆ ಎಂಬ ವಿನೂತನ ಕಾರ್ಯಕ್ರಮವನ್ನು ಮಲೆನಾಡು ಶಿವಮೊಗ್ಗ ಇಲ್ಲಿ ಜಿಲ್ಲಾ ಸಂಸ್ಥೆಯ ಸಹಕಾರದಿಂದ ಆಗಸ್ಟ್ 28 ರಿಂದ 30ರಂದು ಶಿವಮೊಗ್ಗ ಜಿಲ್ಲೆಯಲ್ಲಿ ನಡೆಸಲಾಯಿತು. ಮೊದಲ ದಿನ ಸ್ಕೌಟ್ಸ್–ಗೈಡ್ಸ್ ಭತ್ತ ನಾಟಿ ಮಾಡಿ ಅನುಭವ ಪಡೆದರು. ತದ ನಂತರ ಶ್ರೀ ವಿರೇಶಪ್ಪ ಜಿಲ್ಲಾ ಸಹ ಆಯುಕ್ತರು ಇವರ ತೋಟಕ್ಕೆ ಬೇಟಿ ನೀಡಿ ತೋಟಗಾರಿಗೆಯ ಬಗ್ಗೆ ಅರಿವು ಮೂಡಿಸಲಾಯಿತು. ಮರುದಿನ ಕೆಳದಿ ಶಿವಪ್ಪ ನಾಯಕ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಇರುವಕ್ಕಿ ಇಲ್ಲಿ ಬೇಟಿ ನೀಡಿ ಮಣ್ಣುಗಳ ವಿಶೇಷತೆಯ ಬಗ್ಗೆ ಹಾಗೂ ವಿವಿಧ ಮಣ್ಣುಗಳ ಬಗ್ಗೆ ಪರಿಣಿತ ಉಪನ್ಯಾಸಕರು ಭೂಮಿಯ ವಿವಿಧ ಪದರುಗಳ ಬಗ್ಗೆ ಮಾಹಿತಿ



ನೀಡಿದರು. ತದನಂತರ ಕೀಟ ಚಿಟ್ಟೆಗಳ ಬಗ್ಗೆ ಮಾಹಿತಿ ನೀಡಿದರು. ಮೂರನೇ ದಿನ ರಾಷ್ಟ್ರಕವಿ ಕುವೆಂಪು ಇವರ ಮೂಲ ಸ್ಥಳ ಕುಪ್ಪಳ್ಳಿಗೆ ಬೇಟಿ ನೀಡಿ. ಅವರ ಜೀವನ ಶೈಲಿ ಮತ್ತು ಅವರ ವಾಸದ ಮನೆಯನ್ನು ನೋಡಿ ಸಂತೋಷ ಪಟ್ಟರು ತೀರ್ಥಹಳ್ಳಿ ಬಳಿ ಇರುವ ಕವಲುದುರ್ಗ ಕೋಟೆಗೆ ಚಾರಣ ಮಾಡಿ ಪ್ರಕೃತಿ ಅಧ್ಯಯನ ಮಾಡಿದರು.

* ಸೆಪ್ಟೆಂಬರ್ 02 ರಂದು ಕಬ್-ಬುಲ್‌ಬುಲ್‌ಗಳಿಗೆ ಚತುರ್ಥ ಚರಣ್ ಹಾಗೂ ಹೀರಕ್ ಗರಿ ಪರೀಕ್ಷಾ ಶಿಬಿರವನ್ನು ಚಾಮುಂಡಿ ಮುಕ್ತ ದಳ ಮಲ್ಲೇಶ್ವರ ಇಲ್ಲಿ ಅಯೋಜಿಲಾಯಿತು. ಶಿಬಿರದ ನಾಯಕರಾಗಿ ಶ್ರೀಮತಿ ಪುಷ್ಪ ವಿಜಯನ್ ಹಾಗೂ ಕಬ್ ವಿಭಾಗದಲ್ಲಿ ಶ್ರೀಮತಿ ಸುನೀತ ಇವರು ಭಾಗವಹಿಸಿದ್ದರು. ಜಿಲ್ಲಾ ಕಾರ್ಯದರ್ಶಿ ಶ್ರೀ ಬಿ.ಕೆ, ಶೇಷಾದ್ರಿ ಎಲ್ಲರನ್ನೂ ಸ್ವಾಗತಿಸಿದರು. ಜಿಲ್ಲಾ ಮುಖ್ಯ ಆಯುಕ್ತರು ಶ್ರೀ ಪ್ರಸನ್ನಕುಮಾರ್ ಶಿಬಿರಕ್ಕೆ ಶುಭಾಶಯ ಕೋರಿದರು.



* ಬೆಂಗಳೂರು ಉತ್ತರ ಜಿಲ್ಲೆಯ ವತಿಯಿಂದ ರೋವರ್-ರೇಂಜರ್‌ಗಳಿಗೆ ಜಿಲ್ಲಾ ಮಟ್ಟದ ಚಾರಣ ಹಾಗೂ ಸ್ವಚ್ಚತಾ ಶಿಬಿರವನ್ನು ಸೆಪ್ಟೆಂಬರ್ 13 ಮತ್ತು 14 ರಂದು ಅಯೋಜಿಸಲಾಗಿತ್ತು. ಸೆಪ್ಟೆಂಬರ್ 13 ರಂದು ರೋವರ್ ರೇಂಜರ್ ಸರಕಾರಿ ಪ್ರಥಮ ದರ್ಜೆ ಕಾಲೇಜು ಮದುಗಿರಿ ಇಲ್ಲಿ ವರದಿ ಮಾಡಲಾಯಿತು. ತದ ನಂತರ ರೋವರ್-ರೇಂಜರ್‌ಗಳನ್ನು 20 ವಿದ್ಯಾರ್ಥಿಯಂತೆ ವಿಂಗಡಿಸಿ ಪ್ರತಿ ಗುಂಪಿಗೆ ನಾಯಕರನ್ನು ನೇಮಿಸಲಾಯಿತು. ಅಪರಾಹ್ನ ನಂತರ 3 ಗಂಟೆಗೆ ಚಾರಣ ಪರಿಣಿತರಿಂದ ಚಾರಣದ ಬಗ್ಗೆ ಮಾಹಿತಿ ಮತ್ತು ಅಗತ್ಯ ಸೂಚನೆ ನೀಡಲಾಯಿತು. ಮಧುಗಿರಿ ಪುರಸಭೆ ಅಧ್ಯಕ್ಷರಾಗಿರುವ ಶ್ರೀ ಲಾಲಾ ಪೇಟೆ ಮಂಜುನಾಥ್ ಇವರು ಉದ್ಘಾಟಿಸಿ ಶುಭಾಶಯ ಕೋರಿದರು. ಶಾಲಾ ಪ್ರಾಂಶುಪಾಲರಾದ ಶ್ರೀ ಕುಮಾರ್ ನಾನೂ ರೋವರ್ ಲೀಡರ್ ಆಗಿ ಕೆಲವು ಕಾಲೇಜಿನಲ್ಲಿ ಸೇವೆಸಲ್ಲಿಸಿದೆನು ಎಂದರು. ಸಂಜೆ ಶಿಬಿರಾಗ್ನಿ ಕಾರ್ಯಕ್ರಮ ನಡೆಸಲಾಯಿತು. ಮರುದಿನ ಚಾರಣ ಮಾರ್ಗದಲ್ಲಿ ಇದ್ದ ಪ್ಲಾಸ್ಟಿಕ್ ಕಸ ಹಾಗೂ ಕಸದ ವಸ್ತುಗಳನ್ನು ಸಂಗ್ರಹಿಸಿ ಸ್ಥಳವನ್ನು ಸ್ವಚ್ಚಗೊಳಿಸಲಾಯಿತು.



* ಬೆಂಗಳೂರು ಉತ್ತರ ಜಿಲ್ಲೆ ವತಿಯಿಂದ "ಸ್ಕೌಟ್ಸ್-ಗೈಡ್ಸ್ ನಡಿಗೆ ಹಳ್ಳಿ ಕಡೆಗೆ" ಎಂಬ ಸಮುದಾಯ ಸೇವಾ ಕಾರ್ಯಕ್ರಮ ದಡಿಯಲ್ಲಿ ಆಗಸ್ಟ್ 24 ರಂದು



ಗಂಟಿಗಾನಹಳ್ಳಿಯಲ್ಲಿ ಯಲಹಂಕ ಬೆಂಗಳೂರು ಇಲ್ಲಿ ಸಮುದಾಯ ಸೇವೆ ಮಾಡಲಾಯಿತು. ಗಂಟಿಗಾನಹಳ್ಳಿಯ ನದಿಯ ದಂಡೆಯಲ್ಲಿ ಶೇಖರಣೆಗೊಂಡ ಪ್ಲಾಸ್ಟಿಕ್ ತ್ಯಾಜ್ಯವನ್ನು ತೆಗೆದು ಸ್ವಚ್ಚಗೊಳಿಸಲಾಯಿತು. ಕಾರ್ಯಕ್ರಮದಲ್ಲಿ ಗಂಟಿಗಾನಗಾಹಳ್ಳಿಯ ರಸ್ತೆಯಲ್ಲಿರುವ ಸರ್ಕಲ್‌ನ್ನು ಸ್ವಚ್ಛತೆ ಮಾಡಲಾಯಿತು. ಗಿಡಗಳಿಗೆ ನೀರು ಉಣಿಸಲಾಯಿತು ಹಾಗು ಪಿ.ಡಿ.ಓ ರವರು ತಮ್ಮ ಸಹಕಾರ ನೀಡಿದರು ಹಾಗು ನಮ್ಮ ಜತೆ ಸೇವೆಯಲ್ಲಿ ಭಾಗವಹಿಸಿದ್ದರು. ಬೆಂಗಳೂರು ಉತ್ತರ ಜಿಲ್ಲೆಯ ವಿವಿಧ ವಿವಿಧ ಕಾಲೇಜುಗಳಿಂದ 35 ರೋವರ್-ರೇಂಜರ್ ಭಾಗವಹಿಸಿದರು.

## ಬೆಂಗಳೂರು ಪೂರ್ವ

* ಬೆಂಗಳೂರು ಪೂರ್ವ ಜಿಲ್ಲೆಯ ಅತ್ತಿಬೆಲೆ ಸ್ಥಳೀಯ ಸಂಸ್ಥೆಯ ವತಿಯಿಂದ 2025-26ನೇ ಸಾಲಿನ ದೇಶ ಭಕ್ತಿ ಗೀತಗಾಯನ ಮತ್ತು ಜಾನಪದ ಗೀತೆ ಸ್ವರ್ಧೆಯನ್ನು ಸೆಪ್ಟೆಂಬರ್ 09 ರಂದು ಶಿಡ್ಲಬಸಪ್ಪ ಕಲ್ಯಾಣ ಮಂಟಪ, ಅತ್ತಿಬೆಲೆಯಲ್ಲಿ ಶ್ರೀಮತಿ ಪ್ರಭಾವತಿ ಸ್ಥಳೀಯ ಕಾರ್ಯದರ್ಶಿರವರ ನೇತೃತ್ವದಲ್ಲಿ ಎಸ್.ಜಿ.ವಿ. ಶ್ರೀ ಮನು ಇವರ ಸಹಯೋಗದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸ್ವರ್ಧೆಯಲ್ಲಿ ಭಾಗವಹಿಸಿದರು. ಸದರಿ ಕಾರ್ಯಕ್ರಮದಲ್ಲಿ ಶ್ರೀಮತಿ ಪ್ರೇಮಕುಮಾರಿ ಬಿ.ಎನ್., ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷರು, ಸ್ವರ್ಧಿಗಳಿಗೆ ಶುಭಾಶಯವನ್ನು ಕೋರಿದರು.



* ಬೆಂಗಳೂರು ಪೂರ್ವ ಜಿಲ್ಲೆಯ ಸರ್ಜಾಪುರ ಸ್ಥಳೀಯ ಸಂಸ್ಥೆಯ ವತಿಯಿಂದ 2025-26ನೇ ಸಾಲಿನ ದೇಶ ಭಕ್ತಿ ಗೀತಗಾಯನ ಮತ್ತು ಜಾನಪದ ಗೀತೆ ಸ್ವರ್ಧೆಯನ್ನು ಸೆಪ್ಟೆಂಬರ್ 11ರಂದು ಸರ್ದಾರ್ ವಲ್ಲಭಭಾಯಿ ಪಟೇಲ್ ಪ್ರೌಢ ಶಾಲೆ ಸರ್ಜಾಪುರದಲ್ಲಿ ಶ್ರೀ ರಾಮಕೃಷ್ಣಯ್ಯ ಸ್ಥಳೀಯ ಕಾರ್ಯದರ್ಶಿ ರವರ ನೇತೃತ್ವದಲ್ಲಿ ಶ್ರೀ ಎ.ಎನ್. ನರೇಂದ್ರ ಕುಮಾರ್ ಜಿಲ್ಲಾ ಕಾರ್ಯದರ್ಶಿ ಇವರ ಮಾರ್ಗದರ್ಶನದಂತೆ ಹಾಗೂ ಸ್ಥಳೀಯ ಪದಾಧಿಕಾರಿಗಳ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಸದರಿ ಸ್ವರ್ಧೆಯಲ್ಲಿ ಸ್ಥಳೀಯ ಶಾಲೆ ಮತ್ತು ಕಾಲೇಜುಗಳಿಂದ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಚಿನ್ನಸ್ವಾಮಿರೆಡ್ಡಿ, ರಾಜ್ಯ ವಯಸ್ಕ ನಾಯಕ



ತರಬೇತಿ ಆಯುಕ್ತರು ವಹಿಸಿದ್ದರು. ಸರ್ಜಾಪುರ ಗ್ರಾ.ಪಂ. ಅಧ್ಯಕ್ಷರು, ಡಾ॥ ಎನ್. ಕಲಾವತಿ ಇವರು ಮತ್ತು ಜಿಲ್ಲಾ ಕಾರ್ಯದರ್ಶಿರವರು ಎಲ್ಲಾ ಸ್ಪರ್ಧೆಯನ್ನು ಉದ್ಘಾಟಿಸಿದರು.

* ಬೆಂಗಳೂರು ಪೂರ್ವ ಜಿಲ್ಲೆಯ ಆನೇಕಲ್ ಸ್ಥಳೀಯ ಸಂಸ್ಥೆಯ ವತಿಯಿಂದ 2025–26ನೇ ಸಾಲಿನ ದೇಶ ಭಕ್ತಿ ಗೀತಗಾಯನ ಮತ್ತು ಜಾನಪದ ಗೀತೆ ಸ್ಪರ್ಧೆಯನ್ನು ಸೆಪ್ಟೆಂಬರ್ 11 ರಂದು ಸರ್ಕಾರಿ ಹಿರಿಯ ಪ್ರಾಥಮಿಕ ಪಾಠ ಶಾಲೆ (ಹಳೆಯ) ಆನೇಕಲ್ ಶಾಲೆಯಲ್ಲಿ ಶ್ರೀ ಆರ್.ಎಲ್. ನಾರಾಯಣಸ್ವಾಮಿ, ಸ್ಥಳೀಯ ಕಾರ್ಯದರ್ಶಿ ರವರ ನೇತೃತ್ವದಲ್ಲಿ ಹಾಗೂ ಎಸ್.ಜಿ.ವಿ. ಶ್ರೀ ಮನು ಇವರ ಸಹಯೋಗದೊದಿಂಗೆ, ಸ್ಥಳೀಯ ಪದಾಧಿಕಾರಿಗಳ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಸದರಿ ಸ್ಪರ್ಧೆಯಲ್ಲಿ ಸ್ಥಳೀಯ ಶಾಲೆ ಮತ್ತು ಕಾಲೇಜುಗಳಿಂದ ಸುಮಾರು 150ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಜಿ. ನಾಗರಾಜು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಸದ್ಯಸರು ವಹಿಸಿದ್ದರು.



* ಬೆಂಗಳೂರು ಪೂರ್ವ ಜಿಲ್ಲೆಯ ಹೆಬ್ಬಗೋಡಿ ಸ್ಥಳೀಯ ಸಂಸ್ಥೆಯ ವತಿಯಿಂದ 2025–26ನೇ ಸಾಲಿನ ದೇಶ ಭಕ್ತಿ ಗೀತಗಾಯನ ಮತ್ತು ಜಾನಪದ ಗೀತೆ ಸ್ಪರ್ಧೆಯನ್ನು ಸೆಪ್ಟೆಂಬರ್ 12 ರಂದು ಶ್ರೀ ಅನಂತನಗರ ವಿದ್ಯಾನಿಕೇತನ ಶಾಲೆ ಅನಂತನಗರದಲ್ಲಿ ಶ್ರೀ ಮೋಹನ್ ರಾವ್ ಸ್ಥಳೀಯ ಕಾರ್ಯದರ್ಶಿರವರ ನೇತೃತ್ವದಲ್ಲಿ ಶ್ರೀ ಎ.ಎನ್. ನರೇಂದ್ರ ಕುಮಾರ್, ಜಿಲ್ಲಾ ಕಾರ್ಯದರ್ಶಿ ಇವರ ಮಾರ್ಗದರ್ಶನದಂತೆ, ಎಸ್.ಜಿ.ವಿ. ಶ್ರೀ ಮನು ಇವರ ಸಹಯೋಗದೊದಿಂಗೆ ಹಾಗೂ ಅನಂತನಗರ ಶಾಲೆ ಆಡಳಿತ ಮಂಡಳಿಯ ಸದಸ್ಯರ ಸಹಕಾರದಲ್ಲಿ, ಸ್ಥಳೀಯ ಪದಾಧಿಕಾರಿಗಳ ಸಹಕಾರದೊಂದಿಗೆ ಹಮ್ಮಿಕೊಳ್ಳಲಾಗಿತ್ತು. ಸದರಿ ಸ್ಪರ್ಧೆಯಲ್ಲಿ ಸ್ಥಳೀಯ ಶಾಲೆ ಮತ್ತು ಕಾಲೇಜುಗಳಿಂದ ಸುಮಾರು 200ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿದರು. ಸದರಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಅರ್ಚನಾ ನಾಯಕ್ ಪ್ರಾಂಶುಪಾಲರು ಹಾಗೂ ಅಸಿಸ್ಟೆಂಟ್ ಡಿಸ್ಟಿಕ್ ಕಮಿಷನರ್, (ರೇ) ವಹಿಸಿದ್ದರು.



* ಬೆಂಗಳೂರು ಪೂರ್ವ ಜಿಲ್ಲೆಯ ಆನೇಕಲ್ ಸ್ಥಳೀಯ ಸಂಸ್ಥೆಯ ಶ್ರೀ ಸಾಯಿರಾಮ್ ಇಂಜಿನಿಯರಿಂಗ್ ಮತ್ತು ಶ್ರೀ ಸಾಯಿರಾಮ್ ಪದವಿ ಪೂರ್ವ ಕಾಲೇಜು ವತಿಯಿಂದ ಆಗಸ್ಟ್ 20 ರಂದು ಸದ್ಭಾವನಾ ದಿನದ ಮಹತ್ವವನ್ನು ತಿಳಿಸಿ. ನಂತರ ಪ್ರತಿಜ್ಞೆ ಬೋಧಿಸಲಾಯಿತು. ಈ ಸಂದರ್ಭದಲ್ಲಿ ಡಾ॥ ಬಿ. ಷಡಕ್ಷರಪ್ಪ, ಶ್ರೀ ಆನಂದ್, ಪ್ರಾಂಶುಪಾಲರು, ಸಾಯಿರಾಮ್ ಶಿಕ್ಷಣ ಸಂಸ್ಥೆಯ ರೋವರ್ ಸ್ಕೌಟ್ ಲೀಡರ್ಸ್‌ಗಳು ಹಾಗೂ ರೇಂಜರ್ ಲೀಡರ್ಸ್‌ಗಳು ಉಪಸ್ಥಿತರಿದ್ದರು.

* ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ವತಿಯಿಂದ ಆನೇಕಲ್ ಶಿಕ್ಷಣ ಇಲಾಖೆ ಯಿಂದ ಸೆಪ್ಟೆಂಬರ್ 05 ರಂದು ಎಸ್.ವಿ.ವಿ.ಎನ್. ನೇರಳೂರು (ಗುಡ್ಡಹಟ್ಟಿ) ಶಾಲೆಯಲ್ಲಿ ತಾಲ್ಲೂಕು ಮಟ್ಟದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮವನ್ನು ಸಂಘಟನೆ. ಮಾಡಲಾಗಿತ್ತು. ಈ ಸಂದರ್ಭದಲ್ಲಿ ಬೆಂಗಳೂರು ಪೂರ್ವ ಜಿಲ್ಲಾ ಸಂಸ್ಥೆಯ ವಿವಿಧ ಶಾಲೆ ಮತ್ತು ಕಾಲೇಜಿನ ಸ್ಕೌಟ್ಸ್–ಗೈಡ್ಸ್, ರೋವರ್ಸ್–ರೇಂಜರ್ಸ್‌ಗಳು. ಸೇವೆ ಸಲ್ಲಿಸಿದರು.

## ಬೀದರ್

* "ಯುವ ಸಮೂಹದಲ್ಲಿ ದೇಶ ಪ್ರೇಮ ಜಾಗೃತಗೊಳಿಸಿ, ಭಾತೃತ್ವ ನೆಲೆಗೊಳ್ಳಲು, ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಹಕಾರಿಯಾಗಿದೆ" ಎಂದು ರಾಜ್ಯ ಮುಖ್ಯ ಆಯುಕ್ತರಾದ ಮಾಜಿ ಸಚಿವ ಶ್ರೀ ಪಿ.ಜಿ.ಆರ್ ಸಿಂಧ್ಯಾ ಹೇಳಿದರು. ಬೀದರ್ ವಿಶ್ವವಿದ್ಯಾಲಯ, ಶಾಲಾ ಶಿಕ್ಷಣ ಇಲಾಖೆ (ಪದವಿಪೂರ್ವ) ಹಾಗೂ ಭಾರತ ಸ್ಕೈಟ್ಸ್ ಮತ್ತು ಗೈಡ್ಸ್ ವತಿಯಿಂದ ನಗರದ ಮಿಲೇನಿಯಂ ಶಾಲೆ ಅವರಣದಲ್ಲಿ ಶುಕ್ರವಾರ ಪದವಿಪೂರ್ವ ಹಾಗೂ ಪದವಿ ಕಾಲೇಜುಗಳ ಉಪನ್ಯಾಸಕರಿಗಾಗಿ ಆಯೋಜಿಸಿದ ಶಿಬಿರ ಉದ್ಘಾಟಿಸಿ ಮಾತನಾಡಿದರು. ಬೀದರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ.ಎಸ್. ಬಿರಾದಾರ್ ಮಾತನಾಡಿ, "ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯ ಮೌಲ್ಯ, ಶಿಸ್ತು ಬೆಳೆಸಿಕೊಳ್ಳಬೇಕು" ಎಂದು ಹೇಳಿದರು. ಬೀದರ್ ವಿವಿ ಕುಲಸಚಿವ ಶ್ರೀಮತಿ ಸುರೇಖಾ



ಮಾತನಾಡಿ, "ಎಲ್ಲ ಕಾಲೇಜುಗಳಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಪಾಠ ಕಲಿಸಬೇಕು" ಎಂದರು. ಶಾಲಾ ಶಿಕ್ಷಣ ಉಲಾಖೆ ಉಪ ನಿರ್ದೇಶಕ ಶ್ರೀ ಎಚ್.ಜಿ. ಸುರೇಶ ಮಾತನಾಡಿದರು. ಸ್ಕೌಟ್ಸ್ ಮತ್ತು ಗೈಡ್ ಜಿಲ್ಲಾ ಉಪಾಧ್ಯಕ್ಷೆ ಪ್ರೊ. ಲೀಲಾವತಿ ಚಕೊತೆ ಅಧ್ಯಕ್ಷತೆ ವಹಿಸಿದ್ದರು. ಶಾಲಾ ಶಿಕ್ಷಣ ಇಲಾಖೆ (ಅಭಿವೃದ್ಧಿ) ಉಪ ನಿರ್ದೇಶಕ ಶ್ರೀ ಗುರುಪ್ರಸಾದ, ಶಾಹಿನ್ ಶಿಕ್ಷಣ ಸಂಸ್ಥೆಯ ಅಧ್ಯಕ್ಷ ಡಾ. ಅಬ್ದುಲ್ ಖದೀರ್ ಉಪಸ್ಥಿತರಿದ್ದರು. ಡಾ. ಎಚ್.ಬಿ. ಭರಶೆಟ್ಟಿ ಪ್ರಾಸ್ತಾವಿಕ ಮಾತನಾಡಿದರು. ಶ್ರೀ ಶ್ರೀನಿವಾಸ ಬಿರಾದಾರ್ ಸ್ವಾಗತಿಸಿದರು. ಶ್ರೀ ರಮೇಶ ತಿಪಶೆಟ್ಟಿ ನಿರೂಪಣೆ ಮಾಡಿದರು. ಶ್ರೀಮತಿ ಸುಜಾತಾ ಪೂಜಾರಿ ವಂದಿಸಿದರು.



## ಚಾಮರಾಜನಗರ

* ಆಗಸ್ಟ್ 06 ರಂದು ಜೆ.ಎಸ್‌ಎಸ್. ಮಹಿಳಾ ಕಾಲೇಜು ಸಹಯೋಗದಲ್ಲಿ ಪ್ರಥಮ ದರ್ಜೆ ಕಾಲೇಜು ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ/ ಉಪನ್ಯಾಸಕಿಯರಿಗೆ ಪ್ರಾರಂಭಿಕ ಶಿಬಿರವನ್ನು ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು. ಈ ಶಿಬಿರದ ಅಧ್ಯಕ್ಷತೆಯನ್ನು ಶ್ರೀಮತಿ ಪುಟ್ಟಗೌರಮ್ಮ ಸಂಸ್ಥೆಯ ಉಪಾಧ್ಯಕ್ಷರು ಮತ್ತು ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ



ಚಾಮರಾಜನಗರ ಇವರು ವಹಿಸಿದ್ದರು, ಉದ್ಘಾಟಕರಾಗಿ ಶ್ರೀ ರಾಮಚಂದ್ರರಾಜೆ ಅರಸ್, ಜಿಲ್ಲಾ ಮುಖ್ಯ ಆಯುಕ್ತರು ಮತ್ತು ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಚಾಮರಾಜನಗರ, ಮುಖ್ಯ ಅತಿಥಿಗಳಾಗಿ ಶ್ರೀ ವಿ. ಮಲ್ಲಿಕಾರ್ಜುನ ಸ್ವಾಮಿ, ಜಿಲ್ಲಾ ಆಯುಕ್ತರು (ಸ್ಕೌ), ಡಾ. ಎನ್. ಮಹದೇವಸ್ವಾಮಿ ಪ್ರಾಂಶುಪಾಲರು ಜೆಎಸ್‌ಎಸ್ ಮಹಿಳಾ ಕಾಲೇಜುರವರು ಉಪಸ್ಥಿತರಿದ್ದರು. ಈ ಪ್ರಾರಂಭಿಕ ಶಿಬಿರದಲ್ಲಿ 70 ಉಪನ್ಯಾಸಕ / ಉಪನ್ಯಾಸಕಿಯರು ಹಾಜರಿದ್ದರು. ಈ ಶಿಬಿರವನ್ನು ಶ್ರೀ ಅಶೋಕ್ ಕುಮಾರ್, ಕೆ.ಪಿ., ಜಿಲ್ಲಾ ಸಂಘಟಕರು ಶಿಬಿರವನ್ನು ಸಂಘಟಿಸಿದರು.

* ಆಗಸ್ಟ್ 16 ರಂದು ಜಿಲ್ಲಾ ಸಂಸ್ಥೆಯ ಪ್ರಗತಿ ಪರಿಶೀಲನಾ ಸಭೆಯನ್ನು ಉಪನಿರ್ದೇಶಕರ ಕಚೇರಿ ಸಭಾಂಗಣದಲ್ಲಿ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯಾರವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಈ ಸಭೆಯನ್ನು ಗಿಡಕ್ಕೆ ನೀರರೆಯುವುದರ ಮೂಲಕ ಉದ್ಘಾಟಿಸಲಾಯಿತು. ಶ್ರೀ ಬಿ.ಕೆ. ಬಸವರಾಜ್ ಸಹಾಯಕ ಆಯುಕ್ತರು, ಶ್ರೀ ರಾಮಚಂದ್ರ ರಾಜೆ ಅರಸ್, ಜಿಲ್ಲಾ ಮುಖ್ಯ ಆಯುಕ್ತರು ಹಾಗೂ ಉಪನಿರ್ದೇಶಕರು ಶಾಲಾ ಶಿಕ್ಷಣ ಇಲಾಖೆ ಮತ್ತು ಶ್ರೀಮತಿ ಪುಟ್ಟಗೌರಮ್ಮ ಉಪನಿರ್ದೇಶಕರು ಪದವಿಪೂರ್ವ ಶಿಕ್ಷಣ ಇಲಾಖೆ, ಶ್ರೀ ರಾಜೇಂದ್ರ ಪ್ರಸಾದ್, ಸಾಹಾಯಕ ನಿರ್ದೇಶಕರು ಜಿಲ್ಲಾ ಪಂಚಾಯಿತಿ ಚಾಮರಾಜನಗರ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳಾದ ಶ್ರೀ ಶಂಕರ್, ಜಿಲ್ಲಾ ಆಯುಕ್ತಾರಾದ ಶ್ರೀ ವಿ. ಮಲ್ಲಿಕಾರ್ಜುನಸ್ವಾಮಿ ಹಾಗೂ 5 ತಾಲೂಕುಗಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳು ಮತ್ತು ಶಾಲಾ ಶಿಕ್ಷಣ ಇಲಾಖೆಯ ವಿಷಯ ಪರಿವೀಕ್ಷಕರುಗಳು ಹಾಗೂ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳು ಮತ್ತು ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಈ ಸಭೆಯಲ್ಲಿ ಉಪಸ್ಥಿತರಿದ್ದರು.



## ಚಿತ್ರದುರ್ಗ

* ವಾಗ್ದೇವಿ ಇಂಡಿಪೆಂಡೆಂಟ್ ಲೋಕಲ್ ಅಸೋಸಿಯೇಷನ್ ಹೊಳಲ್ಕೆರೆ ಇಲ್ಲಿ ದೇಶಭಕ್ತಿ ಗೀತೆ ಗಾಯನ ಸ್ಪರ್ಧೆಯನ್ನು ಆಗಸ್ಟ್ 19 ರಂದು ಆಯೋಜಿಸಲಾಗಿತ್ತು.

* ಆಗಸ್ಟ್ 20 ರಂದು ಸದ್ಭಾವನಾ ದಿನಾಚರಣೆಯನ್ನು ಆಚರಿಸಲಾಯಿತು. ಈ ಪ್ರಯುಕ್ತ ವಾಗ್ದೇವಿ ಶಾಲೆಯ ಕಬ್ ಮತ್ತು ಬುಲ್ಬುಲ್‌ಗಳಿಗೆ ಪ್ರತಿಜ್ಞಾ ವಿಧಿಯನ್ನು ಕಬ್ ಮಾಸ್ಟರ್ ಶ್ರೀ ಸುಭಾಷ್ ಅವರು ಬೋಧಿಸಿದರು. ನಂತರ ಸದ್ಭಾವನಾ ದಿನಾಚರಣೆಯ ಮಹತ್ವವನ್ನು ಮಕ್ಕಳೊಂದಿಗೆ ಹಂಚಿಕೊಂಡರು. ನಂತರ ವಿವಿಧ ಹೂವಿನ ಗಿಡಗಳನ್ನು ನೆಡುವ ಮೂಲಕ ದಿನಾಚರಣೆಯನ್ನು ಆಚರಿಸಲಾಯಿತು.



* ಹೊಳಲ್ಕೆರೆ ಸ್ಥಳೀಯ ಸಂಸ್ಥೆ, ಸರ್ಕಾರಿ ಪ್ರೌಢಶಾಲೆ ಹಿರೇಕಂದವಾಡಿ ಶಾಲೆಯಲ್ಲಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಗಳಾದ ಶ್ರೀ ವೆಂಕಟೇಶ್ವರಪ್ಪ ಶಾಲಾ ಮುಖ್ಯೋಪಾಧ್ಯರು ಹಾಗೂ ಶಿಕ್ಷಕರುಗಳು ಶಾಲಾ ಮಕ್ಕಳೊಂದಿಗೆ ಸದ್ಭಾವನಾ ದಿನಾಚರಣೆಯನ್ನು ಆಚರಿಸಲಾಯಿತು.

* ಶ್ರೀ ಶಾರದಾ ನ್ಯಾಷನಲ್ ಶಾಲೆಯ ಮಕ್ಕಳು ರಾಷ್ಟೀಯ ಸದ್ಭಾವನ ದಿನಾಚರಣೆಯ ಆಚರಿಸಿದರು. ನಂತರ ಶಾಲಾ ಕಬ್ ಹಾಗೂ ಬುಲ್ ಬುಲ್ಸ್‌ಗಳು



ಸಾದ್ಭವನ ದಿನಾಚರಣೆ ಅಂಗವಾಗಿ ತನ್ನ ತಾಯಿ ಹೆಸರಲ್ಲಿ ಒಂದು ಗಿಡವನ್ನು ನೆಟ್ಟರು.

* ಆಗಸ್ಟ್ 23 ರಂದು ಹೊಳಲ್ಕೆರೆ ಸ್ಥಳೀಯ ಸಂಸ್ಥೆಯಲ್ಲಿ ಗೀತ ಗಾಯನ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಎಚ್. ಶ್ರೀನಿವಾಸ್ ಸಿ.ಆರ್.ಪಿ. ಶ್ರೀಮತಿ ಗಿರಿಜಮ್ಮ ಹಾಗೂ ಸಂಗೀತ ಶಿಕ್ಷಕರಾದ ಶ್ರೀಮತಿ ಸಂಧ್ಯಾ ಅವರು ಮಕ್ಕಳಿಗೆ ಸಂಗೀತ ಅಭ್ಯಾಸ ಹೇಗೆ ಮಾಡುವುದು ಎಂದು ತಿಳಿಸಿದರು.

* ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೊಸದುರ್ಗ ಇದರ ವತಿಯಿಂದ ಆಗಸ್ಟ್ 22 ರಂದು ಒಂದು ದಿನದ ಚಾರಣ ಕಾರ್ಯಕ್ರಮವನ್ನು ಹೊಸದುರ್ಗದ ಸದ್ಗುರು ಆಶ್ರಮದ ಬಳಿ ಇರುವ ಪರ್ವತ ಶ್ರೇಣಿ ಹಾಗೂ ಬಿಳಿಕಲ್ಲು ರಂಗನಾಥ ಸ್ವಾಮಿ ಬೆಟ್ಟಕ್ಕೆ ಹಮ್ಮಿಕೊಳ್ಳಲಾಗಿತ್ತು. ಈ ಚಾರಣ ಕಾರ್ಯಕ್ರಮದಲ್ಲಿ 40 ರೇಂಜರ್ಸ್–ರೋವರ್ಸ್‌ಗಳು ಹಾಗೂ ಸಿಬ್ಬಂದಿ ಭಾಗವಹಿಸಿದ್ದರು. ಸದರಿ ರೇಂಜರ್ಸ್–ರೋವರ್ಸ್‌ಗಳಿಗೆ ಅಲ್ಲಿ ದೊರಕುವ ಔಷಧೀಯ ಸಸ್ಯಗಳು ಹಾಗೂ ಪ್ರಾಣಿ ಸಂಕುಲದ ಮಾಹಿತಿಯನ್ನು ನೀಡಲಾಯಿತು ಹಾಗೆಯೇ ಬಿಳಿಕಲ್ಲು ರಂಗನಾಥ ಸ್ವಾಮಿಯ ಐತಿಹಾಸಿಕ ಮಹತ್ವವನ್ನು ಕೂಡ ತಿಳಿಸಿಕೊಡಲಾಯಿತು.

* ಜಿಲ್ಲಾ ಸಂಸ್ಥೆ ವತಿಯಿಂದ ಕಾಲೇಜು ಹಂತದ ರೋವರ್ಸ್‌ಗಳು, ಪರಿಸರ ಸಂರಕ್ಷಣೆ ಮತ್ತು ನಶೆ ಮುಕ್ತ ಸಮಾಜದ ಜಾಗೃತಿ ಕುರಿತು, ಮೂರು ತಾಲ್ಲೂಕು ವ್ಯಾಪ್ತಿಯ 22 ಹಳ್ಳಿಗಳನ್ನು ಒಳಗೊಂಡು, 137 ಕಿಲೋಮೀಟರ್ ಪ್ರಯಾಣ ಚಲಿಸಿ, ಪರಿಸರ ಸಂರಕ್ಷಣೆ ಹಾಗು ಸಮಾಜವನ್ನು ನಶೆ ಮುಕ್ತವನ್ನಾಗಿ ಜಾಗೃತಿ ಕುರಿತು ಕೈಗೊಂಡ ಸ್ಕೌಟ್ಸ್ ಜಾಥಾವನ್ನು ಚಿತ್ರದುರ್ಗ ಜಿಲ್ಲೆಯ ಡಿ.ಓ.ಎಸ್.ಪಿ., ಶ್ರೀ ದಿನಕರ್ ರವರು ಉದ್ಘಾಟಿಸಿದರು. ಈ ಉದ್ಘಾಟನೆ ಕಾರ್ಯಕ್ರಮದಲ್ಲಿ ಎಲ್ಲಾ ಪೊಲೀಸ್ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು, ಈ ಜಾಥಾದಲ್ಲಿ ಈ ಕೆಳಕಂಡ ಗ್ರಾಮಗಳಿಗೆ ಭೇಟಿ ನೀಡಿ ಗ್ರಾಮದ ಮುಖಂಡರನ್ನು ಹಾಗೂ ಶಾಲೆಯ ಮುಖ್ಯೋಪಾಧ್ಯಾಯರನ್ನು ಭೇಟಿ ಮಾಡಿ ಪರಿಸರ ನೈರ್ಮಲ್ಯ ಮತ್ತು ನಶೆ ಮುಕ್ತ ಸಮಾಜದ ಬಗ್ಗೆ ಅರಿವು ಮೂಡಿಸಲಾಯಿತು. ದೊಡ್ಡಸಿದ್ಧನಹಳ್ಳಿ, ಕಸವನಹಳ್ಳಿ, ಎಣ್ಣೆಗೆರೆ, ಜೋಡಿನಗರಗೆರೆ, ಸಿದ್ಧಾಪುರ, ಗೊಳ್ಳಹಳ್ಳಿ, ಯರಬಳ್ಳಿ, ಹತ್ತಿಕೋಟೆ, ಹಿರಿಯೂರ್, ಮೇಟಿಕುರ್ಕೆ, ಗುಯಿಲಾಳು, ಐಮಂಗಲ, ಬುರುಜನರೊಪ್ಪ ಮತ್ತು ಕ್ಯಾದಿಗೆರೆ. ಜಾಥಾ ಅಂತ್ಯದಲ್ಲಿ ಜಿಲ್ಲಾ ಸಂಸ್ಥೆ ಚಿತ್ರದುರ್ಗ ಜಿಲ್ಲಾ ಕೇಂದ್ರ ಕಚೇರಿ ಸಭಾಂಗಣದಲ್ಲಿ ನಡೆದ ಮುಕ್ತಾಯ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀಮತಿ ಸವಿತಾ ಶಿವಕುಮಾರ, ಗೈಡ್ ಆಯುಕ್ತರು ವಹಿಸಿಕೊಂಡಿದ್ದರು. ಈ ಕಾರ್ಯಕ್ರಮದಲ್ಲಿ ರೋಟರಿ ಕ್ಲಬ್ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಶ್ರೀ ಶಿವಕುಮಾರ್, ಪದಾಧಿಕಾರಿಗಳು, ಇನ್ನರ್‌ವೀಲ್ ಕ್ಲಬ್ ಅಧ್ಯಕ್ಷರು, ಪದಾಧಿಕಾರಿಗಳು ಉಪಸ್ಥಿತರಿದ್ದರು, ಈ ಸಮಾರೋಪ ಸಮಾರಂಭದ ಪ್ರಾಸ್ತಾವಿಕ ನುಡಿಯನ್ನು, ಜಿಲ್ಲಾ ಯುವ ಸಮಿತಿಯ ಕಾರ್ಯದರ್ಶಿ ಶ್ರೀ ಚಿದಾನಂದ ಎಲ್. ರವರು ನೀಡಿದರು. ಈ ಕಾರ್ಯಕ್ರಮ ಬಗ್ಗೆ ವಿದ್ಯಾರ್ಥಿಗಳು ಅವರ ಅನುಭವವನ್ನು ವ್ಯಕ್ತಪಡಿಸಿದರು. ವಂದನಾರ್ಪಣೆಯನ್ನು ಜಿಲ್ಲಾ ಸಂಘಟಕರಾದ ಶ್ರೀ ಮಲ್ಲೇಶಪ್ಪ ಕೆ.ಟಿ.ರವರು ನೀಡಿದರು.



## ದಾವಣಗೆರೆ

* ಆಗಸ್ಟ್ 22 ರಂದು ನಡೆದ ರಾಜ್ಯ ಪುರಸ್ಕಾರ ಆನ್‌ಲೈನ್ ಮಾರ್ಕ್‌ಟೆಸ್ಟ್‌ನಲ್ಲಿ ದಾವಣಗೆರೆ ಜಿಲ್ಲೆಯ ಎಲ್ಲಾ ಸ್ಥಳೀಯ ಸಂಸ್ಥೆಗಳ ಶಾಲೆಗಳಲ್ಲಿ ಶಾಲಾ ಸಿಬ್ಬಂದಿಯ ನೆರವಿನೊಂದಿಗೆ ಮಕ್ಕಳು ಪರೀಕ್ಷೆಯನ್ನು ಎದುರಿಸಿದರು.

* ಆಗಸ್ಟ್ 24 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆಯ ಶ್ರೀ ತರಳಬಾಳು ಜಗದ್ಗುರು ವಸತಿಯುತ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್‌ಗಳು ಮಣ್ಣಿನ ಗಣೇಶವನ್ನು ತಾವೇ ತಯಾರಿಸಿ, ಪರಿಸರ ಸಂರಕ್ಷಣೆ ಹಾಗೂ ಪ್ರಕೃತಿ ಪ್ರೇಮವನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳಾದ ಶ್ರೀ ರವೀಂದ್ರಸ್ವಾಮಿ ಟಿ.ಎಂ, ಗೈಡ್ ಕ್ಯಾಪ್ಟನ್ ಶ್ರೀಮತಿ ಅನಿತಾ, ಶ್ರೀಮತಿ ಸುಜಾತ, ಶಾಲಾ ಸಿಬ್ಬಂದಿ, ಮಕ್ಕಳ ಪೋಷಕರು ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು.



* ಆಗಸ್ಟ್ 25 ರಂದು ಶ್ರೀ ಸಿದ್ದಗಂಗಾ ಸ್ಥಳೀಯ ಸಂಸ್ಥೆಯ ಸಿದ್ದಗಂಗಾ ಶಾಲೆಯಲ್ಲಿ ಪರಿಸರ ಸ್ನೇಹಿ ಗಣಪತಿ ತಯಾರಿಕೆ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಸ್ಕೌಟರ್ಸ್-ಗೈಡರ್ಸ್‌ಗಳು ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸಿದರು.

* ಆಗಸ್ಟ್ 25 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಶ್ರೀ ಸಿದ್ದೇಶ್ವರ ಶಾಲೆಯಕಬ್ ಮತ್ತು ಬುಲ್‌ಬುಲ್, ಸ್ಕೌಟ್ ಮತ್ತು ಗೈಡ್‌ಗಳು ಪರಿಸರ ಸ್ನೇಹಿ ಗಣೇಶನನ್ನು ತಯಾರಿಸಿ ಸಂಭ್ರಮಿಸಿದರು. ಜಿಲ್ಲಾ ಸಂಸ್ಥೆ ವತಿಯಿಂದ ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ ಭಾಗವಹಿಸಿ ಗಣೇಶ ಹಬ್ಬದ ಮಹತ್ವವನ್ನು ಮತ್ತು ಪರಿಸರ ಸ್ನೇಹಿ ಗಣಪತಿಯನ್ನು ಏಕೆ ಮಾಡಬೇಕೆಂಬ ಮಾಹಿತಿಯನ್ನು ನೀಡಿದರು. ಈ ಸಂದರ್ಭದಲ್ಲಿ ಶ್ರೀಮತಿ ಮಂಜುಳಾ, ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿಗಳು ಭಾಗವಹಿಸಿ ಮಕ್ಕಳನ್ನು ಪ್ರೋತ್ಸಾಹಿಸಿದರು. ಶ್ರೀಮತಿ ಕವಿತಾ ಮಹಿಳಾ ಸ್ಕೌಟ್ ಮಾಸ್ಟರ್ ಮತ್ತು ಸ್ಥಳೀಯ ಸಂಸ್ಥೆ ಖಜಾಂಚಿಗಳು ಕಾರ್ಯಕ್ರಮವನ್ನು ಸಂಘಟಿಸಿದರು.



* ಆಗಸ್ಟ್ 26 ರಂದು ದಾವಣಗೆರೆ ಉತ್ತರ ವಲಯ ಸ್ಥಳೀಯ ಸಂಸ್ಥೆಯ ಸೆಂಟ್ ಪೀಟರ್ ಕಾನ್ವೆಂಟ್ ಶಾಲೆಯಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಪರಿಸರ ಸ್ನೇಹಿ ಗಣಪತಿ ತಯಾರಿಕೆ ಚಟುವಟಿಕೆಯನ್ನು ಆಯೋಜಿಸಲಾಗಿತ್ತು. ಶ್ರೀಮತಿ ವಾಣಿ ಶಾಲೆಯ ಕಾರ್ಯದರ್ಶಿಗಳು ಮತ್ತು ಮಹಿಳಾ ಸ್ಕೌಟ್ ಮಾಸ್ಟರ್ ಹಾಗೂ ಶಿಕ್ಷಕಕರು ಕಾರ್ಯಕ್ರಮವನ್ನು ಸಂಘಟಿಸಿದರು.

* ಸೆಪ್ಟೆಂಬರ್ 02 ರಿಂದ 04ರ ವರೆಗೆ ಧ.ರಾ.ಮ ಸ್ಕೌಟ್ ಭವನದಲ್ಲಿ ಜಿಲ್ಲಾ ಮಟ್ಟದ ರೋವರ್ ಮತ್ತು ರೇಂಜರ್ಸ್‌ಗಳ ರಾಜ್ಯ ಪುರಸ್ಕಾರ ಪೂರ್ವಭಾವಿ ಪರೀಕ್ಷಾ ಶಿಬಿರವನ್ನು ಆಯೋಜಿಸಲಾಗಿತ್ತು. ಸದರಿ ಶಿಬಿರದಲ್ಲಿ ರೋವರ್ ವಿಭಾಗದ ನಾಯಕರಾಗಿ ಶ್ರೀ ಗಣೇಶ್ .ಬಿ.ಎಂ ಮತ್ತು ರೇಂಜರ್ ವಿಭಾಗದ ನಾಯಕಿಯಾಗಿ ಡಾ. ಶಕುಂತಾಲ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ 48 ರೋವರ್ಸ್ ಮತ್ತು ರೇಂಜರ್ಸ್‌ಗಳು ಭಾಗವಹಿಸಿದ್ದರು. ವಿವಿಧ ಕಾಲೇಜುಗಳ ರೋವರ್ ಸ್ಕೌಟ್ ಲೀಡರ್ ಮತ್ತು ರೇಂಜರ್ ಲೀಡರ್‌ಗಳು ಸಿಬ್ಬಂದಿಗಳಾಗಿ ಕಾರ್ಯನಿರ್ವಹಿಸಿದರು. ಶಿಬಿರದಲ್ಲಿ ಶ್ರೀ ಮುರುಘ ರಾಜೇಂದ್ರ ಜೆ. ಚಿಗಟೇರಿ, ಜಿಲ್ಲಾ ಮುಖ್ಯ ಆಯುಕ್ತರು,



ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ ಆಯುಕ್ತರು, ಶ್ರೀಮತಿ ಶಾರದಾ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು, ಶ್ರೀ ಪುಟ್ಟಪ್ಪ ಕಾಶೀಪುರ್ ಜಿಲ್ಲಾ ಕಬ್ ಆಯುಕ್ತರು, ಶ್ರೀ ಬೂಸ್ನೂರು ವಿಶ್ವನಾಥ್ ಜಿಲ್ಲಾ ಖಜಾಂಚಿಗಳು ಭಾಗವಹಿಸಿ ರೋವರ್ಸ್ ಮತ್ತು ರೇಂಜರ್ಸ್‌ಗಳಿಗೆ ಶುಭ ಹಾರೈಸಿದರು. ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು ಕ್ವಾರ್ಟರ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸಿದರು. ಶ್ರೀಮತಿ ಅಶ್ವಿನಿ ಜೆ., ಎಸ್.ಜಿ.ವಿ. ಯುವ ಸಮಿತಿ ಸದಸ್ಯರ ಸಹಕಾರದಿಂದ ಶಿಬಿರವನ್ನು ಸಂಘಟಿಸಿದರು.

* ಸೆಪ್ಟೆಂಬರ್ 07 ರಂದು ಚತುರ್ಥಚರಣ, ಹಿರಕ್ ಪಂಕ್ ಪರೀಕ್ಷಾ ಶಿಬಿರವನ್ನು ಧ.ರಾ.ಮ ಸ್ಕೌಟ್ ಭವನದಲ್ಲಿ ಆಯೋಜಿಸಲಾಗಿತ್ತು. ಕಬ್ ವಿಭಾಗದ ನಾಯಕರಾಗಿ ಶ್ರೀ ಕುಮಾರ ಸ್ವಾಮಿ.ಎ.ಎಲ್.ಟಿಕಬ್ ಮತ್ತು ಬುಲ್‌ಬುಲ್ ವಿಭಾಗದ ನಾಯಕರಾಗಿ ಶ್ರೀಮತಿ ನಾಗರತ್ನ ಹೆಚ್.ಡಬ್ಲ್ಯೂ.ಬಿ ಕಾರ್ಯನಿರ್ವಹಿಸಿದರು. ವಿವಿಧ ಶಾಲೆಯ ಕಬ್ ಮಾಸ್ಟರ್ ಫ್ಲಾಕ್ ಲೀಡರ್‌ಗಳು ಶಿಬಿರದಲ್ಲಿ ಭಾಗವಹಿಸಿದ್ದರು. ಶಿಬಿರದಲ್ಲಿ ಶ್ರೀ ಎ.ಪಿ. ಷಡಾಕ್ಷರಪ್ಪ, ಜಿಲ್ಲಾ ಸ್ಕೌಟ್ಆಯುಕ್ತರು, ಶ್ರೀಮತಿ ಶಾರದ ಮಾಗನಹಳ್ಳಿ ಜಿಲ್ಲಾ ಗೈಡ್ ಆಯುಕ್ತರು ಮುಂತಾದವರು ಉಪಸ್ಥಿತರಿದ್ದರು. ಶ್ರೀಮತಿ ಆರ್. ಸುಖವಾಣಿ, ಜಿಲ್ಲಾ ಸಹ ಕಾರ್ಯದರ್ಶಿಗಳು ಕ್ವಾರ್ಟರ್ ಮಾಸ್ಟರ್ ಆಗಿ ಕಾರ್ಯನಿರ್ವಹಿಸಿದರು. ಶ್ರೀಮತಿ ಜೆ. ಅಶ್ವಿನಿ, ಎಸ್.ಜಿ.ವಿ ಯುವ ಸಮಿತಿ ಸದಸ್ಯರ ಸಹಕಾರದಿಂದ ಶಿಬಿರವನ್ನು ಯಶಸ್ವಿಯಾಗಿ ಸಂಘಟಿಸಿದರು.

* ಸೆಪ್ಟೆಂಬರ್ 10 ರಂದು ಕೊಂಡಜ್ಜಿ ಬಸಪ್ಪ ಸ್ಥಳೀಯ ಸಂಸ್ಥೆ ಮತ್ತು ಇಂದ್ರಪ್ರಸ್ಥ ಯೋಗ ಅಕಾಡೆಮಿ ಇವರ ಸಹಯೋಗದಲ್ಲಿ ಸೆಂಟ್ ಪಾಲ್ಸ್ ಕಾನ್ವೆಂಟ್ ಶಾಲೆಯ ಗೈಡ್ ವಿದ್ಯಾರ್ಥಿನಿಯರಿಗೆ ವಿಶೇಷ ಯೋಗ ತರಬೇತಿ ಶಿಬಿರವನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಮುಖ್ಯ ಅತಿಥಿಗಳಾಗಿ ಡಾ. ಶಿವಕುಮಾರ್, ಇ.ಎನ್.ಟಿ. ತಜ್ಞರು, ಶಾಲೆಯ ಮುಖ್ಯಸ್ಥರಾದ ಸಿಸ್ಟರ್ ಮೇರಿಸ್, ವ್ಯವಸ್ಥಾಪಕರಾದ ಸಿಸ್ಟರ್ ರಶ್ಮಿ, ಶ್ರೀ ಕೊಟ್ರೇಶ್ ಎನ್.ಕೆ., ಜಿಲ್ಲಾ ಸಹಾಯಕ ಆಯುಕ್ತರು, ಇಂದ್ರಪ್ರಸ್ಥ ಟ್ರಸ್ಟ್‌ನ ಶ್ರೀ ರವೀಂದ್ರಸ್ವಾಮಿ ಟಿ.ಎಂ., ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಶ್ರೀಮತಿ ರಜಿನಿ ಹೆಚ್.ಎಂ., ಗೈಡ್ ಕ್ಯಾಪ್ಟನ್ ಉಪಸ್ಥಿತರಿದ್ದರು.



## ಕಲಬುರಗಿ

* ಜಿಲ್ಲಾ ಸಂಸ್ಥೆ ಕಲಬುರಗಿಯ ಶ್ರೀ ಗುರು ವಿದ್ಯಾ ಪೀಠ ಶಾಲೆ ಕಲಬುರಗಿ ವತಿಯಿಂದ ಕಬ್ಸ್-ಬುಲ್‌ಬುಲ್ಸ್ ಸ್ಕೌಟ್ಸ್-ಗೈಡ್ಸ್‌ಗಳು ಪರಿಸರ ಸ್ನೇಹಿ ಗಣಪತಿ ಅಭಿಯಾನ ಅಂಗವಾಗಿ ಮಣ್ಣಿನ ಗಣಪತಿ ಮಾಡಿದರು.



## ಕಾರವಾರ (ಉ.ಕ.)

* ಆಗಸ್ಟ್ 21 ರಂದು ಜಿಲ್ಲಾ ಸಂಸ್ಥೆ ಕಾರವಾರ, ಶಿರ್ಶಿ, ಕಾಲೇಜು ಶಿಕ್ಷಣ ಇಲಾಖೆ ಹಾಗೂ ಪದವಿ ಪೂರ್ವ ಶಿಕ್ಷಣ ಇಲಾಖೆ ಇವರುಗಳ ಸಂಯುಕ್ತಾಶ್ರಯದಲ್ಲಿ ಉತ್ತರ ಕನ್ನಡ ಜಿಲ್ಲೆಯ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕ ಉಪನ್ಯಾಸಕಿಯರಿಗೆ ಒಂದು ದಿನದ ಪ್ರಾರಂಭಿಕ ಶಿಬಿರವು ಕುಮಟಾ ತಾಲ್ಲೂಕಿನ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯಲ್ಲಿ ನಡೆಯಿತು. ಇದರಲ್ಲಿ ಒಟ್ಟು 67 ಶಿಬಿರಾರ್ಥಿಗಳು ಉಪಸ್ಥಿತರಿದ್ದರು. ಸಮಾರಂಭದ ಉದ್ಘಾಟನೆಯನ್ನು ಡಯಟ್ ಉಪ ಪ್ರಾಂಶುಪಾಲರಾದ ಶ್ರೀ ಜಿ.ಎಸ್. ಭಟ್ಟರವರು ನೇರವೇರಿಸಿಕೊಟ್ಟರು. ಅಧ್ಯಕ್ಷತೆಯನ್ನು ಶಿರಸಿ ಜಿಲ್ಲಾ ಸಂಸ್ಥೆಯ ಜಿಲ್ಲಾ ಮುಖ್ಯ ಆಯುಕ್ತರಾದ ವಿ.ಹೆಚ್.ಭಟ್ಕಳ ರವರು ವಹಿಸಿದ್ದರು. ಸ್ವಾಗತವನ್ನು ಕಾರವಾರ ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರರವರು ನೆರವೇರಿಸಿಕೊಟ್ಟರು ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿ ಶ್ರೀ ಗುರುಮೂರ್ತಿ ಎಂ., ಎಲ್.ಟಿ., ಶ್ರೀ ಬಿ.ಡಿ. ಫರ್ನಾಂಡಿಸ್, ಎಲ್.ಟಿ. ಭಾಗವಹಿಸಿದ್ದರು. ಶ್ರೀಮತಿ ಭಾರತಿ ಡಯಾಸ್ ಎ.ಎಸ್.ಓ.ಸಿ, ವಂದನೆಯನ್ನು ಶಿರಸಿಯ ಎ.ಎಸ್.ಓ.ಸಿ ಶ್ರೀ ವಿರೇಶ ಮಾದರ ನಿರ್ವಹಿಸಿದರು.



* ಸೆಪ್ಟೆಂಬರ್ 13 ಮತ್ತು 14 ರಂದು ಜಿಲ್ಲಾ ಮಟ್ಟದ ರೋವರ್ಸ್-ರೇಂಜರ್ಸ್‌ಗಳ ನಿಪುಣ್ ಪರೀಕ್ಷಾ ಶಿಬಿರವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಕುಮಟಾದಲ್ಲಿ ಹಮ್ಮಿಕೊಳ್ಳಲಾಗಿತ್ತು ಇದರಲ್ಲಿ ಒಟ್ಟು 70 ರೋವರ್ಸ್-ರೇಂಜರ್ಸ್‌ಗಳು ಭಾಗವಹಿಸಿದ್ದರು. ಜಿಲ್ಲಾ ಮುಖ್ಯ ಆಯುಕ್ತರಾದ ಡಾ॥ ಜಿ.ಜಿ. ಸಭಾಹಿತರವರು ಗಿಡಕ್ಕೆ ನೀರೆರೆಯುವ ಮೂಲಕ ಉದ್ಘಾಟಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ವಿಜಯಾ ಡಿ. ನಾಯ್ಕರವರು ವಹಿಸಿದ್ದರು. ಸ್ವಾಗತವನ್ನು ಜಿಲ್ಲಾ ಕಾರ್ಯದರ್ಶಿ ಶ್ರೀ ಆರ್.ಟಿ. ಹೆಬ್ಬಾರ ರವರು ನಿರ್ವಹಿಸಿದರು ವಂದನೆಯನ್ನು ಜಿಲ್ಲಾ ಗೈಡ ಆಯುಕ್ತರಾದ ಶೋಭಾ ಕುಲಕರ್ಣಿರವರು ನಿರ್ವಹಿಸಿದರು. ಶಿಬಿರದ ಸಂಘಟನೆ, ಶಿಬಿರದ ಉಸ್ತುವಾರಿ ಹಾಗೂ ರೇಂಜರ್ ವಿಭಾಗದ ನಾಯಕಿಯಾಗಿ ಎ.ಎಸ್.ಓ.ಸಿ ಭಾರತಿ ಡಾಯಸ್‌ರವರು ಕಾರ್ಯನಿರ್ವಹಿಸಿದರು. ನಿರೂಪಣೆಯನ್ನು ಕಾಲೇಜಿನ ಆರ್.ಎಸ್.ಎಲ್. ಡಾ॥ ಮಂಜುರವರು ನಿರ್ವಹಿಸಿದರು. ಸಭೆಯಲ್ಲಿ ಕಾಲೇಜಿನ ಐಕ್ಯೂಎಸಿಯ ಸಂಚಾಲಕರಾದ ಪ್ರೊ. ಈಶ್ವರ ನಾಯ್ಕ ಭಾಗವಹಿಸಿದ್ದರು.



* ಸೆಪ್ಟೆಂಬರ್ 20 ರಂದು ಮುರ್ಡೇಶ್ವರ ದೇವಸ್ಥಾನದ ಕಡಲತೀರ ಸ್ವಚ್ಛತೆಯನ್ನು ಭಟ್ಕಳ ಸ್ಥಳೀಯ ಸಂಸ್ಥೆಯ ಆರ್.ಎನ್.ಎಸ್. ಶಾಲೆಯ ಸಹಯೋಗದೊಂದಿಗೆ ಎ.ಎಸ್.ಓ.ಸಿ. ಶ್ರೀಮತಿ ಭಾರತಿ ಡಾಯಸರವರ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿತ್ತು. ಬೆಳಿಗ್ಗೆ 10 ಗಂಟೆಗೆ ಆರ್.ಎನ್.ಎಸ್. ಶಾಲೆಯಿಂದ ಅಲ್ಲಿಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಗೀತಾಕಿನಿರವರು ಉದ್ಘಾಟನೆ ಮಾಡಿ ಶುಭ ಕೋರಿದರು. ಕರಾವಳಿ ಕಾವಲು ಪಡೆಯ ಪಿಎಸ್‌ಐ ಶ್ರೀಮತಿ ವೀಣಾ ಚಿತ್ರಾಪುರ ಹಾಗೂ ಅವರ ಸಿಬ್ಬಂದಿ ವರ್ಗದವರು ಮುರ್ಡೇಶ್ವರ ಪೊಲೀಸ ಇಲಾಖೆಯ ಸಿಬ್ಬಂದಿ ವರ್ಗದವರು ಮಕ್ಕಳ ರಕ್ಷಣೆಗೆ ನಿಂತಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಗೈಡ್ ಆಯುಕ್ತರಾದ ಶ್ರೀಮತಿ ಶೋಭಾ ಕುಲಕರ್ಣಿ, ಆರ್.ಎನ್.ಎಸ್. ದಳ ನಾಯಕರುಗಳಾದ ಶ್ರೀಮತಿ ದೇವಿದಾಸ ನಾಯ್ಕ,



ಶ್ರೀಮತಿ ವೀಣಾ ಮೊಗೆರ, ಶ್ರೀಮತಿ ಸಾವಿತ್ರಿಗೌಡ, ದೈಹಿಕ ಶಿಕ್ಷಕರು ಹಾಗೂ ಒಟ್ಟು 100 ಸ್ಕೌಟ್ಸ್-ಗೈಡ್ಸ್‌ಗಳು ಹಾಜರಿದ್ದರು.

* ಸೆಪ್ಟೆಂಬರ್ 20 ರಂದು ಕುಮಟಾ ಸ್ಥಳೀಯ ಸಂಸ್ಥೆ ವತಿಯಿಂದ ರೋವರ್ಸ್-ರೇಂಜರ್ಸ್, ಸ್ಕೌಟ್ಸ್-ಗೈಡ್ಸ್‌ಗಳೊಂದಿಗೆ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ಅನಿಲ ದೇಶ ಭಂಡಾರಿಯವರ ನೇತೃತ್ವದಲ್ಲಿ ವನ್ನಳ್ಳಿ ಕಡಲ ತೀರ ಸ್ವಚ್ಛತಾ ಕಾರ್ಯಕ್ರಮ ನಡೆಯಿತು. ಈ ಕಾರ್ಯಕ್ರಮದಲ್ಲಿ ಒಟ್ಟು 30 ಅಭ್ಯರ್ಥಿಗಳು ದಳ ನಾಯಕರುಗಳಾದ ಡಾ. ಮಂಜು, ಶ್ರೀಮತಿ ಲಾವಣ್ಯ ಹಾಜರಿದ್ದು. ವನ್ನಳ್ಳಿ ಕಡಲತೀರವನ್ನು ಸ್ವಚ್ಛಗೊಳಿಸಲಾಯಿತು. ಕಾರ್ಯಕ್ರಮವು ಯಶಸ್ವಿಯಾಗಿ ಸಂಪನ್ನೊಗೊಳಿಸಲಾಯಿತು.

## ಕೊಡಗು

* ಮಡಿಕೇರಿ ಸ್ಥಳೀಯ ಸಂಸ್ಥೆಯಲ್ಲಿ ಗೀತಗಾಯನ ಸ್ಪರ್ಧೆಯು ಸೆಪ್ಟೆಂಬರ್ 06 ರಂದು ನಡೆಯಿತು. ಉದ್ಘಾಟಕರಾಗಿ ಸಮಾಜ ಸೇವಕಿ ಶ್ರೀಮತಿ ಜಯಂತಿ ಶೆಟ್ಟಿ ಆಗಮಿಸಿ "ವಿದ್ಯಾರ್ಥಿಗಳು ಶಿಸ್ತುಬದ್ಧ ಜೀವನ ನಡೆಸುವುದರ ಮೂಲಕ ಶೈಕ್ಷಣಿಕ ಗುರಿ ಸಾಧಿಸಬೇಕು" ಎಂದು ಕರೆ ನೀಡಿದರು. ತೀರ್ಪುಗಾರರಾಗಿ ಹಿರಿಯ ಕಲಾವಿದೆ ಹಾಗೂ ಸಾಹಿತಿ ಶ್ರೀಮತಿ ಶೋಭಾ ಸುಬ್ಬಯ್ಯ, ನಿವೃತ್ತ ಮುಖ್ಯ ಶಿಕ್ಷಕಿ ಹಾಗೂ ಗಾಯಕಿ ಶ್ರೀಮತಿ ಪ್ರೇಮ ಕೃಷ್ಣಪ್ಪ ಕಾರ್ಯನಿರ್ವಹಿಸಿದ್ದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀಮತಿ ಈರಮಂಡ ಹರಿಣಿ ವಿಜಯ ಅವರು ವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಜಿಲ್ಲಾ ಪ್ರಧಾನ ಆಯುಕ್ತರು ಶ್ರೀ ಕೆ.ಟಿ. ಬೇಬಿ ಮ್ಯಾಥ್ಯೂ, ಜಿಲ್ಲಾ ಸ್ಕೌಟ್ ಆಯುಕ್ತರು ಶ್ರೀ ಜಿಮ್ಮಿ ಸಿಕ್ವೇರಾ, ಶಿಕ್ಷಕರು, ಸ್ಕೌಟ್ಸ್-ಗೈಡ್ಸ್, ಕಬ್ಸ್-ಬುಲ್‌ಬುಲ್‌ಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 06 ರಂದು ಸ್ಥಳೀಯ ಸಂಸ್ಥೆ ಕುಶಾಲನಗರದ ವ್ಯಾಪ್ತಿಗೆ ಬರುವ ಅಂಜಲ ವಿದ್ಯಾನಿಕೇತನ ವಿದ್ಯಾ ಸಂಸ್ಥೆ ಕೊಡಿಗೆ ಇಲ್ಲಿ ಕಬ್-ಬುಲ್‌ಬುಲ್ ಸ್ಕೌಟ್-ಗೈಡ್‌ಗಳ ಹೊಸದಳ ಪ್ರಾರಂಭಿಸಲಾಯಿತು. ಅಂಜಲ ವಿದ್ಯಾನಿಕೇತನದ ವಿದ್ಯಾ ಸಂಸ್ಥೆಯ ಮುಖ್ಯೋಪಾಧ್ಯಾಯರಾಗಿದ್ದ ಸ್ಕೌಟಿಂಗ್-ಗೈಡ್‌ನಲ್ಲಿ ಉನ್ನತ ಎಲ್.ಟಿ. ತರಬೇತಿ ಪಡೆದ ಸಿಸ್ಟರ್ ಬೆನ್ವಿಟಾ ಅವರ ಮಾರ್ಗದರ್ಶನದಲ್ಲಿ ಪ್ರಸ್ತುತ ವಿದ್ಯಾ ಸಂಸ್ಥೆಯ ಮುಖ್ಯೋಪಾಧ್ಯಾಯರಾದ ಸಿಸ್ಟರ್ ಜಾನೆಟ್ ಅವರ ಸತತ ಪ್ರಯತ್ನದಿಂದ ಸಾಧ್ಯವಾಯಿತು. ಕಾರ್ಯಕ್ರಮದಲ್ಲಿ ಕುಶಾಲನಗರ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ



ಶ್ರೀ ಕೆ.ಪಿ. ರಾಜ ಮುಂತಾದವರು ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಜಿಲ್ಲಾ ಸಹಾಯಕ ಗೈಡ್ ಆಯುಕ್ತರಾದ ಸುಲೋಚನ, ಜಿಲ್ಲಾ ಸಂಘಟಕರಾದ ಶ್ರೀಮತಿ ಯು.ಸಿ. ದಮಯಂತಿ ಸಂಘಟಿಸಿದರು.

* ಸ್ಕೌಟ್ ಆಯುಕ್ತರಾದ ಶ್ರೀ ಜಿಮ್ಮಿ ಸಿಕ್ವೇರಾ ಇವರ ನೇತೃತ್ವದಲ್ಲಿ ಗುಡ್ ಷಪರ್ಡ್ ವಿದ್ಯಾ ಸಂಸ್ಥೆ ಅಮ್ಮತ್ತಿಯಲ್ಲಿ ಸೆಪ್ಟೆಂಬರ್ 07 ರಂದು ವಿರಾಜಪೇಟೆ ಸ್ಥಳೀಯ ಗೀತಗಾಯನ ಸ್ಪರ್ಧೆ ನಡೆಯಿತು. ಇದರಲ್ಲಿ ತೀರ್ಪುಗಾರರಾಗಿ ಶ್ರೀಮತಿ ಅಲಿಮ, ಎಲ್.ಟಿ., ಜಿಲ್ಲಾ ಕಾರ್ಯದರ್ಶಿ ಶ್ರೀಮತಿ ವಸಂತಿರವರು ಭಾಗವಹಿಸಿದ್ದರು ಮತ್ತು ವಿವಿಧ ಶಾಲೆಗಳಿಂದ ಆಗಮಿಸಿದ್ದ ಸ್ಕೌಟ್ಸ್–ಗೈಡ್ಸ್‌ಗಳು ಪಾಲ್ಗೊಂಡರು.

* ಆಗಸ್ಟ್ 31 ರಂದು ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯ ವತಿಯಿಂದ ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪೊನ್ನಂಪೇಟೆ ತಾಲ್ಲೂಕು ಅಪ್ಪಚ್ಚು ಕವಿ ವಿದ್ಯಾಲಯ ರಜತ ವೈಭವ ಕಲಾಮಂದಿರದ ಆಯೋಜಿತ ಗೀತ ಗಾಯನ ಸ್ಪರ್ಧೆಗೆ ಹೂವಿನ ಗಿಡಕ್ಕೆ ನೀರೆರೆಯುವ ಮೂಲಕ ಚಾಲನೆ ದೊರೆಯಿತು. ಈ ಸಂದರ್ಭ ಸ್ಕೌಟ್ಸ್ ಮತ್ತು ಗೈಡ್ಸ್ ಪೊನ್ನಂಪೇಟೆ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕಾಳಿಮಾಡ ಮೋಟಯ್ಯ, ಶ್ರೀ ಕಾಟಿಮಾಡ ಜಿಮ್ಮಿ ಅಣ್ಣಯ್ಯ, ಶ್ರೀ ಗಣಪತಿ ಸೋಮಯ್ಯ, ಶ್ರೀ ಬೋಡಂಗಡ ಜಗದೀಶ್ ತಿಮ್ಮಯ್ಯ, ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಕೆ.ಕೆ. ಮುತ್ತಮ್ಮ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಇದ್ದರು.



* ಸೆಪ್ಟೆಂಬರ್ 13ರಂದು ದೇಶಭಕ್ತಿ ಗೀತ ಗಾಯನ ಸ್ಪರ್ಧೆಯನ್ನು ಏರ್ಪಡಿಸಲಾಯಿತು. ಕೆ.ಪಿ.ಎಸ್.ನ ಪ್ರಾಂಶುಪಾಲ ಶ್ರೀ ಶಿವಣ್ಣ ಎಂ.ಎಸ್. ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಶುಭ ಹಾರೈಸಿದರು. ತೀರ್ಪುಗಾರಿಕೆಯನ್ನು ಕಲಾವಿದರಾದ ಶ್ರೀಮತಿ ಕಡ್ಲೇರ ತುಳಸಿ ಮೋಹನ್ ಮತ್ತು ಸಿ.ಆರ್.ಪಿ. ಶ್ರೀಮತಿ ಪವಿತ್ರ ಎಚ್.ಕೆ.ರವರು ನಿಭಾಯಿಸಿದರು. ದ್ವಿತೀಯ ಸೋಪಾನ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಂಕೂರು ಶಾಲೆಯ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರ ನೀಡಲಾಯಿತು.



## ಕೊಪ್ಪಳ

* ಸೆಪ್ಟೆಂಬರ್ 06 ರಂದು ಸ್ಥಳೀಯ ಸಂಸ್ಥೆ ಯಲಬುರ್ಗಾದ ವತಿಯಿಂದ ಕಿತ್ತೂರ ರಾಣಿ ಚನ್ನಮ್ಮ ವಸತಿ ಶಾಲೆ ಹೊಸಳ್ಳಿಯಲ್ಲಿ 2025–26ನೇ ಸಾಲಿನ ಸ್ಕೌಟ್ ಮತ್ತು ಗೈಡ್ಸ್ ಶಿಕ್ಷಕರ ಸಮಾವೇಶ ಮತ್ತು ವಿದ್ಯಾರ್ಥಿಗಳಿಗೆ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನ ಏರ್ಪಡಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ವಿ.ಬಿ. ಹನಮಶೆಟ್ಟಿ.



ಪ್ರಾಚಾರ್ಯರು ವಹಿಸಿದ್ದರು ಮುಖ್ಯ ಅತಿಥಿಗಳಾಗಿ ಶ್ರೀ ವೀರನಗೌಡ ಪೊಲೀಸ್ ಪಾಟೀಲ್, ರಾಜ್ಯ ಪ್ರತಿನಿಧಿ (ಸ್ಕೌ), ನಿರ್ಣಾಯಕರಾಗಿ ಶ್ರೀ ಶಾಂತವೀರಯ್ಯ ಬಿ., ಶ್ರೀ ಅನ್ವರ್ ಹುಸೇನ್. ಕು॥ ಗೀತಾ ಭಾಗವಹಿಸಿದ್ದರು. ಶ್ರೀ ವೀರಪ್ಪ ಗಾಣಿಗೇರ್, ತಾಲೂಕ ಕಾರ್ಯದರ್ಶಿಗಳು ಕಾರ್ಯಕ್ರಮ ನಿರೂಪಣೆ ಮಾಡಿದರು. ಶ್ರೀ ಬಾಳಪ್ಪ ಮುಗಳಿ ವಂದನಾರ್ಪಣೆ ಮಾಡಿದರು. ಶಿಕ್ಷಕರ ದಿನಾಚರಣೆ ನಿಮಿತ್ಯ ಸರ್ವ ಶಿಕ್ಷಕರಿಗೆ ಸ್ಕೌಟ್ಸ್–ಗೈಡ್ಸ್, ಕಬ್–ಬುಲ್‌ಬುಲ್ಸ್‌ಗಳು ಪುಷ್ಪ ಮತ್ತು ಹೂಗುಚ್ಛಗಳನ್ನು ನೀಡಿ ಶಿಕ್ಷಕರ ದಿನಾಚರಣೆಯ ಶುಭಾಶಯಗಳನ್ನು ಕೋರಲಾಯಿತು.

* ಸೆಪ್ಟೆಂಬರ್ 17 ರಂದು ಬೆಳಿಗ್ಗೆ 7.30 ಘಂಟೆಗೆ ಕಲ್ಯಾಣ ಕರ್ನಾಟಕ ಉತ್ಸವದ ಪ್ರಯುಕ್ತ ಜಿಲ್ಲಾ ಕಚೇರಿ ಶಾಸಕರ ಶಾಲೆಯ ಆವರಣದಲ್ಲಿ ಧ್ವಜಾರೋಹಣ ನೆರವೇರಿಸಲಾಯಿತು ನಂತರ 08 ಘಂಟೆಗೆ ಜಿಲ್ಲಾಧಿಕಾರಿಗಳ ಕಚೇರಿ ಜಿಲ್ಲಾಢಳಿತ ಭವನ ಇಲ್ಲಿ ಮಾನ್ಯ ಶ್ರೀ ಸುರೇಶ್ ಇಟ್ನಾಳ, ಜಿಲ್ಲಾಧಿಕಾರಿಗಳು ಧ್ವಜಾರೋಣ ನೆರವೇರಿಸಿ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಕುರಿತು ಮಾತನಾಡಿದರು.



ನಂತರ 09 ಘಂಟೆಗೆ ಜಿಲ್ಲಾ ಕ್ರೀಡಾಂಗಣದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಮಾನ್ಯ ಶ್ರೀ ಶಿವರಾಜ್ ತಂಗಡಗಿ ಧ್ವಜಾರೋಹಣ ಕಾರ್ಯಕ್ರಮವನ್ನು ನೇರವೇರಿಸಿದರು ಹಾಗೂ ಭಾರತ್ ಸ್ಕೌಟ್ಸ್–ಗೈಡ್ಸ್‌ನ 04 ತಂಡಗಳು ಪಥಸಂಚಲನದಲ್ಲಿ ಭಾಗವಹಿಸಿದವು. ಭಾಗವಹಿಸಿದ ತಂಡಗಳಿಗೆ ಜಿಲ್ಲಾಡಳಿತದಿಂದ ಪಾರಿತೋಷಕ ಹಾಗೂ ಪ್ರಮಾಣ ಪತ್ರ ನೀಡಲಾಯಿತು. ಶ್ರೀ ರಾಘವೇಂದ್ರ ಹಿಟ್ನಾಳ್, ಶಾಸಕರು, ಶ್ರೀ ರಾಜಶೇಖರ ಹಿಟ್ನಾಳ, ಸಂಸದರು, ಶ್ರೀಮತಿ ಹೇಮಲತಾ ನಾಯಕ್, ವಿಧಾನ ಪರಿಷತ್ತು ಸದಸ್ಯರಾದ ಶ್ರೀ ಸುರೇಶ್ ಇಟ್ನಾಳ, ಜಿಲ್ಲಾಧಿಕಾರಿಗಳು ಶ್ರೀ ವರ್ಣಿತ್ ನೇಗಿ, ಸಿಇಓ ಜಿಲ್ಲಾ ಪಂಚಾಯತ್ ಶ್ರೀ ರಾಮ ಅರಸಿದ್ದಿ, ಎಸ್.ಪಿ. ಕೊಪ್ಪಳ ಹಾಗೂ ಶಿಕ್ಷಣ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಿವಿಧ ಶಾಲೆಯ ಸ್ಕೌಟ್ಸ್–ಗೈಡ್ಸ್‌ಗಳು ಶಿಕ್ಷಕರು ಪದಾಧಿಕಾರಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

* ಸೆಪ್ಟೆಂಬರ್ 17 ರಂದು ಕೊಪ್ಪಳ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆಗಳ ಕಾರ್ಯದರ್ಶಿಗಳ ಜಿಲ್ಲಾ ಸಭೆಯನ್ನು ಜರುಗಿಸಲಾಯಿತು. ಸಭೆಯಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯ, ರಾಜ್ಯ ಮುಖ್ಯ ಆಯುಕ್ತರು ಜಿಲ್ಲೆಯ ಸಮಗ್ರ ಅಭಿವೃದ್ಧಿ ಚಟುವಟಿಕೆಗಳನ್ನು ಪರಿಶಿಲಿಸಿ ಸಲಹೆಗಳನ್ನು ನೀಡಿದರು, ಸಂದರ್ಭದಲ್ಲಿ ಮಾನ್ಯ ಶ್ರೀ ಬಸವರಾಜ ರಾಯರೆಡ್ಡಿ, ಯಲಬುರ್ಗಾ ಶಾಸಕರು ಹಾಗೂ ಮುಖ್ಯಮಂತ್ರಿಗಳ ಆರ್ಥಿಕ ಸಲಹೆಗಾರರು ಸಹ ಆಗಮಿಸಿ ಸ್ಕೌಟ್ಸ್–ಗೈಡ್ಸ್ ಚಟುವಟಿಕೆಗಳಿಗೆ ಇನ್ನು ಹೆಚ್ಚಿನ ಸಹಕಾರ ಮತ್ತು ಅನುದಾನ ನೀಡುತ್ತೇವೆ ಎಂದು ಹೇಳಿದರು. ನಂತರ ರಾಜ್ಯ ಸಂಘಟನಾ ಆಯುಕ್ತರು (ಗೈ) ಶ್ರೀಮತಿ ಮಂಜುಳಾರವರು ರಾಜ್ಯ ಮಟ್ಟದ ಶಿಬಿರ ತರಬೇತಿ ಕಾರ್ಯಕ್ರಮ ಕುರಿತು ಮತ್ತು ನಿಯೋಜನೆ ಕುರಿತು ಮಾತನಾಡಿ ಸಲಹೆಗಳನ್ನು ನೀಡಿದರು, ಶ್ರೀಮತಿ ಮಲ್ಲೇಶ್ವರಿ ಜೂಜಾರೆ, ಕಲ್ಯಾಣ ಕರ್ನಾಟಕ ಉಸ್ತುವಾರಿಗಳು ಜಿಲ್ಲಾ ಸಂಸ್ಥೆ ಚಟುವಟಿಕೆಗಳು ತರಬೇತಿ ಕುರಿತು ಮಾತನಾಡಿದರು,



ಶ್ರೀಮತಿ ಅರುಣಾ ವಸ್ತ್ರದ, ಜಿಲ್ಲಾ ಆಯುಕ್ತರು, ಗೈಡ್ಸ್ ಇವರು ಉಪಸ್ಥಿತರಿದ್ದರು. ಶ್ರೀ ಹೆಚ್.ಎಂ. ಸಿದ್ರಾಮಸ್ವಾಮಿ, ರಾಜ್ಯ ಉಪಾಧ್ಯಕ್ಷರು ಹಾಗೂ ಜಿಲ್ಲಾ ಮುಖ್ಯ ಆಯುಕ್ತರು ಮಾನ್ಯರು ಸಮಗ್ರ ಚಟುವಟಿಕೆಗಳ ಕುರಿತು ಮಾತನಾಡಿದರು.

* ಸೆಪ್ಟೆಂಬರ್ 19 ರಂದು ರಾಜ್ಯ ಮುಖ್ಯ ಆಯುಕ್ತರ ಹುಟ್ಟು ಹಬ್ಬದ ಪ್ರಯುಕ್ತ ಶುಭಾಶಯಗಳನ್ನು ಕೋರಲಾಯಿತು, ಈ ಸಂದರ್ಭದಲ್ಲಿ ಜಿಲ್ಲಾ ಸಂಸ್ಥೆ ಸರ್ವ ಪದಾಧಿಕಾರಿಗಳು ಹಾಗೂ ಸ್ಥಳೀಯ ಸಂಸ್ಥೆಯ ಸರ್ವ ಪದಾಧಿಕಾರಿಗಳು ಮತ್ತು ರೋವರ್ಸ್-ರೇಂಜರ್ಸ್‌ಗಳು ಶಿಕ್ಷಕರು ಉಪಸ್ಥಿತರಿದ್ದರು, ಕಾರ್ಯಕ್ರಮಕ್ಕೆ ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಸರ್ವರನ್ನು ಸ್ವಾಗತಿಸಿದರು.

* ಸೆಪ್ಟೆಂಬರ್ 20 ರಂದು ಗಂಗಾವತಿ ತಾಲೂಕು ಮಟ್ಟದ ಸ್ಕೌಟ್ಸ್-ಗೈಡ್ಸ್ ಶಿಕ್ಷಕರ ಸಮಾವೇಶ ಮತ್ತು ವಿದ್ಯಾರ್ಥಿಗಳ ದೇಶ ಭಕ್ತಿ ಗೀತಗಾಯನ ಸ್ಪರ್ಧೆ ಕಾರ್ಯಕ್ರಮವನ್ನು ತಾಲೂಕ ಸ್ಕೌಟ್ಸ್ ಭವನ ಗಂಗಾವತಿಯಲ್ಲಿ ಏರ್ಪಡಿಸಲಾಯಿತು, ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಸೈಯದ್ ಮೊಹಮ್ಮದ್ ಗುತ್ತಿ ಕಾರ್ಯಕಾರಿ ಸಮಿತಿ ಅಧ್ಯಕ್ಷರು, ವಹಿಸಿದ್ದರು, ಮುಖ್ಯ ಅತಿಥಿಗಳಾಗಿ ಶ್ರೀ ಯರಣ್ಣ, ಹಿರಿಯ ತರಬೇತಿದಾರರು, ಶ್ರೀ ಹುಸೇನಸಾಬ ಮಕಾಂದಾರ, ತಾಲೂಕು ಕಾರ್ಯದರ್ಶಿಗಳು ಶ್ರೀಮತಿ ಫರೀದಾ ಅಕ್ತರ್‌ರವರು ಶ್ರೀ ಶರೀಫ್ ಹತ್ತಿಮತ್ತೂರ್ ಎ.ಎಸ್.ಓ.ಸಿ.ರವರು ಉಪಸ್ಥಿತರಿದ್ದರು. ಕಾರ್ಯಕ್ರಮದ ಬಗ್ಗೆ ಪ್ರಾಸ್ತಾವಿಕವಾಗಿ ಶ್ರೀ ಶರೀಫ್ ಹತ್ತಿಮತ್ತೂರ್ ಇವರು ಮಾತನಾಡಿದರು, ನಂತರ ಶ್ರೀ ಯರಣ್ಣರವರು ಚಟುವಟಿಕೆಗಳನ್ನು ಕುರಿತು ಮಾತನಾಡಿ ಶುಭ ಹಾರೈಸಿದರು, ಕೂನೆಯಲ್ಲಿ ಶ್ರೀ ಸೈಯದ್ ಮೊಹಮ್ಮದ್ ಗುತ್ತಿ ಅಧ್ಯಕ್ಷತೆಯ ಮಾತುಗಳು ಆಡಿದರು. ನಂತರ ವಿದ್ಯಾರ್ಥಿಗಳು ದೇಶಭಕ್ತಿ ಗೀತೆಗಳನ್ನು ಹಾಡಿದರು ಶ್ರೀ ಹುಸೇನಸಾಬ ಮಕಾಂದಾರ ತಾಲೂಕು ಕಾರ್ಯದರ್ಶಿಗಳು ಇವರು ಕಾರ್ಯಕ್ರಮ ನಿರೂಪಿಸಿದರು, ಕೂನೆಯಲ್ಲಿ ಶ್ರೀಮತಿ ಪರೀದಾ ಮೇಡಂ ಇವರು ಸರ್ವರಿಗೂ ವಂದನಾರ್ಪಣೆ ಮಾಡಿದರು.



* ಆಗಸ್ಟ್ 30 ರಂದು ಕೊಪ್ಪಳ ತಾಲೂಕು ಮಟ್ಟದ ಸ್ಕೌಟ್ಸ್-ಗೈಡ್ಸ್ ಶಿಕ್ಷಕರ ಸಮಾವೇಶ ಮತ್ತು ವಿದ್ಯಾರ್ಥಿಗಳ ಗೀತಗಾಯನ ಸ್ಪರ್ಧೆ ಕಾರ್ಯಕ್ರಮವನ್ನು. ಶಾಸಕರ ಮಾದರಿಯ ಶಾಲೆ ಕೊಪ್ಪಳ ಇಲ್ಲಿ ಜರುಗಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಅಂದಪ್ಪ ಭೂಳರೆಡ್ಡಿ, ಶಾಲೆಯ ಮುಖ್ಯ ಗುರುಗಳು ವಹಿಸಿದ್ದರು. ಕಾರ್ಯಕ್ರಮದ ಕುರಿತು ಪ್ರಾಸ್ತಾವಿಕವಾಗಿ ಶ್ರೀ ಮಾರುತಿ ಅರೇರ್, ಜಿಲ್ಲಾ ಕಾರ್ಯದರ್ಶಿಗಳು ಮಾತನಾಡಿದರು. ಗೀತಗಾಯನ ಸ್ಪರ್ಧೆ ನಿರ್ಣಾಯಕರಾದ ಶ್ರೀಮತಿ ಬಸಮ್ಮ ಗುಜ್ಜಲ್, ಸಂಗಿತ ಶಿಕ್ಷಕರು, ಇವರು ಕಾರ್ಯಕ್ರಮ ಕುರಿತು ಮಾತನಾಡಿದರು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ ಶ್ರೀ ಅಂದಪ್ಪ ಭೂಳರೆಡ್ಡಿರವರು ಮಾತನಾಡಿ ಶುಭ ಕೋರಿದರು. ಶ್ರೀ ಮಲ್ಲಪ್ಪ ಗುಡದನ್ನವರ್, ತಾಲೂಕು ಕಾರ್ಯದರ್ಶಿಗಳು ಇವರು ಕಾರ್ಯಕ್ರಮ ನಿರೂಪಣೆ ಮಾಡಿದರು ಕೂನೆಯಲ್ಲಿ ಶ್ರೀ ಶರೀಫ್ ಹತ್ತಿಮತ್ತೂರ್ ಎ.ಎಸ್.ಓ.ಸಿ.ರವರು ಸರ್ವರಿಗೆ ವಂದನಾರ್ಪಣೆ ಮಾಡಿದರು.



## ಮಂಗಳೂರು (ದಕ್ಷಿಣ ಕನ್ನಡ)

* ಜಿಲ್ಲಾ ಸಂಸ್ಥೆಯಲ್ಲಿ ನಡೆದ 79ನೇ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಜಿಲ್ಲಾ ಸಂಸ್ಥೆಯ ಉಪಾಧ್ಯಕ್ಷರು ಹಾಗೂ ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್‌ರಾವ್‌ರವರು ಧ್ವಜಾರೋಹಣ ಗೈದರು. ಈ ಸಂದರ್ಭದಲ್ಲಿ ಮಂಗಳೂರು ಉತ್ತರ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶ್ರೀನಿವಾಸ್ ಚಂದ್ರಶೇಖರ್ ಕಿಣಿ, ಜಿಲ್ಲಾ ಸಂಸ್ಥೆ ಹಾಗೂ ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಶ್ರೀನಿವಾಸ್ ಪೂಜಾರಿ ಮುಂತಾದವರು.



* ಆಗಸ್ಟ್ 22 ರಂದು ಬೆಥೆನಿ ವಿದ್ಯಾ ಸಂಸ್ಥೆಯಲ್ಲಿ ರೋವರ್ಸ್-ರೇಂಜರ್ಸ್‌ಗಳಿಗೆ ಪುನಶ್ಚೇತನಾ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಜಾರ್ಜ್ ಟಿ.ಎಸ್. ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ಕಾರ್ಯದರ್ಶಿ ಶ್ರೀ ಪ್ರತಿಮ್ ಕುಮಾರ್ ಕೆ.ಎಸ್. ಭಾಗವಹಿಸಿದ್ದರು. ಸಂಸ್ಥೆಯ ಮುಖ್ಯ ಗುರುಗಳಾದ ಶ್ರೀ ಥಾಮಸ್ ಎ.ಕೆ. ಮತ್ತು ರೇಂಜರ್ ಲೀಡರ್ ಜೆನ್ನಿರವರು ಉಪಸ್ಥಿತರಿದ್ದರು. ರೋವರ್ ಸ್ಕೌಟ್ ಲೀಡರ್ ಶ್ರೀ ಪುನೀತ್ ಧನ್ಯವಾದ ಸಮರ್ಪಿಸಿದರು.



* ಆಗಸ್ಟ್ 23 ರಂದು ವಿಟ್ಲ ಸ್ಥಳೀಯ ಸಂಸ್ಥೆಯ ವತಿಯಿಂದ ದೇಶಭಕ್ತಿ ಗೀತಗಾಯನ ಮತ್ತು ಜನಪದ ಗೀತಾ ಗಾಯನ ಸ್ಪರ್ಧೆಯು ಸಂತರೀಟಾ ಆಂಗ್ಲ ಮಾಧ್ಯಮ ಶಾಲೆಯಲ್ಲಿ ನಡೆಯಿತು. ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಸುದರ್ಶನ್ ಪಡಿಯಾರ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಂತರೀಟಾ ಆಂಗ್ಲ ಮಾಧ್ಯಮ ಶಾಲೆಯ ಸಹ ಶಿಕ್ಷಕರಾದ ಶ್ರೀ ಸಚಿನ್ ಭಾಗವಹಿಸಿದ್ದರು.



* ಸ್ಥಳೀಯ ಸಂಸ್ಥೆ ಬೆಳ್ತಂಗಡಿ ವತಿಯಿಂದ ಕಬ್-ಬುಲ್‌ಬುಲ್, ಸ್ಕೌಟ್-ಗೈಡ್, ರೋವರ್-ರೇಂಜರ್ಸ್‌ಗಳ ಗೀತಗಾಯನ ಸ್ಪರ್ಧೆಯು ವಾಣಿ ವಿದ್ಯಾ ಸಂಸ್ಥೆಯಲ್ಲಿ ನಡೆಯಿತು. ಕಾರ್ಯಕ್ರಮದ ಉದ್ಘಾಟನೆಯನ್ನು ವಾಣಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ವಿಷ್ಣುಪ್ರಕಾಶ್ ಎಂ. ನಡೆಸಿದರು. ವೇದಿಕೆಯಲ್ಲಿ ಪ್ರಾಥಮಿಕ ವಿಭಾಗದ ಮುಖ್ಯ ಶಿಕ್ಷಕರಾದ ಶ್ರೀಮತಿ ಸುಹಾಸಿನಿ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀಮತಿ ಪ್ರಮೀಳ ಉಪಸ್ಥಿತರಿದ್ದರು. ಕೋಶಾಧಿಕಾರಿ ಶ್ರೀ ಬೆಳ್ಳಿಯಪ್ಪ.ಕೆ ಕಾರ್ಯಕ್ರಮ ನಿರೂಪಿಸಿ ಧನ್ಯವಾದವಿತ್ತರು.

* ಸೆಪ್ಟೆಂಬರ್ 04 ರಂದು ಮಂಗಳೂರು ಮಿಲಾಗ್ರಿಸ್ ಕಾಲೇಜಿನಲ್ಲಿ ರೋವರ್ಸ್–ರೇಂಜರ್ಸ್‌ಗಳಿಗೆ ಒಂದು ದಿನದ ಮಾಹಿತಿ ಶಿಬಿರ ನಡೆಯಿತು. ಶಿಬಿರದಲ್ಲಿ ಮಿಲಾಗ್ರಿಸ್ ಕಾಲೇಜಿನ ಪ್ರಾಂಶುಪಾಲರಾದ ರೆವೆರೆಂಡ್ ಡಾ. ಆಲ್ವಿನ್ ಸೆರಾವೊ ಹಾಗೂ ಕಾಲೇಜಿನ ಈವೆಂಟ್ ಸಂಯೋಜಕರಾಗಿರುವ ಲೆನಿಶಾ ಪೆರಿಸ್ ಉಪಸ್ಥಿತರಿದ್ದರು. ಜಿಲ್ಲಾ ಸಂಸ್ಥೆಯ ಕಾರ್ಯದರ್ಶಿ ಶ್ರೀ ಪ್ರತಿಮ್‌ಕುಮಾರ್ ಕೆ.ಎಸ್. ರೋವರ್ಸ್–ರೇಂಜರ್ಸ್‌ಗಳಿಗೆ ಮಾಹಿತಿ ನೀಡಿದರು.

* ಸೆಪ್ಟೆಂಬರ್ 06 ರಂದು ಮಂಗಳೂರು ದಕ್ಷಿಣ ಸ್ಥಳೀಯ ಸಂಸ್ಥೆಯ ಕಬ್–ಬುಲ್‌ಬುಲ್, ಸ್ಕೌಟ್–ಗೈಡ್, ರೋವರ್ಸ್–ರೇಂಜರ್ಸ್ ವಿಭಾಗದ ಗೀತ ಗಾಯನ ಸ್ಪರ್ಧೆಯು ಲೂರ್ಡ್ಸ್ ಸೆಂಟ್ರಲ್ ಶಾಲೆಯಲ್ಲಿ ನಡೆಯಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ವಸಂತ್‌ರಾವ್ ವಹಿಸಿದ್ದರು. ಲೂರ್ಡ್ಸ್ ಶಾಲೆಯ ಪ್ರಾಂಶುಪಾಲರಾದ ಫಾದರ್ ಜಾನ್ಸನ್ ಎಲ್. ಸಿಕ್ವೆರ ಮುಖ್ಯ ಅಥಿತಿಗಳಾಗಿ ಭಾಗವಹಿಸಿದ್ದರು.




## ಮಧುಗಿರಿ

* ಆಗಸ್ಟ್ 20 ರಂದು ಮಧುಗಿರಿ ಎಂಜಿಎಂ ಶಾಲೆಯಲ್ಲಿ ಕಬ್–ಬುಲ್‌ಬುಲ್ ಹಾಗೂ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಂದ ಶ್ರೀಕೃಷ್ಣ ಜನ್ಮಾಷ್ಟಮಿಯಂದು ಮಕ್ಕಳು ಕೃಷ್ಣ ಮತ್ತು ರಾಧೆಯ ಪಾತ್ರಗಳನ್ನು ಮಾಡಿ ನೃತ್ಯ ಮತ್ತು ಇತರೆ ಚಟುವಟಿಕೆಗಳನ್ನು ಪ್ರಸ್ತುತಪಡಿಸಿದ್ದರು.



* ಆಗಸ್ಟ್ 21 ರಂದು ಚಿರಾಗ್ ಪಬ್ಲಿಕ್ ಸ್ಕೂಲ್‌ನಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಕಬ್–ಬುಲ್‌ಬುಲ್ ಹಾಗೂ ಎಲ್.ಕೆ.ಜಿ., ಯು.ಕೆ.ಜಿ. ವಿದ್ಯಾರ್ಥಿಗಳೊಂದಿಗೆ ಆಚರಿಸಲಾಯಿತು.

* ಆಗಸ್ಟ್ 22 ರಂದು ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಭಜ್ಜನ ಹಳ್ಳಿಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಮಕ್ಕಳೊಂದಿಗೆ ಆಚರಿಸಲಾಯಿತು.



* ಆಗಸ್ಟ್ 23 ರಂದು ಮಧುಗಿರಿ ಸ್ಥಳೀಯ ಸಂಸ್ಥೆ ವತಿಯಿಂದ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ ದ್ವಿತೀಯ ಸೋಪಾನ ಪರೀಕ್ಷೆಯನ್ನು ನಡೆಸಲಾಯಿತು.

* ಆಗಸ್ಟ್ 25 ರಂದು ರಂದು ಗಣೇಶ ಚತುರ್ಥಿಯ ಅಂಗವಾಗಿ ವಿದ್ಯಾರ್ಥಿಗಳು ಪರಿಸರ ಗಣೇಶನನ್ನು ಮಾಡಿ ಪೂಜಿಸಿ ಪ್ರದರ್ಶಿಸಿದರು.

* ಆಗಸ್ಟ್ 27 ರಂದು ಗಣೇಶ ಚತುರ್ಥಿಯ ಅಂಗವಾಗಿ ಪ್ರೆಸಿಡೆನ್ಸಿ ಪಬ್ಲಿಕ್ ಶಾಲೆ ವಿದ್ಯಾರ್ಥಿಗಳು ಪರಿಸರ ಗಣೇಶನನ್ನು ಮಾಡಿ ಪೂಜಿಸಿ ಎಲ್ಲರಲ್ಲಿ ಪರಿಸರ ಕಾಳಜಿಯನ್ನು ಮೂಡಿಸಿದರು.

## ಮೈಸೂರು

* ಆಗಸ್ಟ್ 18 ರಂದು ಮೈಸೂರು ಜಿಲ್ಲೆ ಟಿ. ನರಸೀಪುರ ತಾಲೂಕಿನ ಸರ್ಕಾರಿ ಪದವಿ ಪೂರ್ವ ಕಾಲೇಜಿನಲ್ಲಿ ರೋವರ್ ಮತ್ತು ರೇಂಜರ್ ಘಟಕಗಳ ಉಧ್ಘಾಟನೆಯನ್ನು ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಯವರು ನೆರವೇರಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಲಿಂಗರಾಜು ಡಿ.ಸಿ.ರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ಸುರೇಶ್ ಕುಮಾರ್, ಜಿಲ್ಲಾ ರೋವರ್ ಆಯುಕ್ತರು, ಶ್ರೀ ರಾಮಪ್ರಸಾದ್, ಜಿಲ್ಲಾ ಸಂಘಟಕರು, ಶ್ರೀ ಅಜಯ್ ಕುಮಾರ್ ಜೈನ್ ಜಿಲ್ಲಾ ಆಯುಕ್ತರು (ವ.ಸಂ.) ಶ್ರೀ ನಾಗರಾಜು, ತಿ. ನರಸೀಪುರ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಭಾಗವಹಿಸಿದ್ದರು.



* ಸೆಪ್ಟೆಂಬರ್ 08 ರಂದು ಹುಣಸೂರಿನ ಕಕ್ರೈಸ್ಟ್ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ದಳಗಳ ಉದ್ಘಾಟನೆಯನ್ನು ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಯವರು ನೆರವೇರಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಮ್ ಪ್ರಸಾದ್, ಜಿಲ್ಲಾ ಸಂಘಟಕರು, ಶ್ರೀ ಅಜಯ್ ಕುಮಾರ್ ಜೈನ್ ಜಿಲ್ಲಾ ಆಯುಕ್ತರು (ವ.ಸಂ.) ಶ್ರೀ ಜಗದೀಶ್ ಹುಣಸೂರು ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಭಾಗವಹಿಸಿದ್ದರು.



ಆಗಸ್ಟ್ 24 ರಂದು ಜಿಲ್ಲಾ ಸಂಸ್ಥೆಯಲ್ಲಿ ಪರಿಸರ ಗಣಪತಿಯನ್ನು ಮಾಡಲಾಯಿತು. ಶ್ರೀ ಪಿ. ವಿಶ್ವನಾಥ್ ಜಿಲ್ಲಾ ಮುಖ್ಯ ಆಯುಕ್ತರು, ಕಾರ್ಯಕ್ರಮಕ್ಕೆ ಚಾಲನೆ ನೀಡಿದರು, ಶ್ರೀ ಗುಂಡಪ್ಪ ಗೌಡ, ಅಧ್ಯಕ್ಷರು, ವಿದ್ಯಾವರ್ಧಕ ಸಂಘ ರವರು ಉಪಸ್ಥಿತರಿದ್ದರು. ಶ್ರೀ ರಾಮಪ್ರಸಾದ್ ಜಿಲ್ಲಾ ಸಂಘಟಕರು ಮತ್ತು ಶ್ರೀ ಅಜಯ್ ಕುಮಾರ್ ಜೈನ್ ಜಿಲ್ಲಾ ಆಯುಕ್ತರು (ವ.ಸಂ.) ರವರು ಮಕ್ಕಳಿಗೆ ಗಣಪತಿಯನ್ನು ಮಾಡುವ ಬಗ್ಗೆ ತಿಳಿಸಿಕೊಟ್ಟರು. 80 ಮಕ್ಕಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.



ಆಗಸ್ಟ್ 29 ರಂದು ಮೈಸೂರು ಜಿಲ್ಲಾ ಮಟ್ಟದ ಪ್ರಥಮ ದರ್ಜೆ ಕಾಲೇಜುಗಳ ರೋವರ್ ಮತ್ತು ರೇಂಜರ್ ಘಟಕಗಳ ನಿಯೋಜಿತ ಉಪನ್ಯಾಸಕರುಗಳಿಗೆ ಒಂದು ದಿನದ ಪ್ರಾರಂಬಿಕ ಶಿಬಿರ ನಡೆಯಿತು. 30 ಮಂದಿ ಉಪನ್ಯಾಸಕರುಗಳು ಈ ಪ್ರಾರಂಬಿಕ ಶಿಬಿರದಲ್ಲಿ ಭಾಗವಹಿಸಿದ್ದರು. ರೋವರ್ ವಿಭಾಗಕ್ಕೆ ಶ್ರೀ ರಾಜೇಶ್ ಅವಲಕ್ಕಿ, ಎಲ್.ಟಿ.(ಆರ್) ಮತ್ತು ರೇಂಜರ್ ವಿಭಾಗಕ್ಕೆ ಶ್ರೀಮತಿ ಲತಾ ಮಂಜುನಾಥ್ ರವರು ನಾಯಕರುಗಳಾಗಿದ್ದರು. ಶ್ರೀ ಬಿ.ಕೆ. ಬಸವರಾಜು, ಸಹಾಯಕ ರಾಜ್ಯ ಆಯುಕ್ತರು,



ಶ್ರೀ ಕೆ.ಜಿ. ಗೋಪಾಲಕೃಷ್ಣ ಜಿಲ್ಲಾ ತರಬೇತಿ ಆಯುಕ್ತರು (ಸ್ಕೌಟ್) ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ್ದರು. ಡಾ. ಪ್ರತೀಮಾ ಎಂ.ಡಿ, ಜಂಟಿ ನಿರ್ದೇಶಕರು, ಪ್ರಾದೇಶಿಕ ಕಛೇರಿ, ಕಾಲೇಜು ಶಿಕ್ಷಣ ಇಲಾಖೆ ಇವರು ಶಿಬಿರವನ್ನು ಉಧ್ಘಾಟಿಸಿದರು. ಶ್ರೀ ಪಿ. ವಿಶ್ವನಾಥ್, ಜಿಲ್ಲಾ ಮುಖ್ಯ ಆಯುಕ್ತರು ಅಧ್ಯಕ್ಷತೆ ವಹಿಸಿದ್ದರು. ಮುಕ್ತಾಯ ಸಮಾರಂಭಕ್ಕೆ ಡಾ. ಕೆ.ಬಿ. ಗುರುಮೂರ್ತಿ ಮುಖ್ಯ ಅತಿಥಿಗಾಗಿ ಆಗಮಿಸಿದ್ದರು. ಜಿಲ್ಲಾ ಸಂಸ್ಥೆಯ ಪದಾಧಿಕಾರಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ಶ್ರೀ ಅಬ್ದುಲ್ ಜಮೀಲ್, ಜಿಲ್ಲಾ ಕಾರ್ಯದರ್ಶಿಗಳು ಸ್ವಾಗತ ಕೋರಿದರು. ಶ್ರೀ ಎಂ.ಎನ್. ಸುರೇಶ್ ಕುಮಾರ್, ಜಿಲ್ಲಾ ರೋವರ್ ಆಯುಕ್ತರು ವಂದನಾರ್ಪಣೆ ಮಾಡಿದರು. ಶ್ರೀ ರಾಮಪ್ರಸಾದ್ ಕಾರ್ಯಕ್ರಮದ ನಿರೂಪಣೆ ಮಾಡಿದರು.

* ಸೆಪ್ಟೆಂಬರ್ 06 ರಂದು ಮೈಸೂರು ಜಿಲ್ಲಾ ಸಂಸ್ಥೆಯ ಬೇಡನ್ ಪೊವೆಲ್ ಶಾಲೆಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಯೋಜಿಸಲಾಗಿತ್ತು. ಈ ಸಂದರ್ಭದಲ್ಲಿ ಶಾಲಾ ವತಿಯಿಂದ ಶ್ರೀ ಟಿ.ಎಸ್ ಮೋಹನ್ ಕುಮಾರ್, ALT (S) ಜಿಲ್ಲಾ ಸಹಾಯಕ ಕಾರ್ಯದರ್ಶಿ, ಮುಖ್ಯ ಶಿಕ್ಷಕರು, ಸ.ಹಿ.ಪ್ರಾ. ಶಾಲೆ, ಕೃಷ್ಣಮೂರ್ತಿ ಪುರಂ ಮೈಸೂರು ಹಾಗೂ ಶ್ರೀಮತಿ ಭಾಗ್ಯಲಕ್ಷ್ಮಿ, ಫ್ಲಾಕ್ ಲೀಡರ್ ಬೇಡನ್ ಪೊವೆಲ್ ಶಾಲೆ ಇವರನ್ನು ಸನ್ಮಾನಿಸಲಾಯಿತು.

* ಸೆಪ್ಟೆಂಬರ್ 08 ರಂದು ಮೈಸೂರಿನ ಕೆ.ಎನ್‌ಸಿ ಇನೋವೇಟಿವ್ ಗ್ಲೋಬಲ್ ಶಾಲೆಯಲ್ಲಿ ಸ್ಕೌಟ್ ಮತ್ತು ಗೈಡ್ ದಳಗಳ ಉಧ್ಘಾಟನೆಯನ್ನು, ಶ್ರೀ ಅಬ್ದುಲ್ ಜಮೀಲ್ ಜಿಲ್ಲಾ ಕಾರ್ಯದರ್ಶಿಯವರು ನೆರವೇರಿಸಿದರು. ಶಾಲಾ ಆಡಳಿತ ಮಂಡಳಿಯ ಅಧ್ಯಕ್ಷರಾದ ಶ್ರೀ ಕೆ.ಎನ್ ಚಂದ್ರಶೇಖರ್ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶ್ರೀ ರಾಮಪ್ರಸಾದ್, ಜಿಲ್ಲಾ ಸಂಘಟಕರು, ಶ್ರೀ ಅಜಯ್ ಕುಮಾರ್ ಜೈನ್, ಜಿಲ್ಲಾ ಆಯುಕ್ತರು (ವ.ಸಂ) ಭಾಗವಹಿಸಿದ್ದರು ಶಾಲಾ ಪ್ರಾಂಶುಪಾಲರಾದ ಶ್ರೀ ಜೋಸೆಫ್ ಫ್ರಾಂಕ್‌ರವರು ಉಪಸ್ಥಿತರಿದ್ದರು.



## ರಾಯಚೂರು

* ಆಗಸ್ಟ್ 16 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಾನ್ವಿ ಮತ್ತು ನೇತಾಜಿ ಶಿಕ್ಷಣ ಸಂಸ್ಥೆ ಮಾನ್ವಿ ಇವರುಗಳ ಸಂಯುಕ್ತಾಶ್ರಯದಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್‌ಗಳಿಗೆ ತಾಲೂಕ ಮಟ್ಟದ ದೇಶಭಕ್ತಿ ಗೀತಗಾಯನ



ಸ್ಪರ್ಧೆಯನ್ನು ಶ್ರೀ ಬಿ. ಬಲರಾಮಕೃಷ್ಣ, ಅಧ್ಯಕ್ಷರು ಸ್ಥಳೀಯ ಸಂಸ್ಥೆ ಮಾನ್ವಿ ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಎಮ್. ರಾಮಲಿಂಗಪ್ಪ ಕಾರ್ಯದರ್ಶಿಗಳು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ನರಸಿಂಹಮೂರ್ತಿ ದೇಸಾಯಿ ಜಂಟಿ ಕಾರ್ಯದರ್ಶಿಗಳು, ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ, ಶ್ರೀ ಬಸವರಾಜ ಮುಖ್ಯಗುರುಗಳುರವರು ಆಗಮಿಸಿದ್ದರು.

* ಆಗಸ್ಟ್ 17 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ಇವರುಗಳ ಸಂಯುಕ್ತಾಶ್ರಯದಲ್ಲಿ ಜೆ.ಆರ್.ಎಮ್. ಶಾಲೆ ಮಸ್ಕಿ ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್‌ಗಳ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ನಾಯಕರಾಗಿ ಶ್ರೀ ಶಿವಪ್ಪ ಹಸಮಕಲ್, HWB (S)/ ಕಾರ್ಯದರ್ಶಿಗಳು, ಶ್ರೀಮತಿ ಕಲ್ಪಾಶ್ರೀ, HWB (G) ರವರು ಕಾರ್ಯವನ್ನು ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ, ಶ್ರೀ ಭಾರತಿ ಲೇಡಿ ಸ್ಕೌಟ್ ಮಾಸ್ಟರ್ ಹಾಗೂ ಸ್ಕೌಟ್ಸ್, ಗೈಡ್ಸ್‌ಗಳು ಉಪಸ್ಥಿತರಿದ್ದರು.



* ಆಗಸ್ಟ್ 20 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಲಿಂಗಸುಗೂರು ಇವರುಗಳ ಸಂಯುಕ್ತಾಶ್ರಯದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಲಿಂಗಸಗೂರು ಇಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್ ಹಾಗೂ ರೋವರ್ಸ್-ರೇಂರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷಾ ಶಿಬಿರವನ್ನು ಆಯೋಜನೆ ಮಾಡಲಾಯಿತು. ಶಿಬಿರದ ನಾಯಕರಾಗಿ ಶ್ರೀ ಶಶಿಕಾಂತ್ ದೇಸಾಯಿ, ALT (S)/ ರಾಜ್ಯ ಪರಿಷತ್ ಸದಸ್ಯರು, ಶ್ರೀಮತಿ ಲಕ್ಷ್ಮೀರವರು ಕಾರ್ಯವನ್ನು ನಿರ್ವಹಿಸಿದರು. ಇದೇ ಸಂದರ್ಭದಲ್ಲಿ ಶ್ರೀಮತಿ ಸಂಗೀತಾ ಮಜ್ಜಿಗೆ, ಉಪಾಧ್ಯಕ್ಷರು, ಶ್ರೀ ಟಿ. ಶರಣಪ್ಪ, ಕಾರ್ಯದರ್ಶಿಗಳು, ಡಾ. ಹನುಮಂತಪ್ಪ, ಪ್ರಾಂಶುಪಾಲರು ರವರು ಉಪಸ್ಥಿತರಿದ್ದರು. ಪರೀಕ್ಷೆಯ ಸಹಾಯಕರಾಗಿ ಶ್ರೀ ಮಹೇಶ್, ಖಖಐ, ಸ್ಕೌಟ್ ಮಾಸ್ಟರ್ ಶ್ರೀ ಜಗದೀಶ್, ಶ್ರೀ ಶರಣಪ್ಪ, ಶ್ರೀ ಆದಪ್ಪ, ಶ್ರೀ ವಿನಯರಾಜ್, ಗೈಡ್ ಕ್ಯಾಪ್ಟನ್ ಶ್ರೀಮತಿ ಸುವರ್ಣರವರು ಕಾರ್ಯವನ್ನು ನಿರ್ವಹಿಸಿದರು. ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ ರವರು ಶಿಬಿರವನ್ನು ಸಂಘಟಿಸಿದರು.



* ಆಗಸ್ಟ್ 23 ರಂದು ಜಿಲ್ಲಾ ಸಂಸ್ಥೆ ರಾಯಚೂರು ಹಾಗೂ ಸ್ಥಳೀಯ ಸಂಸ್ಥೆ ಮಸ್ಕಿ ವತಿಯಿಂದ ಲಯನ್ಸ್ ಶಾಲೆ ಮಸ್ಕಿ ಇಲ್ಲಿ ಕಬ್ಸ್, ಬುಲ್‌ಬುಲ್ಸ್, ಸ್ಕೌಟ್ಸ್, ಗೈಡ್ಸ್‌ಗಳಿಗೆ ತಾಲೂಕ ಮಟ್ಟದ ದೇಶಭಕ್ತಿ ಗೀತಗಾಯನ ಸ್ಪರ್ಧೆಯನ್ನು ಶ್ರೀ ಮಲ್ಲಿಕಾರ್ಜುನ ಇತ್ಲಿ, ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಶಿವಪ್ಪ ಹಸಮಕಲ್, ಕಾರ್ಯದರ್ಶಿಗಳು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ, ಶ್ರೀ ಶ್ರೀನಿವಾಸ ಸುಗಂಧಿ ಜಂಟಿ ಕಾರ್ಯದರ್ಶಿಗಳು ರವರು ಆಗಮಿಸಿದ್ದರು.

* ಆಗಸ್ಟ್ 30 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ತಾಲೂಕ ಸ್ಕೌಟ್ ಭವನ ರಾಯಚೂರು ಇಲ್ಲಿ ಕಬ್ಸ್, ಬುಲ್‌ಬುಲ್ಸ್,

ಸ್ಕೌಟ್ಸ್, ಗೈಡ್ಸ್ ದೇಶಭಕ್ತಿ ಗೀತೆ ಹಾಗೂ ರೋವರ್ಸ್-ರೇಂಜರ್ಸ್‌ಗಳಿಗೆ ಜಾನಪದ ಗೀತಗಾಯನ ಸ್ಪರ್ಧೆಯನ್ನು ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಇವರ ಅಧ್ಯಕ್ಷತೆಯಲ್ಲಿ ಆಯೋಜನೆ ಮಾಡಲಾಯಿತು.ಶ್ರೀ ವೆಂಕಟೇಶ ಗಿರಿ, ಸೈಬರ್, ಆರ್ಥಿಕ ಮತ್ತು ಮಾಧಕದ್ರವ್ಯ ಅಪರಾಧ ಪೊಲೀಸ್ ಠಾಣೆ ರಾಯಚೂರು ರವರು ಸಸಿಗೆ ನೀರು ಹಾಕುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಮುಖ್ಯ ಅತಿಥಿಗಳಾಗಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು, ಶ್ರೀ ಪವನ್ ಪಾಟೀಲ್, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು, ಶ್ರೀ ವೆಂಕಟೇಶ, ಶ್ರೀ ವೇಣುಗೋಪಾಲರವರು ಆಗಮಿಸಿದ್ದರು.

* ಸೆಪ್ಟೆಂಬರ್ 04 ರಂದು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ, ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ರವರ ಅಧ್ಯಕ್ಷತೆಯಲ್ಲಿ, ಪದವಿ ಹಾಗೂ ಪದವಿ ಪೂರ್ವ ಕಾಲೇಜುಗಳ ಉಪನ್ಯಾಸಕ-ಉಪನ್ಯಾಸಕರುಗಳಿಗೆ ಜಿಲ್ಲಾ ಮಟ್ಟದ ಒಂದು ದಿನದ ಮಾಹಿತಿ ಕಾರ್ಯಾಗಾರವನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ರಾಯಚೂರು ಇಲ್ಲಿ ಆಯೋಜನೆ ಮಾಡಲಾಯಿತು. ಶ್ರೀ ಪ್ರಾಣೇಶ ಕುಲಕರ್ಣಿ ಜಿಲ್ಲಾ ಆಯುಕ್ತರು (ರೋ) ರವರು ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು(ಸ್ಕೌ) ರವರು ಪ್ರಾಸ್ತಾವಿಕವಾಗಿ ಮಾತನಾಡಿದರು. ನಂತರ ಸಸಿಗೆ ನೀರು ಹಾಕುವ ಮೂಲಕ ಕಾರ್ಯಾಗಾರವನ್ನು ಉದ್ಘಾಟಿಸಿದರು. ಶ್ರೀಮತಿ ಮಲ್ಲೇಶ್ವರಿ ಜುಜಾರೆ, ASOC (ರೇಂಜರಿಂಗ್ ವಿಭಾಗ) ಕಲ್ಯಾಣ ಕರ್ನಾಟಕ ಉಸ್ತುವಾರಿರವರು ರೋವರಿಂಗ್-ರೇಂಜರಿಂಗ್ ಕುರಿತು ಮಾಹಿತಿಯನ್ನು ನೀಡಿದರು. ಅತಿಥಿಗಳಾಗಿ ಶ್ರೀ ಮಲ್ಲಿಕಾರ್ಜುನ ಅಲ್ಲೂರೆ ಜಿಲ್ಲಾ ಖಜಾಂಚಿಗಳು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು, ಶ್ರೀ ಎನ್. ಶೇಖರ್ ಕಾರ್ಯದರ್ಶಿಗಳು ರಾಯಚೂರು, ಶ್ರೀ ಬೀರಪ್ಪ ಶಂಬೋಜಿ ಸಹಾಯಕ ಜಿಲ್ಲಾ ಆಯುಕ್ತರು ಮುಂತಾದವರು ಭಾಗವಹಿಸಿದ್ದರು.

* ಸೆಪ್ಟೆಂಬರ್ 05 ರಂದು ಸಾಂಸ್ಕೃತಿಕ ನಾಯಕ ಬಸವಣ್ಣನವರ ಬಸವ ಸಂಸ್ಕೃತಿ ಅಭಿಯಾನ ರಥವನ್ನು ಜಿಲ್ಲಾ ಸಂಸ್ಥೆ ರಾಯಚೂರು ವತಿಯಿಂದ ರಾಯಚೂರು ನಗರದಲ್ಲಿ ಸ್ವಾಗತಿಸಲಾಯಿತು. ಇದೇ ಸಂದರ್ಭದಲ್ಲಿ ಶ್ರೀ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಅಂಬಣ್ಣ ನಾಯಕ ಎಸ್.ಜಿ.ವಿ, ಸರ್ಕಾರಿ ಮಹಿಳಾ ಪದವಿ ಕಾಲೇಜು ರಾಯಚೂರು ಶ್ರೀಮತಿ ಸರಸ್ವತಿ ರೇಂಜರ್ ಲೀಡರ್ಸ್, ಶ್ರೀ ವೈ. ನರಸಿಂಹ ರೋವರ್ ಸ್ಕೌಟ್ ಲೀಡರ್, ಶ್ರೀ ಸೋಮಶೇಖರ, ರೋವರ್ ಹಾಗೂ ರೇಂಜರ್ಸ್‌ಗಳು ಭಾಗವಹಿಸಿದ್ದರು.



* ಸೆಪ್ಟೆಂಬರ್ 17 ರಂದು ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ವತಿಯಿಂದ ಕಲ್ಯಾಣ ಕರ್ನಾಟಕ ಉತ್ಸವ ದಿನಾಚರಣೆ ಅಂಗವಾಗಿ ಶ್ರೀ ಬಸವರಾಜ ಬೋರೆಡ್ಡಿ ಜಿಲ್ಲಾ ಮುಖ್ಯ ಆಯುಕ್ತರು ರವರು ಜಿಲ್ಲಾ ಸ್ಕೌಟ್ ಭವನ ರಾಯಚೂರು ಇಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿದರು. ಇದೇ ಸಂದರ್ಭದಲ್ಲಿ ಶ್ರೀ ಹನುಮಂತಪ್ಪ ಗವಾಯಿ ನಿವೃತ್ತಿ ಜಿಲ್ಲಾ ಶಿಕ್ಷಣಾಧಿಕಾರಿಗಳು ರಾಯಚೂರು, ಶ್ರೀ ಬಸವರಾಜ ಗದಗಿನ ಜಿಲ್ಲಾ ಆಯುಕ್ತರು (ಸ್ಕೌ), ಶ್ರೀ ಬಸಪ್ಪ ಗದ್ದಿ, ಜಿಲ್ಲಾ ಕಾರ್ಯದರ್ಶಿಗಳು, ಶ್ರೀ ಆರ್.ಎಚ್. ಸಾಗರ್ ಅಧ್ಯಕ್ಷರು ಉಪಸ್ಥಿತರಿದ್ದರು.



* ಸೆಪ್ಟೆಂಬರ್ 17 ರಂದು ಜಿಲ್ಲಾಡಳಿತ ರಾಯಚೂರು ವತಿಯಿಂದ ಸನ್ಮಾನ್ಯ ಡಾ. ಶರಣಪ್ರಕಾಶ್ ಆರ್. ಪಾಟೀಲ್, ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರು ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣ ರಾಯಚೂರು ಇಲ್ಲಿ ರಾಷ್ಟ್ರ ಧ್ವಜಾರೋಹಣವನ್ನು ನೆರವೇರಿಸಿದರು. ತದನಂತರ ವಿವಿಧ ಶಾಲೆಗಳಿಂದ ಪಥಸಂಚಲವನ್ನು ಆಯೋಜನೆ ಮಾಡಲಾಯಿತು. ಈ ಪಥಸಂಚಲನದಲ್ಲಿ ಜಿಲ್ಲಾ ಸಂಸ್ಥೆ ಹಾಗೂ ಸ್ಥಳೀಯ ಸಂಸ್ಥೆ ರಾಯಚೂರು ಸೇಂಟ್ ಮೇರಿ ಕಾನ್ವೆಂಟ್ ಶಾಲೆ ರಾಯಚೂರು ಗೈಡ್ ತಂಡ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಪೊಲೀಸ್ ಕಾಲೋನಿ ರಾಯಚೂರು ಗೈಡ್, ಸರ್ಕಾರಿ ಬಾಲಕರ ಪ್ರೌಢ ಶಾಲೆ ರಾಯಚೂರು ಸ್ಕೌಟ್ ತಂಡಗಳು ಭಾಗವಹಿಸಿ ಮಾನ್ಯ ಸಚಿವರಿಂದ ಬಹುಮಾನ ಹಾಗೂ ಪ್ರಶಸ್ತಿ ಸ್ವೀಕರಿಸಿದರು. ಇದೇ ಸಂದರ್ಭದಲ್ಲಿ ಸನ್ಮಾನ್ಯ ಶ್ರೀ ಎನ್.ಎ. ಬೋಸರಾಜು ಸಣ್ಣ ನೀರಾವರಿ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು ಹಾಗೂ ಅಧ್ಯಕ್ಷರು ಜಿಲ್ಲಾ ಸಂಸ್ಥೆ ರಾಯಚೂರು, ಸನ್ಮಾನ್ಯ ಶ್ರೀ ವಸಂತಕುಮಾರ್ ವಿಧಾನ ಪರಿಷತ್ ಸದಸ್ಯರು, ಸನ್ಮಾನ್ಯ ಶ್ರೀ ಡಾ. ಶಿವರಾಜ ಪಾಟೀಲ್, ಶಾಸಕರು ರಾಯಚೂರು ನಗರ, ಸನ್ಮಾನ್ಯ ಶ್ರೀ ದದ್ದಲಬಸನಗೌಡ, ಶಾಸಕರು ರಾಯಚೂರು ಗ್ರಾಮೀಣ ರವರು ಉಪಸ್ಥಿತರಿದ್ದರು.




## ತುಮಕೂರು

* ಆಗಸ್ಟ್ 30 ರಂದು ಉಪನಿರ್ದೇಶಕರ ಕಛೇರಿ, ತುಮಕೂರು ಇಲ್ಲಿ ತುಮಕೂರು ಜಿಲ್ಲಾ ಪ್ರಗತಿ ಪರಿಶೀಲನಾ ಸಭೆಯನ್ನು ರಾಜ್ಯ ಮುಖ್ಯ ಆಯುಕ್ತರು ಹಾಗೂ ಮಾಜಿ ಸಚಿವರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ಅಧ್ಯಕ್ಷತೆಯಲ್ಲಿ ಆಯೋಜಿಸಲಾಗಿತ್ತು. ಜಿಲ್ಲೆಯ ಸಮಗ್ರ ಅಭಿವೃದ್ಧಿ, ತರಬೇತಿ, ಗಣತಿ, ಯುವ ಕಾರ್ಯಕ್ರಮಗಳು, ವಯಸ್ಕ ನಾಯಕರ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಿಲಾಯಿತು. ಈ ಸಂದರ್ಭದಲ್ಲಿ ಮಾನ್ಯ ಉಪನಿರ್ದೇಶಕರಾದ ಶ್ರೀ ರಘುಚಂದ್ರ, ಉಪನಿರ್ದೇಶಕರು ಪದವಿ ಪೂರ್ವ ಶಿಕ್ಷಣ ಇಲಾಖೆ ಶ್ರೀ ಬಾಲಗುರುಮೂರ್ತಿ, ಕ್ಷೇತ್ರಶಿಕ್ಷಣಾಧಿಕಾರಿ ಶ್ರೀ ಹನುಮಂತಪ್ಪ, ಜಿಲ್ಲಾ ದೈಹಿಕ ಪರಿಕ್ಷಕರು ಶ್ರೀ ಗೋಪಾಲಕೃಷ್ಣ ರವರು ಸುರೇಂದ್ರ ಷಾ ರವರು ಜಿಲ್ಲಾ ಕಾರ್ಯದರ್ಶಿಗಳು, ಶ್ರೀಮತಿ ಸುಭಾಷಿಣಿರವರು ಜಿಲ್ಲಾ ಆಯುಕ್ತರು ಗೈಡ್, ಶ್ರೀಮತಿ ಮಂಜುಳಾ (ಎಸ್‌ಓಸಿ), ಶ್ರೀ ಆಂಜನಪ್ಪ ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ಈಶ್ವರಯ್ಯ ಜಿಲ್ಲಾ ಕೇಂದ್ರ ಸ್ಥಾನ ಆಯುಕ್ತರು, ತಾಲೂಕು ನೋಡಲ್ ಅಧಿಕಾರಿಗಳು, ಜಿಲ್ಲಾ ಸಹಾಯಕ ಆಯುಕ್ತರುಗಳು ಶ್ರೀ ನವೀನ್ ಕುಮಾರ್ ರವರು ಜಿಲ್ಲಾ ಸಂಘಟಕರು ಜಿಲ್ಲಾ ಹಾಗೂ ಸ್ಥಳೀಯ ಸಂಸ್ಥೆಯ ಪದಾಧಿಕಾರಿಗಳು ಉಪಸ್ಥಿತರಿದ್ದರು.



* ಆಗಸ್ಟ್ 31 ರಂದು ಜಿಲ್ಲಾಡಳಿತದ ವತಿಯಿಂದ ದಸರಾ ಹಬ್ಬದ ಪ್ರಯುಕ್ತ ತುಮಕೂರು ಜಿಲ್ಲೆಯಲ್ಲಿ ಪ್ರಪ್ರಥಮ ಬಾರಿಗೆ ಪಂಜಿನ ಕವಾಯತು ಪ್ರದರ್ಶನವನ್ನು ಆಯೋಜಿಸಲಾಗುತ್ತಿದ್ದು, ಸುಮಾರು 20 ದಿನಗಳಿಂದ ಜಿಲ್ಲಾ ಸಂಸ್ಥೆಯ ವಿವಿಧ ಪ್ರಥಮ ದರ್ಜೆ ಕಾಲೇಜುಗಳ 75 ರೋವರ್ಸ್ ಮತ್ತು ರೇಂಜರ್ಸ್‌ಗಳು ಯಶಸ್ವಿಯಾಗಿ ಅಭ್ಯಾಸ ನಡೆಸಿ ಪ್ರದರ್ಶನವನ್ನು ನಡೆಸಿದರು. ಈ ಕವಾಯಿತು ಪ್ರದರ್ಶನವನ್ನು ಮಾನ್ಯ ಗೃಹ ಮಂತ್ರಿಗಳಾದ ಶ್ರೀ ಜಿ. ಪರಮೇಶ್ವರ್ ರವರು ವೀಕ್ಷಿಸಿ ಮೆಚ್ಚುಗೆ ವ್ಯಕ್ತಪಡಿಸಿ ಕವಾಯಿತು



ಪ್ರದರ್ಶನಕ್ಕೆ ಹಾಗೂ ಸಹಕರಿಸಿದ ಸಿಬ್ಬಂದಿ ವರ್ಗದವರಿಗೆ ಇದೇ ಸಂದರ್ಭದಲ್ಲಿ ಅಭಿನಂದನೆ ಸಲ್ಲಿಸಿದರು. ಪಂಜಿನ ಕವಾಯಿತು ಪ್ರದರ್ಶನದ ನಿಯೋಜನೆಯ ಜವಾಬ್ದಾರಿಯನ್ನು ಜಿಲ್ಲಾ ಸಂಘಟಕರಾದ ಶ್ರೀ ನವೀನ್ ಕುಮಾರ್‌ರವರು ವಹಿಸಿದ್ದರು.

* ಸ್ಥಳೀಯ ಸಂಸ್ಥೆ ವತಿಯಿಂದ ತುಮಕೂರು ತಾಲೂಕು ಮಟ್ಟದ 'ಗೀತ ಗಾಯನ' ಸ್ಪರ್ಧೆಯನ್ನು ಸೆಪ್ಟೆಂಬರ್ 06 ರಂದು ಶ್ರೀ ಸಿದ್ದಗಂಗಾ ಮಠದಲ್ಲಿ ಆಚರಿಸಲಾಯಿತು.

* ಸೆಪ್ಟೆಂಬರ್ 12 ರಂದು ತುಮಕೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಸಮಾಜ ಕಾರ್ಯ ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಹಿರಿಯ ಪ್ರಾಧ್ಯಾಪಕರು ಹಾಗೂ ಕಾಲೇಜು ವಿಭಾಗದ ಜಿಲ್ಲಾ ಸ್ಕೌಟ್ಸ್ ಮತ್ತು ಗೈಡ್ಸ್ ನೋಡಲ್ ಅಧಿಕಾರಿಗಳು ಆದ ಪ್ರೊಫೆಸರ್ ಪರಶುರಾಮ್ ಕೆ.ಜಿ. ಅವರು ಕಲಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ನ್ಯಾಯಾಲಯದ ಸದಸ್ಯರಾಗಿ ನೇಮಕಗೊಂಡಿದ್ದು ಅವರನ್ನು ತುಮಕೂರು ಜಿಲ್ಲಾ ಸಂಸ್ಥೆ ವತಿಯಿಂದ ಸನ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ರೋವರ್ ಮತ್ತು ರೇಂಜರ್ಸ್ ಘಟಕಗಳು ಎಲ್ಲಾ ಕಾಲೇಜುಗಳಲ್ಲಿ ತೆರೆಯಲು ಮನವಿ ಸಲ್ಲಿಸಲಾಯಿತು. ಜಿಲ್ಲಾ ಜಂಟಿ ಕಾರ್ಯಗಳಾದ ಶ್ರೀ ಆಂಜನಪ್ಪ, ಜಿಲ್ಲಾ ಸಂಘಟಕರು ನವೀನ್ ಕುಮಾರ್, ಜಿಲ್ಲಾ ಯುವ ಸಮಿತಿಯ ಸದಸ್ಯರುಗಳು ಶುಭ ಹಾರೈಸಿದರು.



* ಸೆಪ್ಟೆಂಬರ್ 12 ರಂದು ಜಿಲ್ಲಾ ಮಟ್ಟದ ಯುವ ಸಮಿತಿಯ ವತಿಯಿಂದ ಶ್ರೀ ಶಂಕರ ಮಠ ದೇವಸ್ಥಾನದ ಆವರಣ ಹಾಗೂ ಗೋಪುರಗಳನ್ನು ಸ್ವಚ್ಛಗೊಳಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಆಯುಕ್ತರು ಗೈಡ್ ಶ್ರೀಮತಿ ಸುಭಾಷಣಿ ಆರ್. ಕುಮಾರ್, ಶ್ರೀ ಆಂಜನಪ್ಪ ಜಿಲ್ಲಾ ಜಂಟಿ ಕಾರ್ಯದರ್ಶಿಗಳು, ಶ್ರೀ ನವೀನ್ ಕುಮಾರ್, ಜಿಲ್ಲಾ ಸಂಘಟಕರು, ದೇವಸ್ಥಾನದ ಆಡಳಿತ ಮಂಡಳಿಯ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳು ಹಾಗೂ ಜಿಲ್ಲಾ ಯುವ ಸಮಿತಿ 60 ರೋವರ್–ರೇಂಜರ್‌ಗಳು ಭಾಗವಹಿಸಿದ್ದರು.



* ಆಗಸ್ಟ್ 30 ರಂದು ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯರವರು ತುಮಕೂರು ಜಿಲ್ಲೆಯಲ್ಲಿ ಹೊಸದಾಗಿ ನವೀಕರಿಸಿರುವ ಸ್ಕೌಟ್ಸ್–ಗೈಡ್ಸ್ ತುಮಕೂರು ಜಿಲ್ಲಾ ಕಚೇರಿಗೆ ಭೇಟಿ ನೀಡಿ ರೋವರ್ಸ್ ಮತ್ತು ರೇಂಜರ್ಸ್‌ಗಳ ಜೊತೆ ಸಂವಾದ ನಡೆಸಿದರು. ಈ ಸಂದರ್ಭದಲ್ಲಿ ರಾಜ್ಯ ಸಂಘಟನಾ ಆಯುಕ್ತರು ಗೈಡ್ಸ್ ಶ್ರೀಮತಿ ಮಂಜುಳಾ ರವರು, ಜಿಲ್ಲಾ ಕಾರ್ಯದರ್ಶಿ, ಜಿಲ್ಲಾ ಸಂಘಟಕರು, ಯುವ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರು ಉಪಸ್ಥಿತರಿದ್ದರು.



## ಉಡುಪಿ

* ಆಗಸ್ಟ್ 19 ರಂದು ಡಾ. ವಿ.ಎಸ್. ಆಚಾರ್ಯ ಪ್ರಗತಿ ನಗರ ಮಣಿಪಾಲ ಇಲ್ಲಿ ಜಿಲ್ಲಾ ಪುರಸ್ಕಾರ ಕಬ್ ಮತ್ತು ಬುಲ್ ಬುಲ್‌ಗಳಿಗೆ ತೃತೀಯ ಚರಣ್ ಹಾಗೂ ಸುವರ್ಣ ಪಂಕ್ ಪರೀಕ್ಷೆ ನಡೆಯಿತು. 300 ಕಬ್–ಬುಲ್‌ಬುಲ್‌ಗಳು, 28 ಕಬ್–ಬುಲ್‌ಬುಲ್, ಶಿಕ್ಷಕರು ಭಾಗವಹಿಸಿದ್ದರು. ಈ ಸಮಯದಲ್ಲಿ ಮಾನ್ಯ ಜಿಲ್ಲಾ ಮುಖ್ಯ ಆಯುಕ್ತರಾದ ಶ್ರೀ ಇಂದ್ರಾಳಿ ಜಯಕರ್ ಶೆಟ್ಟಿ ಇವರು ಶಿಬಿರಕ್ಕೆ ಭೇಟಿಕೊಟ್ಟರು. ಈ ಶಿಬಿರದಲ್ಲಿ ಶ್ರೀಮತಿ ಪೂರ್ಣಿಮಾ, HWB, ಶ್ರೀಮತಿ ಪದ್ಮಾವತಿ, HWB, ಶ್ರೀಮತಿ ವಿನಯ ಅಡ್ವಾನ್ಸ್ ಹಾಗೂ ಎಲ್ಲಾ ಕಬ್, Flockದಳ ನಾಯಕಿಯರ ಸಹಕಾರ ಹಾಗೂ ಪ್ರೋತ್ಸಾಹದಿಂದ ಪರೀಕ್ಷೆ ನಡೆಯಿತು.



* ಆಗಸ್ಟ್ 21 ರಂದು ಮಾನ್ಯ ಪೊಲೀಸ್ ವರಿಷ್ಠಾಧಿಕಾರಿಯವರ ಮಾರ್ಗದರ್ಶನ ಹಾಗೂ ಸೂಚನೆಯಂತೆ (SP) ಮಣಿಪಾಲ ಠಾಣೆಯ ಪೊಲಿಸ್ ಅಧಿಕಾರಿಯವರು ಜಿಲ್ಲಾ ತರಬೇತಿ ಕೇಂದ್ರಕ್ಕೆ ಭೇಟಿಕೊಟ್ಟು. ತರಬೇತಿ ಕೇಂದ್ರದ ಹಾಗೂ ತರಬೇತಿಗೆ, ಶಿಬಿರಕ್ಕೆ ಬರುವಂತಹ ವಿದ್ಯಾರ್ಥಿಗಳ ಸುರಕ್ಷತೆಯ ಬಗ್ಗೆ ಕಾಳಜಿ ವಹಿಸುವ ಜೊತೆಗೆ ಮುಂದೆ ತಮ್ಮಿಂದ ಆಗಬೇಕಾಗಿರುವ ಸಹಾಯ, ಅನುಕೂಲದ ಬಗ್ಗೆ ವಿಚಾರ ವಿನಿಮಯ ಮಾಡಿ ದಿನಕ್ಕೆ ಎರಡು ಸಲ ಹಗಲು ರಾತ್ರಿ ಗಸ್ತು (ಬೀಟ್) ಮಾಡುವುದಾಗಿ ತಿಳಿಸುತ್ತಾ ಏನಾದರೂ ಅಗತ್ಯವಿದ್ದಲಿ ತಕ್ಷಣವೇ ಕರೆ ಮಾಡುವಂತೆ ಸೂಚನೆ ನೀಡಿದರು.



ಆಗಸ್ಟ್ 20 ರಿಂದ 23ರ ವರೆಗೆ ಡಾಕ್ಟರ್ ವಿ.ಎಸ್. ಆಚಾರ್ಯ ತರಬೇತಿ ಕೇಂದ್ರ ಪ್ರಗತಿನಗರ ಮಣಿಪಾಲದಲ್ಲಿ, ಜಿಲ್ಲಾ ಮಟ್ಟದ ರೋವರ್ಸ್–ರೇಂಜರ್ಸ್‌ಗಳಿಗೆ ರಾಜ್ಯ ಪುರಸ್ಕಾರ ಪೂರ್ವ ಸಿದ್ಧತಾ ಪರೀಕ್ಷೆಯನ್ನು ಏರ್ಪಡಿಸಲಾಯಿತು. ಈ ಒಂದು ಶಿಬಿರದ ನಾಯಕರಾಗಿ RSL ಶ್ರೀ ಪ್ರಭಾಕರ್ ಶೆಟ್ಟಿ ಸರಕಾರಿ ಪದವಿಪೂರ್ವ ಕಾಲೇಜು ಉಡುಪಿ,

ಊಫಃ, ಶ್ರೀ ಅರವಿಂದ್ ಸರಕಾರಿ ಪದವಿ ಪೂರ್ವ ಕಾಲೇಜು ಸಾಣೂರು, ಶ್ರೀ ಉಮೇಶ್ ಕಾಂಚನ್, pre Alt ಭಾಗವಹಿಸಿದ್ದರು.

* ಆಗಸ್ಟ್ 23 ರಿಂದ 24ರ ವರೆಗೆ ಡಾ. ವಿ.ಎಸ್. ಆಚಾರ್ಯ ಪ್ರಗತಿ ನಗರ ಮಣಿಪಾಲ. ಇಲ್ಲಿ ರಾಜ್ಯ ಪುರಸ್ಕಾರ, ಕಬ್–ಬುಲ್‌ಬುಲ್‌ಗಳಿಗೆ ಚತುರ್ಥ ಚರಣ್ ಹಾಗೂ ಹೀರಕ್ ಪಂಕ್ ಪರೀಕ್ಷೆ ನಡೆಯಿತು. ಕಬ್–ಬುಲ್‌ಬುಲ್‌ಗಳು, 20 ಕಬ್–ಬುಲ್‌ಬುಲ್ ಶಿಕ್ಷಕರು ಭಾಗವಹಿಸಿದ್ದರು.



* ಆಗಸ್ಟ್ 25 ರಂದು ಇಂದ್ರಾಳಿ ರೈಲ್ವೆ ನಿಲ್ದಾಣದಲ್ಲಿ ತಿಂಗಳ ಸ್ವಚ್ಛತಾ ಕಾರ್ಯಕ್ರಮವು ನಡೆಸಲಾಯಿತು. ಈ ಕಾರ್ಯಕ್ರಮವು ರೈಲ್ವೆ ಆಫೀಸರ್ ಆಗಿರುವಂತಹ ಶ್ರೀ ವಿ.ಕೆ. ಭಟ್ ಇವರ ನೇತೃತ್ವ ಹಾಗೂ ಸಂಪೂರ್ಣ ಸಹಕಾರದೊಂದಿಗೆ ನಡೆಯಿತು. ಈ ಕಾರ್ಯಕ್ರಮದಲ್ಲಿ ಮೌಂಟ್ ರೋಸರಿ ಆಂಗ್ಲ ಮಾಧ್ಯಮ ಶಾಲೆ ಕಲ್ಯಾಣ್ಪುರ ಇಲ್ಲಿಯ ತೃತೀಯ ಸೋಪಾನ, ರಾಜ್ಯ ಪುರಸ್ಕಾರ ಪರೀಕ್ಷೆ ಬರೆಯುವ ಸ್ಕೌಟ್ಸ್ ಮತ್ತು ಗೈಡ್ಸ್, ವಿದ್ಯಾರ್ಥಿಗಳು, ಶಿಕ್ಷಕರು ಭಾಗವಹಿಸಿದ್ದರು.

* ಆಗಸ್ಟ್ 25 ರಂದು ಸರಕಾರಿ ಪದವಿ ಪೂರ್ವ ಕಾಲೇಜು ಉಡುಪಿಯಲ್ಲಿ ರೋವರ್ ಸ್ಕೌಟ್ ಲೀಡರ್ ಹಾಗೂ ರೇಂಜರ್ ಲೀಡರ್ ಉಪನ್ಯಾಸಕ ಉಪನ್ಯಾಸಕಿಯರಿಗೆ ಒಂದು ದಿನದ ಮಾಹಿತಿ ಶಿಬಿರವನ್ನು ಏರ್ಪಡಿಸಲಾಯಿತು. ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮಾನ್ಯ ಉಪನಿರ್ದೇಶಕರಾದ ಶ್ರೀ ಮಾರುತಿ ವಹಿಸಿದ್ದರು ಹಾಗೂ ಉದ್ಘಾಟನೆಯನ್ನು ಮಾನ್ಯ ರಾಜ್ಯ ಮುಖ್ಯ ಆಯುಕ್ತರಾದ ಪಿ.ಜಿ.ಆರ್ ಸಿಂಧ್ಯಾ ಮಾಜಿ ಸಚಿವರು, ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮಾಡಿದರು. ಈ ಸಮಯದಲ್ಲಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರು, ಪದವಿ ಪೂರ್ವ ಕಾಲೇಜಿನ ಅಧ್ಯಕ್ಷರು, ಜಿಲ್ಲಾ ಮುಖ್ಯ ಆಯುಕ್ತರಾದ ಇಂದ್ರಾಳಿ ಜಯಕರ್ ಶೆಟ್ಟಿ, ಮುಂತಾದವರು ಭಾಗವಹಿಸಿದ್ದರು. ಶ್ರೀ ಆನಂದ್ ಬಿ. ಅಡಿಗ ಸ್ವಾಗತ ಮಾಡಿದರು. ಶಿಬಿರ ನಾಯಕರಿಂದ ಪ್ರಾಸ್ತಾವಿಕ ಮಾತು. ಜಿಲ್ಲಾ ತರಬೇತಿ ಆಯುಕ್ತರಾದ ಉದಯ್ ಭಾಸ್ಕರ್ ಶೆಟ್ಟಿ, ಕಾರ್ಯಕ್ರಮದ ನಿರೂಪಣೆ ಮಾಡಿದರು. ರೋವರ್ ಸ್ಕೌಟ್ ಲೀಡರ್ ಹರೀಶ್ ವಂದನಾರ್ಪಣೆ ಮಾಡಿದರು. ಜಿಲ್ಲಾ ಪದಾಧಿಕಾರಿಗಳು, ಸರ್ವಿಸ್ ರೋವರ್–ರೇಂಜರ್ಸ್ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು. ಶ್ರೀಮತಿ ಸುಮನ್ ಶೇಖರ್ ಕಾರ್ಯಕ್ರಮ ಸಂಘಟಿಸಿದರು.



## ವಿಜಯಪುರ

* ಸೆಪ್ಟೆಂಬರ್ 09 ರಂದು ಸ್ಥಳೀಯ ಸಂಸ್ಥೆ ತಾಳಿಕೋಟೆ, ಇಲ್ಲಿಯ ಮೈಲೇಶ್ವರ ಗ್ರಾಮದ ಬ್ರಿಲಿಯಂಟ್ ಕನ್ನಡ ಮಾಧ್ಯಮ ಮತ್ತು ಆಂಗ್ಲ ಮಾಧ್ಯಮ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗೆ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಶ್ರೀ ರಾವತ್ ಪೂಜಾರಿ ಇವರೊಂದಿಗೆ ಮುಖ್ಯೋಪಾಧ್ಯಾಯರುಗಳನ್ನು ಭೇಟಿ ಮಾಡಿ ಶಾಲೆಯಲ್ಲಿ ನೂತನವಾಗಿ ಕಬ್–ಬುಲ್‌ಬುಲ್ಸ್, ಸ್ಕೌಟ್–ಗೈಡ್ ದಳಗಳನ್ನು ಪ್ರಾರಂಭಿಸುವ ಕುರಿತು ಚರ್ಚಿಸಲಾಯಿತು. ನಂತರ ಸೆಪ್ಟೆಂಬರ್ 20 ರಂದು ತಾಳಿಕೋಟಿ ತಾಲ್ಲೂಕು ಮಟ್ಟದ ಪ್ರಾರಂಭಿಕ ಶಿಬಿರವನ್ನು ಆಯೋಜನೆ ಮಾಡಲು ಸ್ಥಳಾವಕಾಶ ಮಾಡಿಕೊಡಲು ವಿನಂತಿಸಲಾಯಿತು. ಮಧ್ಯಾಹ್ನ ಸರ್ಕಾರಿ ಪ್ರೌಢ ಶಾಲೆ ಮಿಣಜಗಿ ಇಲ್ಲಿ ಭೇಟಿ ನೀಡಿ ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿ ಹಾಗೂ ಸ್ಕೌಟ್ ಮಾಸ್ಟರ್, ಶ್ರೀ ರಾವತ್ ಪೂಜಾರಿ ಇವರ ಸ್ಕೌಟ್ ದಳದ ಸಂದರ್ಶನ ಮಾಡಲಾಯಿತು.



* ಸೆಪ್ಟೆಂಬರ್ 11 ರಂದು ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯ ಹಾಗೂ ಸ್ಥಳೀಯ ಸಂಸ್ಥೆ ಚಡಚಣ ಇವರ ಸಹಯೋಗದಲ್ಲಿ ಸರಕಾರಿ ಹಿರಿಯ ಪ್ರಾಥಮಿಕ ಕನ್ನಡ ಶಾಲೆ, ಝಳಕಿ ಇಲ್ಲಿ ತಾಲ್ಲೂಕು ಮಟ್ಟದ ದೇಶ ಭಕ್ತಿ ಗೀತ ಗಾಯನ ಕಾರ್ಯಕ್ರಮ ಜರುಗಿತು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೈಹಿಕ ಶಿಕ್ಷಣ ಪರಿವೀಕ್ಷಕರು ಶ್ರೀ ಎಂ.ವಿ. ಬಿರಾದಾರ ವಹಿಸಿದ್ದರು. ಬಿ.ಆರ್.ಪಿ. ಶ್ರೀ ರಾಜೇಶ್ ವಾಲಿಕಾರ, ಸಿ.ಆರ್.ಪಿ. ಶ್ರೀ ಬಿ.ಆರ್. ಬಾಲಗಾಂವ, ಶಿಕ್ಷಕರ ಸೊಸೈಟಿಯ ಪದಾಧಿಕಾರಿಗಳಾದ ಶ್ರೀ ಜಿ.ಡಿ. ಹೂಗಾರ, ಶಾಲೆಯ ಪ್ರಧಾನ ಗುರುಗಳಾದ ಶ್ರೀ ಎಸ್.ಕೆ. ಸೊನಕನಳಿ, ಶ್ರೀ ಎಂ.ಎ. ಇಂಡಿಕರ, ಶ್ರೀ ಸೊನಿಹಾಳ, ಸ್ಥಳೀಯ ಸಂಸ್ಥೆಯ ಕಾರ್ಯದರ್ಶಿಯವರಾದ ಶ್ರೀ ಎಸ್.ಸಿ. ಉಮರಾಣಿ ಎ.ಎಸ್.ಓ.ಸಿ. ಶ್ರೀ ಡಿ.ಬಿ. ಅತ್ತಾರ, ಉಪಸ್ಥಿತರಿದ್ದರು. ಸಿ.ಆರ್.ಪಿ. ಶ್ರೀ ಬಾಲಗಾಂವ ಮಾತನಾಡಿ "ಉತ್ತಮ ನಾಗರಿಕರಾಗಲು ಸ್ಕೌಟ್, ಗೌಡ್ ಚಳುವಳಿಯು ಸಹಕಾರಿಯಾಗಿದೆ" ಎಂದು ಹೇಳಿದರು. ದೈಹಿಕ ಶಿಕ್ಷಣ ಪರೀಕ್ಷಕರಾದ ಶ್ರೀ ಬಿರಾದಾರ ಮಾತನಾಡಿ ಇಂದಿನ ಮಕ್ಕಳು ಸ್ಕೌಟ್–ಗೈಡ್ ನಿಯಮವನ್ನು ಜೀವನದಲ್ಲಿ ಪಾಲಿಸುತ್ತ ಶಿಸ್ತಿನ ಸಿಪಾಯಿಗಳು ಆಗಬೇಕೆಂದು ಹೇಳಿದರು. ಕಾರ್ಯಕ್ರಮದಲ್ಲಿ 80ಕ್ಕೂ ಹೆಚ್ಚು ಸ್ಕೌಟ್–ಗೈಡ್‌ಗಳು ಭಾಗವಹಿಸಿದ್ದರು. ಶ್ರೀ ಎಂ.ಎ. ಕಂಬಾರ, ಶ್ರೀ ವಿ.ಎಸ್. ಪೂಜಾರಿ, ಶ್ರೀಮತಿ ಆಶಾ ಎಂ. ನಾಟಕದ ನಿರ್ಣಾಯಕರಾಗಿ ಕಾರ್ಯನಿರ್ವಹಿಸಿದರು. ದ್ವಿತೀಯ ಸೋಪಾನ ಪರೀಕ್ಷಾ ಶಿಬಿರದಲ್ಲಿ 51 ಸ್ಕೌಟ್–ಗೈಡ್‌ಗಳು ಭಾಗವಹಿಸಿದ್ದರು.



## ವಿಜಯನಗರ

* ಜಿಲ್ಲಾ ಸಂಸ್ಥೆ ವಿಜಯನಗರ ವತಿಯಿಂದ ರಾಜ್ಯ ಪುರಸ್ಕಾರ ಪೂರ್ವಸಿದ್ಧತಾ ಪರೀಕ್ಷಾ ಶಿಬಿರವನ್ನು ಆಗಸ್ಟ್ 17 ರಂದು ವಿವೇಕಾನಂದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಹೊಸಪೇಟೆ ಇಲ್ಲಿ ನಡೆಸಲಾಯಿತು. ಈ ಶಿಬಿರದಲ್ಲಿ ಸ್ಕೌಟ್ ಮತ್ತು ರೋವರ್ಸ್ ವಿಭಾಗದ ನಾಯಕರಾಗಿ ಶ್ರೀ ತಿಪ್ಪೇಸ್ವಾಮಿ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಹೊಸಪೇಟೆ, ಶ್ರೀ ತಿಂದಪ್ಪ, ಸ್ಥಳೀಯ ಸಂಸ್ಥೆ ಕಾರ್ಯದರ್ಶಿಗಳು, ಕೂಡ್ಲಿಗಿ ಇವರುಗಳು ವಹಿಸಿದ್ದರು. ಗೈಡ್ಸ್ ಹಾಗೂ ರೇಂಜರ್ಸ್ ವಿಭಾಗದ ನಾಯಕಿಯಾಗಿ ಶ್ರೀಮತಿ ರೇಣುಕಾ ಎ., ಜಿಲ್ಲಾ ತರಬೇತಿ ಆಯುಕ್ತರು ಗೈಡ್ಸ್ ಇವರು ವಹಿಸಿದ್ದರು.



# ಶ್ರದ್ಧಾಂಜಲಿ



**ಶ್ರೀ ಬಿ.ಆರ್. ವೇಣುಗೋಪಾಲಕೃಷ್ಣ,** ಜಿಲ್ಲಾ ಆಯುಕ್ತರು (ಸ್ಕೌ) ಭಾರತ್ ಸ್ಕೌಟ್ಸ್-ಗೈಡ್ಸ್, ತುಮಕೂರು ಇವರು ಸೆಪ್ಟೆಂಬರ್ 10, 2025 ರಂದು ತುಮಕೂರಿನ ತಮ್ಮ ಸ್ವಗೃಹದಲ್ಲಿ ನಿಧನರಾದರು. ಇವರಿಗೆ 82 ವರ್ಷ ವಯಸ್ಸಾಗಿತ್ತು. ಶ್ರೀಯುತರು ಸುಮಾರು 45 ವರ್ಷಗಳಿಂದ ಸ್ಥಳೀಯ, ಜಿಲ್ಲಾ ಹಾಗೂ ರಾಜ್ಯ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳನ್ನು ಅಲಂಕರಿಸಿ ಸ್ಕೌಟ್-ಗೈಡ್ಸ್ ಚಳವಳಿಗೆ ತಮ್ಮ ಅಮೂಲ್ಯವಾದ ಸಮಯವನ್ನು ಮೀಸಲಿಟ್ಟು ತುಮಕೂರು ಜಿಲ್ಲಾ ಸಂಸ್ಥೆಯಲ್ಲಿ ನಡೆಯುತ್ತಿದ್ದ ಚಟುವಟಿಕೆ, ಕಾರ್ಯಕ್ರಮಗಳಲ್ಲಿ ಭಾಗವಹಿಸುವುದರ ಮೂಲಕ ಸಂಸ್ಥೆಗೆ ಅಪಾರ ಕೊಡುಗೆಯನ್ನು ನೀಡಿರುತ್ತಾರೆ. ಇವರ ಉತ್ತಮ ಸಾಧನೆಗೆ ರಾಜ್ಯ ಸಂಸ್ಥೆಯಿಂದ ಮೆಡಲ್ ಆಫ್ ಮೆರಿಟ್ ಅವಾರ್ಡ್ ನೀಡಲಾಗಿತ್ತು. ಶ್ರೀಯುತರು 1993ರಲ್ಲಿ ತುಮಕೂರಿನಲ್ಲಿ ಜರುಗಿದ ರಾಜ್ಯ ಮಟ್ಟದ ಕಬ್-ಬುಲ್‌ಬುಲ್ ಉತ್ಸವ ಹಾಗೂ 1997ರಲ್ಲಿ ತಮಕೂರಿನಲ್ಲಿ ಯಶಸ್ವಿಯಾಗಿ ಜರುಗಿದ 22ನೇ ರಾಜ್ಯ ಮಟ್ಟದ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್‌ನಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ, ಕುಷ್ಠರೋಗ ಸಂಸ್ಥೆಯ ಪ್ರಶಸ್ತಿಯನ್ನು ರಾಜ್ಯಪಾಲರಿಂದ ಪಡೆದಿದ್ದರು. ಮೈಸೂರು ದಸರಾ ಆಚರಣೆಯ ಪ್ರಶಸ್ತಿಗೆ ಪಾತ್ರರಾಗಿದ್ದರು. ಬೆಳಗೊಂಬದಲ್ಲಿ ನಿರ್ಮಾಣಗೊಂಡಿರುವ ಜಿಲ್ಲಾ ಸ್ಕೌಟ್-ಗೈಡ್ ತರಬೇತಿ ಕೇಂದ್ರದ ಅಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಇವರು ಮಗ ಮತ್ತು ಮಗಳು, ಮೊಮ್ಮಕ್ಕಳು ಹಾಗೂ ಅಪಾರ ಬಂಧು ಮಿತ್ರರರನ್ನು ಅಗಲಿದ್ದಾರೆ.



**ಶ್ರೀ ಎಂ.ಕೆ. ವಿಜಯ ಕುಮಾರ್** (82 ವರ್ಷ) ಅಧ್ಯಕ್ಷರು, ಕಾರ್ಕಳ ಸ್ಥಳೀಯ ಸಂಸ್ಥೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಉಡುಪಿ ಜಿಲ್ಲೆ ಇವರು ಅಕ್ಟೋಬರ್ 03 ರಂದು ಕಾರ್ಕಳದಲ್ಲಿ ನಿಧನರಾದರು. ಶ್ರೀಯುತರು ಕಳೆದ 35 ವರ್ಷಗಳಿಂದ ಕಾರ್ಕಳ ಸ್ಥಳೀಯ ಸಂಸ್ಥೆಯ ಅಧ್ಯಕ್ಷರಾಗಿ, ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹಾಗೂ ಉಡುಪಿ ಜಿಲ್ಲೆಯಲ್ಲಿ ಸ್ಕೌಟಿಂಗ್ ಗೈಡಿಂಗ್ ಬೆಳವಣಿಗೆಗೆ ಅಮೂಲ್ಯ ಕೊಡುಗೆ ನೀಡಿರುತ್ತಾರೆ. ಸಮಾಜ ಸೇವಕರು, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ವಿಜೇತರು, ಖ್ಯಾತ ವಕೀಲರು, ಕಳೆದ 50 ವರ್ಷ ಗಳಿಂದ ರಾಜ್ಯ ಮುಖ್ಯ ಆಯುಕ್ತರಾದ ಶ್ರೀ ಪಿ ಜಿ.ಆರ್. ಸಿಂಧ್ಯ ರವರ ಪರಿಚಿತರರು, ಉತ್ತಮ ಸ್ನೇಹಿತರು ಆಗಿದ್ದ ಶ್ರೀ ಎಂ.ಕೆ. ವಿಜಯ ಕುಮಾರ್ ರವರ ನಿಧನದಿಂದ ತುಂಬಲಾರದ ನಷ್ಟವಾಗಿದೆ.



**ಶ್ರೀ ಎನ್. ರವಿಪ್ರಸಾದ್,** ಕಛೇರಿ ಸಹಾಯಕ, ಕೇಂದ್ರ ಕಛೇರಿ, ಭಾರತ್ ಸ್ಕೌಟ್ಸ್-ಗೈಡ್ಸ್, ಬೆಂಗಳೂರು ಇವರು ಅಕ್ಟೋಬರ್ 2, 2025 ರಂದು ಬೆಂಗಳೂರಿನಲ್ಲಿ ನಿಧನರಾದರು. ಇವರಿಗೆ 53 ವರ್ಷ ವಯಸ್ಸಾಗಿತ್ತು. ಶ್ರೀಯುತರು ಕಳೆದ 6 ವರ್ಷಗಳಿಂದ ಬೆಂಗಳೂರಿನ ಶಾಂತಿಗೃಹದ ಕೊಂಡಜ್ಜಿ ಬಸಪ್ಪ ಆಡಿಟೋರಿಯಂನ ಸಹಾಯಕರಾಗಿ ಕಾರ್ಯನಿರ್ವಹಿಸುತ್ತಿದ್ದರು. ಇವರು 2020 ಜನವರಿ 21 ರಿಂದ 25ರ ವರೆಗೆ ದೊಡ್ಡಬಳ್ಳಾಪುರ ಡಾ॥ ಅನಿಬೆಸೆಂಟ್ ರಾಜ್ಯ ತರಬೇತಿ ಕೇಂದ್ರದಲ್ಲಿ ನಡೆದ ರಾಜ್ಯ ಮಟ್ಟದ ಆಯುಕ್ತರುಗಳ ಮೂಲ ತರಬೇತಿ ಶಿಬಿರದಲ್ಲಿ ಭಾಗವಹಿಸಿ ತರಬೇತಿ ಪಡೆದಿದ್ದರು. ಇವರು ತಮ್ಮ ಧರ್ಮಪತ್ನಿ ಶ್ರೀಮತಿ ಸುಕನ್ಯ ಹಾಗೂ ಒಬ್ಬ ಮಗ ಮತ್ತು ಮಗಳನ್ನು ಹಾಗೂ ಅಪಾರ ಬಂಧು-ಮಿತ್ರರನ್ನು ಅಗಲಿದ್ದಾರೆ.

ಇವರುಗಳ ಆತ್ಮಕ್ಕೆ ಸದ್ಗತಿ ದೊರಕಲೆಂದು ಹಾಗೂ ಅವರ ಅಗಲಿಕೆಯ ದುಃಖವನ್ನು ಭರಿಸುವ ಶಕ್ತಿಯನ್ನು ಅವರುಗಳ ಕುಟುಂಬದವರಿಗೆ ನೀಡಲೆಂದು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ.

– ರಾಜ್ಯ ಕಾರ್ಯದರ್ಶಿ

# ಶಬ್ದಮಾಲಿನ್ಯ ನಿಯಂತ್ರಣಕ್ಕೆ ಎಲ್ಲರೂ ಕೈಜೋಡಿಸೋಣ



### ಶಬ್ದಮಿತಿಯ ಪ್ರಮಾಣ (ಡೆಸಿಬೆಲ್‌ಗಳಲ್ಲಿ)

| ಪ್ರದೇಶ | ಹಗಲು (ಗರಿಷ್ಠ) | ರಾತ್ರಿ (ಗರಿಷ್ಠ) |
|---|---|---|
| ಕೈಗಾರಿಕಾ ಪ್ರದೇಶ | 75 | 70 |
| ವಾಣಿಜ್ಯ ಪ್ರದೇಶ | 65 | 55 |
| ವಸತಿ ಪ್ರದೇಶ | 55 | 45 |
| ಶಬ್ದ ಸೂಕ್ಷ್ಮ ಪ್ರದೇಶ | 50 | 40 (ಶಾಲೆ, ಕೋರ್ಟ್ ,ಆಸ್ಪತ್ರೆ ಇತ್ಯಾದಿ) |

### ಶಬ್ದಮಾಲಿನ್ಯ (ನಿಯಂತ್ರಣ) ಕಾಯಿದೆಯ ನಿಯಮಗಳು

- ಆಸ್ಪತ್ರೆ, ಶೈಕ್ಷಣಿಕ ಸಂಸ್ಥೆ, ಕೋರ್ಟ್ ಪ್ರದೇಶಗಳ ಸುತ್ತಮುತ್ತಲಿನ 100 ಮೀಟರ್ ವ್ಯಾಪ್ತಿ ಶಬ್ದರಹಿತವಾಗಿರಬೇಕು.
- ಸಾರ್ವಜನಿಕ ಸ್ಥಳದಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಿಕೊಳ್ಳಬೇಕಾದರೆ ಸಂಬಂಧಿಸಿದ ಪೊಲೀಸ್ ಅಧಿಕಾರಿಗಳಿಂದ ಲಿಖಿತರೂಪದಲ್ಲಿ ಅನುಮತಿ ಪಡೆದುಕೊಳ್ಳಬೇಕು.
- ರಾತ್ರಿ 10 ಗಂಟೆಯಿಂದ ಬೆಳಗ್ಗೆ 6 ಗಂಟೆ ಸಮಯದಲ್ಲಿ ಸಾರ್ವಜನಿಕ ಪ್ರದೇಶದಲ್ಲಿ ಧ್ವನಿಯಂತ್ರಕಗಳನ್ನು ಬಳಸಬಾರದು.

### ಹಾರ್ನ್ ಮಾಡಲೇಬೇಡಿ

ಪಾದಚಾರಿಗಳ ಹಿಂದೆ ದಿಢೀರನೆ ಹಾರ್ನ್ ಮಾಡಿ ಅವರನ್ನು ಗಾಬರಿಪಡಿಸಬೇಡಿ. ಕೆಲವೇ ಗಳಿಗೆಗಳಲ್ಲಿ ಖಂಡಿತ ಅವರು ಸರಿಯುತ್ತಾರೆ. ಒಂದರ ಹಿಂದೆ ಒಂದರಂತೆ ಚಲಿಸುವಾಗಲೂ ಹಾರ್ನ್ ಮಾಡಬೇಡಿ. ಡಿಮ್-ಡಿಪ್ ದೀಪ ಬಳಸಿ.

### ತಾಳ್ಮೆ ಇರಲಿ

ಟ್ರಾಫಿಕ್ ಸಿಗ್ನಲ್‌ಗಳಲ್ಲಿ ವಾಹನಗಳು ಚಲಿಸಲು ಹಸಿರು ದೀಪದ ಸೂಚನೆ ಬಂದಾಗ ಹಿಂದಿರುವ ವಾಹನ ಸವಾರರು ಮುಂದಿರುವ ವಾಹನ ಸವಾರರರಿಗೆ ಅನವಶ್ಯಕವಾಗಿ ಹಾರ್ನ್ ಮಾಡುವ ಬದಲು ಕೆಲ ಸೆಕೆಂಡುಗಳ ಕಾಲ ತಾಳ್ಮೆಯಿಂದ ವರ್ತಿಸಬೇಕು.

### ಕಡಿಮೆ ಶಬ್ದದ ಹಾರ್ನ್, ಯಂತ್ರ ಬಳಸಿ

ವಾಹನ ಸವಾರರು ಹೆಚ್ಚಿನ ಶಬ್ದ ಮಾಡುವ ಅಥವಾ ತಮಗಿಷ್ಟ ಬಂದ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬಾರದು. ಬದಲಿಗೆ ಕಡಿಮೆ ಸದ್ದು ಮಾಡುವ ಹಾರ್ನ್ (ಗರಿಷ್ಠ 65 ಡೆಸಿಬೆಲ್) ಹಾಗೂ ಸರ್ಕಾರ ನಿಗದಿಪಡಿಸಿರುವ ಹಾರ್ನ್‌ಗಳನ್ನು ಅಳವಡಿಸಿಕೊಳ್ಳಬೇಕು.

### ಜನ ಜಾಗೃತಿಯಲ್ಲಿ ಪಾಲ್ಗೊಳ್ಳಿ

ಸ್ವಯಂಸೇವಾ ಸಂಘಸಂಸ್ಥೆಗಳು, ವಿದ್ಯಾರ್ಥಿಗಳು ಸರ್ಕಾರ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಹಮ್ಮಿಕೊಳ್ಳುವ ಶಬ್ದಮಾಲಿನ್ಯ ನಿಯಂತ್ರಣ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಬಹುದು.

### ಸ್ವಯಂ ನಿಯಂತ್ರಣ ಇರಲಿ

ಕೈಗಾರಿಕೆಗಳ ಮಾಲೀಕರು ಸಹ ಕಡಿಮೆ ಶಬ್ದ ಮಾಡುವ ಯಂತ್ರಗಳನ್ನು ಅಳವಡಿಸಿಕೊಳ್ಳಬೇಕು.

### ಧ್ವನಿವರ್ಧಕ ಶಬ್ದದ ಮಟ್ಟ ಕಡಿಮೆ ಮಾಡಿ

ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಧ್ವನಿವರ್ಧಕದ ಶಬ್ದ ಮಿತಿಯನ್ನು ಪಾಲಿಸಿರಿ. ಅತಿಶಬ್ದ ಖಂಡಿತ ಅನಾರೋಗ್ಯ ಉಂಟು ಮಾಡುತ್ತದೆ.

### ಮಿತಿ ಮೀರಿದರೆ ದಂಡ ಸಂಗ್ರಹ

ಟ್ರಾಫಿಕ್ ಸಿಗ್ನಲ್‌ಗಳು ಹಾಗೂ ಸಂಚಾರ ದಟ್ಟಣೆ ಹೆಚ್ಚಿರುವ ಪ್ರದೇಶಗಳಲ್ಲಿ ಅನಾವಶ್ಯಕವಾಗಿ ಹಾರ್ನ್ ಮಾಡುವವರನ್ನು ಮೋಟಾರು ವಾಹನಗಳ ಕಾಯಿದೆ ಅನ್ವಯ ಆರ್‌ಟಿಒ ಅಧಿಕಾರಿಗಳು ಪತ್ತೆ ಹಚ್ಚಿ ದಂಡ ವಿಧಿಸುವ ಅಧಿಕಾರ ಪಡೆದಿರುತ್ತಾರೆ.

## ಶಬ್ದಮಯ ದಿನಚರಿ ನಮಗೆ ಬೇಡ


ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ

ಪರಿಸರ ಭವನ, ಚರ್ಚ್ ಸ್ಟ್ರೀಟ್ ಬೆಂಗಳೂರು 560001

ವೆಬ್‌ಸೈಟ್: www.kspcb.gov.in

ಫೇಸ್‌ಬುಕ್ ಪುಟ: kspcbofficial

RNI No: 13348/1959. Title Code: KARBIL00285. Posted at Periodical Rate Rs. 2/-
Date of Publishing 28th of Every Month
Posted at: Bengaluru PSO, Mysore Road, Bengaluru-26 on 28th & 30th of every month (No. of Pages: 36)




**If not delivered, please return to :**
**THE EDITOR, Karnataka Scout & Guide**
**State Headquarters, Shanthi Gruha**
**#39, Palace Road, Bengaluru - 560 001**
**Ph.: 080-22260017, 22267470**
**e-mail.: info@bsgkarnataka.org**
**www.bsgkarnataka.org**

Published, Editor & Owened by: K. Gangappa Gowda belongs to: Bharat Scouts and Guides, Karnataka, No.39, Shanthi Gruha Palace Rd, Bengaluru 560 001. Published at: Bharat Scouts and Guides, Karnataka, No.39, Shanthi Gruha Palace Road, Bengaluru-560 001
Printed by: L. Lingappa at Sathyasri Printers Pvt. Ltd., 16/1, 3rd Cross, 2nd Main, Kasturiba Nagar, Mysore Road, Bengaluru-26